UNIVERSAL LIBRARY
OU_200338
UNIVERSAL LIBRARY

# ಸ್ವಲ್ಪ ನಗಬಾರದೇ?

ಹಾಗೆಯೆ,
ಸ್ವಲ್ಪ ಅಳಬಾರದೆ?,

ಎಚ್. ವಿ. ಸುಬ್ಬರಾಯಾನುಜನಿಂದ
ಸಂಗ್ರಹಿಸಲ್ಪಟ್ಟುದು.

*All Rights reserved.*

ಸರಸ್ವತೀ ಪ್ರಿಂಟಿಂಗ್ ವರ್ಕ್ಸ್, ಲಿಮಿಟೆಡ್, ಮಂಗಳೂರು.

1931.

ಬೆಲೆ ೮ ಆಣೆ.

# ವಾಚಕರಲ್ಲಿ.

ನಮ್ಮ ಜಿಲ್ಲೆಯ ಸುಪ್ರಸಿದ್ಧವಾದ ಉಡುಪಿಯ 'ಶ್ರೀಕೃಷ್ಣ ಸೂಕ್ತಿ' ವಾರಪತ್ರಿಕೆಯಿಂದ ನಗಿಸುವ ಕೆಲವು ಸಣ್ಣ ಕಥೆಗಳನ್ನೂ, ಇತರ ಲೇಖಗಳನ್ನೂ ಸಂಗ್ರಹಿಸಿ ಈ ಗ್ರಂಥವನ್ನು ಪ್ರಕಟಿಸಿದೆ. ರಸಿಕಶಿರೋಮಣಿಗಳಾದ ಕನ್ನಡಿಗರು ಈ ಪುಸ್ತಕವನ್ನೋದಿ, ಆನಂದಿಸಿ ತನ್ಮೂಲಕ ಕನ್ನಡ ನುಡಿಯನ್ನು ಪ್ರೋತ್ಸಾಹಿಸಲೆಂದು ಹಾರೈಕೆ.

'ಸೂಕ್ತಿ' ಪತ್ರಿಕೆಯಿಂದ ಕತೆಗಳನ್ನೂ, ಲೇಖಗಳನ್ನೂ ಎತ್ತಲು ಅಪ್ಪಣೆ ಕೊಟ್ಟ ಆ ಪತ್ರಿಕಾಕರ್ತರಾದ ಶ್ರೀಮಾನ್ ಎನ್. ರಾಜಗೋಪಾಲಕೃಷ್ಣರಾಯರಿಗೂ, ಪುಸ್ತಕವನ್ನು ಅಂದವಾಗಿ ಅಚ್ಚು ಹಾಕಿಸಿಕೊಟ್ಟ 'ಸರಸ್ವತೀ ಮುದ್ರಾಲಯ'ದ ಮುಖ್ಯಾಧಿಕಾರಿಗಳಿಗೂ ಸಂಗ್ರಹಕರ್ತನು ಕೃತಜ್ಞನು.

ಮಂಗಳೂರು,
ತಾ. 26-5-31.

ಸಂಗ್ರಹಕರ್ತ.

# ಉಲಾಯು ಶಾಸ್ತ್ರಿ.

[ರಂಗಸ್ಥಳ— ಬೆಂಗಳೂರಿನಲ್ಲಿ ಊಟದ ಮನೆ.]

[ಗಂಗಾಧರ ಶಾಸ್ತ್ರಿಗಳೂ, ಶಾನುಭೋಗ ವೆಂಕಪ್ಪಯ್ಯನವರೂ ಭೋಜನಮಾಡುತ್ತಿರುವರು.]

**ಗಂಗಾ:**—(ತೇಗು ಬಿಡುತ್ತ ಜುಟ್ಟನ್ನು ನೀವಿಕೊಂಡು) 'ಕರಣಿಕರೇ! ಹೆಹೆಹೆ! ಬಹು ದಿವ್ಯವಾಗಿದೆ! ದಿವ್ಯವಾಗಿದೆ ಮೊಸರು! ಹಸುವಿನದೇ?'

**ವೆಂಕ:**—'ಹಸುವಿನದು ಇಷ್ಟು ಗಟ್ಟಿಯಾಗಿರುತ್ತೆಯೇ? ಎಮ್ಮೆಯ ಮೊಸರು. ಶಾಸ್ತ್ರವನ್ನು ತಲೆಕೆಳಗು ಮಾಡಿರುವ ನೀವು ಇಷ್ಟು ಮಾತ್ರ ತಿಳಿಯದೆ ಹೋದಿರಾ?'

**ಗಂಗಾ:**—(ತನ್ನಲ್ಲಿ) 'ಇವನು ನನಗೇ ಷಹ ಕೊಟ್ಟನಲ್ಲ! ಇರಲಿ.' (ಪ್ರಕಾಶವಾಗಿ) 'ಮೊದಲು ಒಬ್ಬಟ್ಟಿಗೆ ಬಡಿಸಿದ ತುಪ್ಪವು ಕೂಡಾ ಎಮ್ಮೆಕಾಸಿದ ತುಪ್ಪವೆಂದೇ ತೋರುತ್ತದೆ.'

**ವೆಂಕ:**—(ನಕ್ಕು) 'ಎಮ್ಮೆಯನ್ನು ಕಾಸಿ ಯಾರಾದರೂ ತುಪ್ಪ ಮಾಡುವುದುಂಟೇ? ನಿಮ್ಮ ಶಾಸ್ತ್ರಜ್ಞಾನವೂ, ಈ ಕಾಲದಲ್ಲಿ 'ಬಿ. ಎ. ಪ್ಯಾಸ್'ಮಾಡಿ ಬರುವ ಕೆಲವರ ಜ್ಞಾನವೂ ಎರಡೂ ಒಂದೇ ಆಗಿದೆ. ಮನೆಯಲ್ಲಿ ಮೊಸರು ಕಡೆದು ಬೆಣ್ಣೆಮಾಡಿ ಕಾಸಿದ ತುಪ್ಪ.'

**ಗಂಗಾ:**—(ನಾಚಿಕೆಪಟ್ಟು, ತನ್ನಲ್ಲಿ) 'ಇನ್ನೊಂದು ಮಾತನ್ನಾದರೂ ಕೇಳಿ ನೋಡುತ್ತೇನೆ. ಅದೊಂದರಲ್ಲಿ ನನ್ನ ಹಿಂದಿನ ಎರಡು ತಪ್ಪುಗಳೂ ಮುಚ್ಚಿ ಹೋಗುತ್ತವೆ.' (ಪ್ರಕಾಶವಾಗಿ) 'ಕರಣಿಕರೇ! ಇದು ಹೆಣ್ಣು ಹೆಂಗಸರು ಕಾಸಿದ ತುಪ್ಪವೆಂದು ತೋರುತ್ತದೆ.'

**ವೆಂಕ:**—(ಘೋಳ್ ಎಂದು ನಕ್ಕು,) 'ಹೆಣ್ಣುಹೆಂಗಸರು ಕಾಯುಸುವುದೆಂದರೇನು? ಶಾಸ್ತ್ರಿಗಳೇ! ಗಂಡುಹೆಂಗಸರೆಂದು ನಿಮ್ಮ ಮನೆಯಲ್ಲಿ ಯಾರಾದರೂ ಉಂಟೇ? ಬಹಳ ಚೆನ್ನಾಗಿದೆ! ಬಹಳ ಚೆನ್ನಾಗಿದೆ! ನೀವು ಇಷ್ಟು ಶಾಸ್ತ್ರ ಓದಿದ್ದಕ್ಕೆ ಇದೇ ಫಲ! ನಿಮಗೆ ಹೆಸರಿಟ್ಟವರೂ ಚೆನ್ನಾಗಿಯೇ ಇಟ್ಟಿದ್ದಾರೆ.'

**ಗಂಗಾ:**—'ಏನು! ಅದರಲ್ಲಿ ಕೊರತೆಯೇನು? ದೇವರ ಹೆಸರು. ಗಂಗಾಧರ ಶಾಸ್ತ್ರಿ ಎಂಬುದು ತಪ್ಪೇ,—ವೆಂಕಪ್ಪಯ್ಯನವರೇ?'

**ವೆಂಕ:**—ತಪ್ಪೇನೂ ಇಲ್ಲ. ಆ ಹೆಸರು ಬಹಳ ಸರಿಯಾಗಿದೆ ಯೆಂದು ಹೇಳಿದೆನು.'

**ಗಂಗಾ:**—'ಏನು ಹಾಗೆಂದರೆ—?'

**ವೆಂಕ:**—'ಮತ್ತೇನೂ ಇಲ್ಲ. ಗಂಗಾ=ನೀರನ್ನು, ಧರ=ಹೊರುವ —ಇನ್ನೇನು ಹೇಳಲಿ?——ಶಾಸ್ತ್ರಿ. ಕೋಪಿಸಿಕೊಳ್ಳಬೇಡಿ. ಸ್ನೇಹದ ಪ್ರೀತಿಯ ಮೇಲೆ ಹೇಳಿದೆನು.'

**ಗಂಗಾ:**—(ತುಂಬ ನಾಚಿಕೆಪಟ್ಟು, ತನ್ನಲ್ಲಿ) 'ಇವನು ನನ್ನನ್ನು ಮೆಲ್ಲಗೆ ಅಡ್ಡಬುಡುಕನೆಂದು ಕರೆದು, ಅಲ್ಲಾಟಪಲ್ಲಾ ಶಾಸ್ತ್ರಿಯ ಕೆಳಗೆ ಕಟ್ಟಿಹಾಕಿಬಿಟ್ಟನು! ಏನು ಮಾಡಲಿ? ಎಲೆ ಬಿಟ್ಟು ಏಳುವುದರೊಳಗಾಗಿ ನನ್ನ ಪಾಂಡಿತ್ಯವನ್ನು ಇವನಿಗೆ ವಿಶದಪಡಿಸಬೇಕು.'—(ತಲೆಯೆತ್ತಿ ನೋಡಿ)—'ಅಟ್ಟದ ಮೇಲೆ ಬೇಕಾದಷ್ಟಿವೆ ಕುಂಬಳಕಾಯಿಗಳು. ಇವನಿಗೆ ಅರ್ಥ ತಿಳಿಯದಂತೆ, ಕೂಷ್ಮಾಂಡಗಳು ಇಷ್ಟೆಲ್ಲಿಂದ ಬಂದುದೆಂದು ಕೇಳಲೇ? ಬೇಡಬೇಡ. ಈ ಮಾತಿಗೆ ಇವನಿಗೆ ಅರ್ಥ ತಿಳಿಯದೆ ಹೋದರೂ, ಅಟ್ಟದ ಮೇಲೆ ನಾನು ನೋಡಿದುದನ್ನು ಗ್ರಹಿಸಿ, ಹೇಳಿಬಿಟ್ಟಾನು. ಏನಾದರೂ ಗೂಢವಾದ ಪ್ರಶ್ನೆಯನ್ನು ಮಾಡಬೇಕು.'—(ಆಲೋಚಿಸಿ)—'ಇಷ್ಟು ಕುಂಬಳಕಾಯಿಗಳಿರುವುದನ್ನು ನೋಡಿದರೆ, ಇವನಿಗೆ ಗದ್ದೆ—ಹೊಲ—ವ್ಯವಸಾಯ—ತುಂಬ ಇರುವ ಹಾಗಿದೆ. ಎಷ್ಟು ಜತೆ ಎತ್ತು ಇದೆಯೆಂದು ಕೇಳಲೇ? ಹೀಗೆ ಕೇಳಿದರೆ, ತಿಳಿದುಹೋಗು

ತ್ತದೆ. ಎಷ್ಟು ವೃಷಭಗಳಿವೆಯೆಂದು ಕೇಳುತ್ತೇನೆ. ಬೇಡ. ಆ ಮಾತೂ ತಿಳಿದುಹೋಗುತ್ತೆ. ಎಷ್ಟು ಎಮ್ಮೆ ಕೋಣಗಳಿವೆಯೆಂದು ಸಂಸ್ಕೃತದಲ್ಲಿ ಕೇಳುತ್ತೇನೆ. ಎಮ್ಮೆಗೆ ಸಂಸ್ಕೃತದಲ್ಲಿ ಏನು ಹೇಳುತ್ತಾರೆ?— ಮಹಿಷ.— ಮಹಿಷ ಎಂದರೆ ತಿಳಿದುಹೋಗುತ್ತೆ. ಇದಕ್ಕಿಂತ ದೊಡ್ಡ ಮಾತು ಹಾಕ ಬೇಕು. ಎಲ್ಲಿ? ನಿಘಂಟುವೆಲ್ಲಿ? ಅಮರ ಎಲ್ಲಿಯಪ್ಪಾ! ಈ ಹಾಳಾದ ಅಮರ ಸಮಯಕ್ಕೆ ಸರಿಯಾಗಿ ನೆನಪಿಗೆ ಬರುವುದಿಲ್ಲ. ಭಗವಂತಾ! ಜ್ಞಾಪಕವಾಯಿತು! ಈ ಹೊತ್ತು ನನ್ನ ಪಾಲಿನ ದೇವರಿದ್ದಾನೆ.— 'ಲುಲಾಯೋ ಮಹಿಷೋವಾಹದ್ವಿಷತ್ಕಾಸರ ಸೈರಿಭಾಃ' ಇತ್ಯಮರಃ.—ಬಹು ದಿವ್ಯವಾಗಿದೆ! 'ಲುಲಾಯ' ಎನ್ನುವ ಪದ.' (ಪ್ರಕಾಶವಾಗಿ) 'ಕರಣಿಕರೇ! ತಮ್ಮಲ್ಲಿ ಲುಲಾಯಗಳು ತುಂಬ ಇರುವ ಹಾಗಿದೆ?'

**ವೆಂಕ:**—(ತನ್ನಲ್ಲಿ) 'ಇವನು ಯಾವುದೋ ಮಹಾಕವಿಪ್ರಯೋಗ ಮಾಡಿದ ಹಾಗೆ ಕಾಣುತ್ತೆ. 'ಲುಲಾಯ' ಎನ್ನುವುದು ವ್ಯಾಸಘಟ್ಟದ ಹಾಗೆ ಇದೆಯಲ್ಲ! ಎಷ್ಟು ಆಲೋಚಿಸಿದರೂ ಅರ್ಥವಾಗುವ ಹಾಗಿಲ್ಲ. ಅರ್ಥ ಕೇಳಿದರೆ ನನ್ನ ಪಾಂಡಿತ್ಯಕ್ಕೆ ಭಂಗ ಬರುವ ಹಾಗಿದೆ. ಹೇಗಾ ದರೂ ಬುದ್ಧಿಬಲದಿಂದ ನಾನಾ ಯೋಚನೆಮಾಡಿ ಅರ್ಥವನ್ನು ಕಂಡು ಹಿಡಿಯಬೇಕು. ಅವನನ್ನು ಕೇಳಬಾರದು.'—(ಆಲೋಚಿಸಿ)— 'ಓಹೋಹೋ! ಆ ಪದಕ್ಕೆ ಈಗ ಅರ್ಥ ಗೊತ್ತಾಯಿತು. ಮಾರ್ಕ ಶ್ರೇಷ್ಠನಾಗಿ ಹುಟ್ಟಿ,—ಇಷ್ಟು ಮಾತ್ರ ಗ್ರಹಿಸದೆ ಹೋದರೆ, ನನ್ನ ಬುದ್ಧಿ ವಿಶೇಷವನ್ನು ಸುಡಬೇಕು. ಇವನು ಅಟ್ಟದ ಕಡೆಯೇ ಬಹಳ ಹೊತ್ತು ನೋಡಿ, ಈ ಪ್ರಶ್ನೆ ಹಾಕಿದ್ದಾನೆ. 'ಲುಲಾಯ' ಎಂದರೆ ಕುಂಬಳಕಾಯೇ ಆಗಿರಬೇಕು. ಈ ವಿಷಯವನ್ನು ನಾನು ಆಲೋಚನೆ ಮಾಡಿ ಹೇಳಿದ ಹಾಗಿರಕೂಡದು.' (ಪ್ರಕಾಶವಾಗಿ) 'ಶಾಸ್ತ್ರಿ ಮಹಾಶಯರೇ! ಏನು ಕೇಳಿದಿರಿ? ನನ್ನ ಮಗನ ಮದುವೆ ಯೋಚನೆಯಲ್ಲಿದ್ದೆನು. ನೀವು ಹೇಳಿದ್ದು ಕೇಳಿಸಲಿಲ್ಲ.'

**ಗಂಗಾ:**—'ಲುಲಾಯಗಳು ನಿಮ್ಮಲ್ಲಿ ತುಂಬ ಇರುವ ಹಾಗೆ ಕಾಣುತ್ತದೆ,—ಎಂದು ಹೇಳಿದೆನು.'

**ವೆಂಕ:**—'ಲುಲಾಯುಗಳೇ? ಅವುಗಳಿಗೇನು,—ಹೇಳಿ. ಎಷ್ಟೋ ಇವೆ. ಇದ್ದರೂ ಏನು? ನಮ್ಮ ಮನೆಯಲ್ಲಿ ಪಲ್ಯಕ್ಕೆ ಒಂದು ವರ್ಷಕ್ಕೆ ಕೂಡ ಸಾಲದು. ಸಾಲದ್ದಕ್ಕೆ ನಮ್ಮ ಹುಡುಗನ ಮದುವೆ ಬೇರೆ ಬರುತ್ತೆ.'

**ಗಂಗಾ:**—(ತನ್ನಲ್ಲಿ) 'ಇಷ್ಟು ಕಠಿಣವಾದ ಪದವನ್ನು ಉಪಯೋಗಿಸಿದರೂ ಕೂಡ, ಇವನು ಅದರ ಅರ್ಥವನ್ನು ಸರಿಯಾಗಿ ಗ್ರಹಿಸಿ, ಹೇಳಿಬಿಟ್ಟನು. ಮಾರ್ಕರು ಕನ್ನಡದಲ್ಲಿ ಕವಿತ್ವ ಮಾಡುವುದು ಸರ್ವಸಾಧಾರಣ. ಆದುದರಿಂದಲೇ ಅವರಿಗೆ ಅಮರತ್ರಿಕಾಂಡವೂ ನಲ್ಲಿಯ ನೀರಿನ ಹಾಗೆ ಸುರಿಯುತ್ತಿರುತ್ತದೆ. ಅದು ಹೇಗಾದರೂ ಇರಲಿ. ಈ ದಿನ ನನಗೆ ಎಮ್ಮೆಯ ಮಾಂಸ ತಿನ್ನುವವರ ಮನೆಯಲ್ಲಿ ಊಟಕ್ಕೆ ಗಂಟಿಕ್ಕಿತಲ್ಲ! ಅಯ್ಯೊ! ಇದಕ್ಕೇನು ಪ್ರಾಯಶ್ಚಿತ್ತವಿದೆಯೋ–ನನಗೆ ಬೇರೆ ಗೊತ್ತಿಲ್ಲ. ನಾನು ಇಲ್ಲಿ ಊಟಮಾಡಿದ ಸಂಗತಿಯನ್ನು ಯಾರಲ್ಲಿಯೂ ಹೇಳಕೂಡದು. 'ಇಲ್ಲಿ ಊಟಮಾಡಲಿಲ್ಲ.'—ಎಂದು ಒಂದು ಸುಳ್ಳು ಹೇಳಿದರೆ, ಎಲ್ಲಾ ತೀರಿಹೋಗುತ್ತೆ. ಎಲೆ ಬಿಟ್ಟುಬಿಟ್ಟು, ಮೊದಲು ಎದ್ದು ಹೋಗಬೇಕು.' (ಎಂದು ಏಳುತ್ತಾನೆ.)

**ವೆಂಕ:**—(ಕೈಹಿಡಿದೆಳೆದು) 'ಆ ಸ್ವಲ್ಪ ಅನ್ನ ತಿಂದುಬಿಡಿರಿ. ಯಾಕೆ ಹಾಗೇ ಎದ್ದು ಹೋಗುತ್ತೀರಿ? ಕ್ಷಾಮಕಾಲದಲ್ಲಿ ಅನ್ನ ಹೀಗೆ ಚೆಲ್ಲುವುದುಂಟೇ?'

**ಗಂಗಾ:**—'ನನಗೆ ವಿಪರೀತ ಹೊಟ್ಟೆನೋವು. ಬೇಗ ಹೋಗಬೇಕು.' (ಎಂದು ಎದ್ದು, ಓಡಿಹೋಗುತ್ತಾನೆ.)

---

[೨. ರಂಗಸ್ಥಳ—ಮ್ಯಾಜಿಸ್ಟ್ರೇಟ್ ಕೋರ್ಟು.]

[ಮ್ಯಾಜಿಸ್ಟ್ರೇಟ್ ಬಳಿಗೆ ಫಿರ್ಯಾದಿ ವೆಂಕಪ್ಪಯ್ಯನೂ, ಸಾಕ್ಷಿಗಳ ಸಹಿತನಾದ ಅಪರಾಧಿ ಗಂಗಾಧರ ಶಾಸ್ತ್ರಿಯೂ ಬರುತ್ತಾರೆ.]

**ಮ್ಯಾಜಿ:**—'ಏನಯ್ಯಾ? ಶಾಸ್ತ್ರಿ! ಇವನು ನಿನ್ನ ಮೇಲೆ ತಂದ ಮಾನನಷ್ಟದ ದಾವಾ ಪೂರಾ ಋಜುವಾತಾಗಿದೆ. ಇವನು ಎಮ್ಮೆಯ ಮಾಂಸ ತಿನ್ನುವನೆಂದು ಪ್ರಚಾರಮಾಡಿದುದುಂಟೋ, ಇಲ್ಲವೊ?'

**ಗಂಗಾ:**—'ನಾನು ಒಬ್ಬರಲ್ಲಿಯೂ ಹೇಳಲಿಲ್ಲ;—ಮಹಾಸ್ವಾಮಿ! ಈತನು ತಾನು ಎಮ್ಮೆಗಳನ್ನು ಪಲ್ಯಕ್ಕೋಸ್ಕರ ತರಿಸಿಕೊಂಡಿರುವೆನೆಂದು ನನ್ನಲ್ಲಿ ಹೇಳಿದನು. ಅದನ್ನು ನಾನು ಹೋಗಿ ಗುಟ್ಟಾಗಿ ನನ್ನ ಹೆಂಡತಿಯ ಬಳಿಯಲ್ಲಿ ಹೇಳಿದೆನು. ಅದು ಹೊರತು, ಮತ್ತೆ ಯಾವ ಪಾಪವೂ ನನಗೆ ಗೊತ್ತಿಲ್ಲ;—ದೇವರು! ಆ ಸಂಗತಿ ಊರಿಗೆಲ್ಲ ಹೇಗೋ ಹರಡಿ ಬಿಟ್ಟಿತು. ಪಾಪಕಾರ್ಯವು ಮುಚ್ಚುಮರೆಯಾಗುವುದಿಲ್ಲ;—ಮಹಾ ಸ್ವಾಮಿ!'

**ವೆಂಕ:**—'ನಾನೇ? ನಾನೇ? ನಾನು ಎಮ್ಮೆಗಳನ್ನು ಪಲ್ಯ ಮಾಡು ವುದಕ್ಕೆ ತರಿಸಿದ್ದೇನೆಂದು ನಿನ್ನಲ್ಲಿ ಹೇಳಿದೆನೇನಯ್ಯಾ?'

**ಗಂಗಾ:**—'ಆಹಾ! ಅಹುದು! ನೀನು ಹೇಳಲಿಲ್ಲವೆ? ಅಕ್ಷರಶಃ ನೀನೇ ಹೇಳಿದೆ. ನಾನು ನಿಮ್ಮಲ್ಲಿ 'ಲುಲಾಯಗಳು ಬಹಳ ಇರುವ ಹಾಗಿದೆಯಲ್ಲ'–ಎಂದು ಕೇಳಿದಾಗ, ಅವು ಪಲ್ಯಕ್ಕೇ ಸಾಲದೆಂದು ನೀನು ನನ್ನಲ್ಲಿ, ಹೇಳಲಿಲ್ಲವೇನಯ್ಯಾ! ನೀನು ಮಕ್ಕಳುಮರಿ ಉಳ್ಳವನಲ್ಲ!— ಹಾಗನ್ನಲಿಲ್ಲವೆಂದು ರಾಮಾಯಣವನ್ನು ತಲೆಯ ಮೇಲಿಟ್ಟುಕೊಂಡು, ಪ್ರಮಾಣ ಮಾಡು; ನೋಡೋಣ!'

**ವೆಂಕ:**—'ಆಹಾ ಹಾ ಹಾ! ನಿನ್ನ ಪಾಂಡಿತ್ಯವು ಬಡಿದುಕೊಂಡ ಹಾಗೇ ಇದೆ. ಲುಲಾಯಗಳೆಂದರೆ, ಕುಂಬಳಕಾಯಲ್ಲವೇನಯ್ಯಾ?'

**ಗಂಗಾ:**—'ನಿನ್ನ ಪಾಂಡಿತ್ಯ ಕುಟ್ಟಿಕೊಂಡ ಹಾಗೇ ಇದೆ. ಲುಲಾ ಯಗಳೆಂದರೆ—'ಎಮ್ಮೆಗಳು.' ಯಾರನ್ನು ಕರೆದು ಕೇಳುತ್ತೀರೋ—ಕೇಳಿ. ನನ್ನ ಅರ್ಥ—'ಅಲ್ಲ'— ಎಂದು ಹೇಳಿಸಿಬಿಡಿ; ನೋಡೋಣ!'

**ಮ್ಯಾಜಿ:**—'ಏನಿರಯ್ಯಾ? ನೀವಿಬ್ಬರೂ ಹೀಗೆ ಪಬ್ಲಿಕ್ ಕೋರ್ಟಿ ನಲ್ಲಿ ವಿವಾದ ಮಾಡುತ್ತಿದ್ದೀರಿ? 'ಕಂಟೆಮ್ಪ್ಟ್ ಆಫ್ ಕೋರ್ಟ್' ಮೇಲೆ

ನಿಮಗೆ ಶಿಕ್ಷೆ ಮಾಡಿಯೇನು. ಎಚ್ಚರ! ಓ, ಶಾಸ್ತ್ರೀ! ಕೋರ್ಟಿನವರು ಕೇಳಿದ್ದಕ್ಕೆ ಜವಾಬು ಹೇಳು. ಆ ಮಾತೇನು? ಲು——ಲಾ——?'

**ಗಂಗಾ:**—'ಲುಲಾಯು'—ಮಹಾಸ್ವಾಮಿ! ನಾನು 'ಲುಲಾಯು' ಎಂದರೆ, ಈ ಮಹಾನುಭಾವನು ಕುಂಬಳಕಾಯಿ ಎಂದು ಅರ್ಥಮಾಡಿ ಕೊಂಡನಂತೆ!'

**ವ್ಯಾಜಿ:**—'ಈ ಮಾತು ಯಾವಾಗಲೂ ಕೇಳಿದ ಹಾಗಿಲ್ಲವಲ್ಲ! ಇದು ಕನ್ನಡಮಾತೇ? ಇಂಗ್ಲಿಷ್ ಪದದ ಹಾಗೆ ಕಾಣುತ್ತದೆ. ಡಿಕ್ಷನರಿ ನೋಡಬೇಕು. ಸ್ಪೆಲ್ಲಿಂಗ್ ಹೇಗಯ್ಯಾ?'

**ಗಂಗಾ:**—'ಸ್ಪೆಲ್ಲಿಂಗ್, ಮೂರಾಣೆ; ಮಹಾಸ್ವಾಮಿ! ಮೊನ್ನೆ ನಮ್ಮ ಹುಡುಗನಿಗೋಸ್ಕರ ಅಂಗಡಿಯಲ್ಲಿ ಮೂರಾಣೆಗೇ ತಂದುಕೊಟ್ಟೆ. ಲುಲಾಯು ಎಂಬುದು ಸಂಸ್ಕೃತಪದ;—ದೇವರು!'

**ವ್ಯಾಜಿ:**—'ಸಂಸ್ಕೃತ ಪದವೇ! ಹಾಗೆ ಹೇಳು. ಅದಕ್ಕೋಸ್ಕರವೇ, ಈ ಪದವು ನನಗೆ ಇಂಗ್ಲಿಷ್ ಡಿಕ್ಷನರಿಯಲ್ಲಿ ಎಲ್ಲಿಯೂ ನೋಡಿದ ಜ್ಞಾಪಕ ಬರಲಿಲ್ಲ. ಅಷ್ಟು ಕಷ್ಟವಾದ ಪದವನ್ನೇಕಯ್ಯಾ ಉಪಯೋಗಿಸಿದೆ? ನಾವು ಮಾತನಾಡುವುದು—ಒಬ್ಬರ ಮಾತು ಮತ್ತೊಬ್ಬರಿಗೆ ಅರ್ಥವಾಗುವುದಕ್ಕೋ, ಅಥವಾ ನಮ್ಮ ಪಾಂಡಿತ್ಯ ತೋರಿಸುವುದಕ್ಕೋ?'

**ಗಂಗಾ:**—'ನಮ್ಮದು ಪಂಡಿತಸಂಪ್ರದಾಯವಾದ್ದರಿಂದ, ನಮ್ಮ ಪಾಂಡಿತ್ಯ ತೋರಿಸುವುದಕ್ಕೋಸರ, ಸ್ವಲ್ಪ ಅಮರ ಪ್ರಯೋಗಮಾಡಿದೆನು;—ಮಹಾಸ್ವಾಮಿ! ಮತ್ತೇನೂ ಅಲ್ಲ.'

**ವ್ಯಾಜಿ:**—'ಏನಯ್ಯಾ ಇದು? ಶ್ರಾದ್ಧದ ಮಾತು ಎತ್ತುವ ಹಾಗೆ ಕಾಣುತ್ತದೆ.'

**ಗಂಗಾ:**—'ಅಲ್ಲ; ಮಹಾಸ್ವಾಮಿ! ಪಾಮರರು ಉಪಯೋಗಿಸುವ ಸಾಮಾನ್ಯ ಪದಗಳನ್ನೇ ನಾವೂ ಉಪಯೋಗಿಸಿದರೆ, ನಮ್ಮ ಪಾಂಡಿತ್ಯವೂ ನಮ್ಮ ಆಧಿಕ್ಯವೂ ಹೇಗೆ ಶೋಭಿಸೀತು—ಸ್ವಾಮಿ?'

**ಮ್ಯಾಜಿ:**—'ಆ ಮಾತು ಯಾವುದು? ಉಲಾಯುವೇ? ನನ್ನನ್ನು ಕೇಳಿದರೆ, ನೀನೇ ಬುದ್ಧಿಯಿಲ್ಲದ **ಉಲಾಯುದ** ಹಾಗೆ ಕಾಣುತ್ತಿರುವೆ ಯಲ್ಲ! ನಿನ್ನ ಹೆಸರೇನು?—ಗಂಗಾಧರಶಾಸ್ತ್ರಿ? ಗಂಗಾಧರಶಾಸ್ತ್ರಿ ಎನ್ನು ವುದಕ್ಕಿಂತ, ಈ ದಿನ ಮೊದಲ್ಗೊಂಡು ನಿನ್ನನ್ನು **'ಉಲಾಯುಶಾಸ್ತ್ರಿ'** ಎಂದು ಕರೆಯುತ್ತ ಬಂದರೆ, ಚೆನ್ನಾಗಿರುವ ಹಾಗೆ ಕಾಣುತ್ತದೆ.'

**ಒಬ್ಬ ಪ್ಲೀಡರ್:**—'ಉಲಾಯುಶಾಸ್ತ್ರಿ—ಎಂದರೆ ಅರ್ಥವೇನು?'

**ಇನ್ನೊಬ್ಬ ಪ್ಲೀಡರ್:**—'ಎಮ್ಮೆಕೋಣಶಾಸ್ತ್ರಿಯೆಂದರ್ಥ.'

**ಮತ್ತೊಬ್ಬ ಪ್ಲೀಡರ್:**—'ಆಹಾಹಾಹಾ! ಎಮ್ಮೆಕೋಣಶಾಸ್ತ್ರೀ! ಮೊಕದ್ದಮೆಯನ್ನು ನೋಡುವುದಕ್ಕೆ ಬಂದ ಈ ಹೈದಗಳು ನಗೆತಡೆಯ ಲಾರದೆ ಬೀದಿಯ ಕಡೆ ಓಡುತ್ತಿದ್ದಾರೆ;—ನೋಡು.'

**ಗಂಗಾ:**—'ಅಯ್ಯಾ! ಅಯ್ಯಾ! ಮ್ಯಾಜಿಸ್ಟ್ರೇಟರೇ! ಪರಾಮರ್ಶಿಸ ಬೇಕು. ಹುಡುಗರು ಕೂಡ, 'ಎಮ್ಮೆಕೋಣಶಾಸ್ತ್ರಿ'—'ಎಮ್ಮೆ ಕೋಣ ಶಾಸ್ತ್ರಿ' ಎಂದು ಬೀದಿಯಲ್ಲಿ ಕೂಗಿಕೊಳ್ಳುತ್ತಿದ್ದಾರೆ;—ನೋಡಿ. ತಾವು ಸ್ವಲ್ಪ ಒಂದು ಮಾತು ಹೇಳಿದಲ್ಲದೆ, ಅವರ ಬಾಯಿ ಕಟ್ಟುವುದಿಲ್ಲ. ನಾಳೆಯಿಂದ ನನ್ನನ್ನು ಈ ಪೋಕರಿ ಹುಡುಗರು ಬೀದಿಯಲ್ಲಿ ಕಂಡಾಗ ಲೆಲ್ಲ ಹಾಸ್ಯಮಾಡಿ ಕುಣಿದಾಡುತ್ತಾರೆ. ಈಗಲೇ ತಕ್ಕ ಬಂದೋಬಸ್ತು ಮಾಡಬೇಕು;—ಮಹಾಪ್ರಭೋ!'

**ಮ್ಯಾಜಿ:**—'ಗುಲಾಂ ಖಾನ್! ಆ ಅರಚುವ ಹೈದಗಳನ್ನು ಕೋರ್ಟಿನ ಇದಿರಿಗೆ ತಂದು ನಿಲ್ಲಿಸು.'

**ಗುಲಾಂ:**—'ಅಪ್ಪಣೆ.'

**ಮ್ಯಾಜಿ:**—'ನೀನು ತೋರಿಸಿದ ಪಾಂಡಿತ್ಯಕ್ಕೆ ನಿನಗೆ ತಕ್ಕ ಬಿರುದು ಲಭಿಸಿದೆ. ಅದು ಇಷ್ಟು ಮಂದಿ ಜನರ ಬಾಯಲ್ಲಿ ಬಿದ್ದ ಮೇಲೆ, ಶಾಶ್ವತವಾಗುವುದರಲ್ಲಿ ಸಂದೇಹವಿಲ್ಲ. ಅದಿರಲಿ! ನೀನು ರಹಸ್ಯವಾಗಿ ನಿನ್ನ ಹೆಂಡತಿಯೊಡನೆ ಹೇಳಿದ ಮಾತು ಊರಲ್ಲೆಲ್ಲ ಹೇಗೆ ಹರಡಿತಯ್ಯಾ?'

**ಗಂಗಾ:**—'ಅದರ ಮನೆ ಹಾಳಾಗ! ಮಹಾಸ್ವಾಮಿ! ಹೆಂಗುಸರಲ್ಲಿ ಹೇಳುವ ಗುಟ್ಟೆಲ್ಲ ಹೀಗೆಯೇ. ಅದೆಂದಿಗೂ ರಹಸ್ಯವಾಗಿರದು. ಪೂರ್ವದಲ್ಲಿ ಅದಕ್ಕೆ ಧರ್ಮರಾಯನ ಶಾಪ ಬಿದ್ದಿದೆ. ಅವಳು ಇನ್ನು ಯಾರಲ್ಲಿಯೂ ಹೇಳಬೇಡವೆಂದು, ತನ್ನ ತಂಗಿಯ ಹತ್ತಿರ ಕೈ ಮೇಲೆ ಕೈಹಾಕಿಸಿಕೊಂಡು ಹೇಳಿದಳು. ಆ ತಂಗಿಯೆನ್ನುವ ಪ್ರಾರಬ್ಧ! ಇದೇ ರೀತಿ ಇನ್ನೊಬ್ಬಳಲ್ಲಿ ಹೇಳಿದಳು. ಆ ಇನ್ನೊಬ್ಬಳು ಎನ್ನುವ ಮೂದೇವಿ ಮತ್ತೊಬ್ಬಳಲ್ಲಿ ಹೇಳಿದಳು. ಈ ಪ್ರಕಾರ, ಆ ಗುಟ್ಟು ಆ ಬಾಯಿಂದ— ಈ ಬಾಯಿ, ಈ ಬಾಯಿಂದ—ಊ ಬಾಯಿ, ಊ ಬಾಯಿಂದ—ಏ ಬಾಯಿ ಹೀಗೆ ಬಿದ್ದು ರಟ್ಟಾಗಿ ಹೋಯಿತು.'

**ಮ್ಯಾಜಿ:**—'ಇದೆಲ್ಲ ಬರಿಯ ಭ್ರಮೆಯಿಂದ ಉಂಟಾಯಿತೇ ಹೊರತು ಮತ್ತೇನೂ ಇಲ್ಲ. ಇದರಲ್ಲಿ ಯಾವ ದುರುದ್ದೇಶವೂ ಕಂಡು ಬರುವುದಿಲ್ಲವಾದ ಕಾರಣ ಈ ಮೊಕದ್ದಮೆಯನ್ನು 'ಡಿಸ್ಮಿಸ್' ಮಾಡಿದ್ದೇವೆ. ಓ ಶಾಸ್ತ್ರೀ! ಇನ್ನು ಮುಂದೆ ಯಾವಾಗಲೂ ನೀನು ಅತಿರೇಕ ಪಾಂಡಿತ್ಯದ ಪದಗಳನ್ನು ಉಪಯೋಗಿಸಬೇಡ. ಈಗಲಾದರೂ ಇದರಿಂದ ಬುದ್ಧಿ ತಂದುಕೋ. ನಿನ್ನನ್ನು ಕ್ಷಮಿಸಿ ಬಿಡುಗಡೆ ಮಾಡಿದ್ದೇವೆ;— ಹೋಗು.'

**ಗಂಗಾ:**—'ಅಪ್ಪಣೆ. ಅಪ್ಪಣೆ.'

[ಎಲ್ಲರೂ ಹೋಗುವರು.]

**'ಏಕಚಕ್ರಭಾಸ್ಕರ.'**

## ನವವಿದ್ಯೆ

'ಮ। ರಾಮನಾಥಯ್ಯನವರೇ! ಈ ಬಾರಿ ತಮಗೆ ಬಹುಮಾನವು ಲಭ್ಯವಾಗಲಿಲ್ಲವೆಂಬುದನ್ನು ತಿಳಿಸಲು ತುಂಬ ವ್ಯಸನವಾಗುತ್ತದೆ. ಮತ್ತೊಂದಾವೃತ್ತಿ ಪ್ರಯತ್ನಮಾಡಿದಲ್ಲಿ ತಮ್ಮ ಅದೃಷ್ಟ.

ಇಂತು ತಮ್ಮ ವಿಧೇಯ,

**ಮ್ಯಾನೇಜರ್.'**

ಇದೇ ರಾಮನಾಥಯ್ಯನವರಿಗೆ ಅಮೇರಿಕದಿಂದ ಬಂದ ಉತ್ತರ.

ರಾಮನಾಥಯ್ಯನವರು ಅಲ್ಪವೇತನದ ಸರಕಾರೀ ಉದ್ಯೋಗಸ್ಥರು. ಯಾರ ಪೂರ್ವಿಕರು ಸುಪ್ರಸಿದ್ಧರಾಗಿದ್ದರೋ ಅಂತವರಿಗೆ ಇಂತಹ ವೇತನವೆ? ಇಂತಹ ಚಾಕರಿಯೆ? ತಾತಮುತ್ತಾತಂದಿರೆಲ್ಲಾ ರಾಜಾಸ್ಥಾನದ ಪಂಡಿತರಾಗಿ ಎಷ್ಟೋ ಆದಾಯವುಳ್ಳವರಾಗಿದ್ದರು. ಆದರೇನು? ಎಷ್ಟು ದಿನ ಆ ಐಶ್ವರ್ಯವು ಶಾಶ್ವತ? ಆ ಕಾಲದ ರಾಜನೊಬ್ಬನಿಗೆ ವಿದ್ಯಾವಂತರನ್ನು ಇಟ್ಟುಕೊಂಡಿರುವುದು ಸಮಂಜಸವಲ್ಲದೆ ಹೋದುದರಿಂದ ವಂಶಪಾರಂಪರ್ಯವಾದ ಆ ಪಂಡಿತಗಿರಿಗೇ ಸೊನ್ನೆ ಬಿದ್ದು ರಾಮನಾಥಯ್ಯನವರ ತಾತಂದಿರ ತಲೆಗೇ ಪರ್ಯವಸಾನ ಹೊಂದಿತು.

ನಿರಾಯಾಸವಾಗಿ ಬರುತ್ತಿದ್ದ ಸಂಬಳಕ್ಕೂ, ಆ ಸಂಬಳದ ಜೊತೆಗೆ ಭತ್ಯಕ್ಕೂ, ಆಗಾಗ ದೊರೆಯುತ್ತಿದ್ದ ಹೆಚ್ಚುಗಟ್ಟಲೆಯ ದಕ್ಷಿಣಾದ್ರವ್ಯಕ್ಕೂ ಕಲ್ಲು ಬಿತ್ತು. ಆಸ್ಥಾನವನ್ನೇ ನಂಬಿದ್ದ ಪಂಡಿತರ ಗತಿ ಸ್ವಸ್ಥಾನವನ್ನು ಸೇರಲು ಉಪಕ್ರಮವಾಯ್ತು. ಕೊನೆಕೊನೆಗೆ ಘನಪಾಂಡಿತ್ಯವೆಲ್ಲಾ ಹೋಗಿ, ಮನೆಯಲ್ಲಿದ್ದ ಒಡವೆಗಳೆಲ್ಲಾ ವಿಕ್ರಯಿಸಲ್ಪಟ್ಟು ಹೊತ್ತುಹೊತ್ತಿನ ತುತ್ತಿಗೇ ಬಾಯ್ಬಿಡುವಂತಾಯ್ತು.

ಅನ್ನಕ್ಕೆ ಗತಿಯಿಲ್ಲದ ಪಾಂಡಿತ್ಯವಾರಿಗೆ ಬೇಕು? ವಿದ್ಯವಾರಿಗೆ ಬೇಕು? ಆಸ್ಥಾನವಾರಿಗೆ ಬೇಕು? ನೂತನ ವಿದ್ಯಾಭ್ಯಾಸವನ್ನು ಮಾಡಿ, ಮಾತೃಭಾಷೆಯನ್ನು ದೂರಮಾಡಿದ್ದರೆ ಜೀವನಕ್ಕೆ ಕೊರತೆ ಇತ್ತೆ? ಅಪ್ಪ ನಟ್ಟ ಆಲದ ಮರಕ್ಕೆ ನೇತು ಹಾಕಿಕೊಂಡಿದ್ದರೆ ಗತಿ ಏನು?

ರಾಮನಾಥಯ್ಯನವರ ತಾತಂದಿರಿಗೆ ಯೋಚನೆ ಹತ್ತಿತು. ಸಂಸಾರವೇ ಕಷ್ಟವಾಯ್ತು. ತಿಂಡಿಪೋತನಾಗಿ ತಿರುಗುತ್ತಿದ್ದ ಶುದ್ಧ ಶುಂಠಿಯಾದ ಮಗನೂ ಪ್ರಾಯಸ್ಥನಾದನು. ಲಗ್ನಕ್ಕೆ ಕಾಲವೂ ಬಂತು; ಮುಖ್ಯವಾದುದೇ ಲೋಪ! ಭಿಕ್ಷೆ ಬೇಡುವುದೆಂದರೆ ಮಾನಕ್ಕೆ ಸಾಲದು. ಹೇಗೋ ಮಾಡಿ ಯಾರನ್ನೋ ತಂದು ಗಂಟುಹಾಕಿದರು. ಪ್ರಸ್ತವೂ ಜರುಗಿತು.

ಆ ಬಾಲದಂಪತಿಗಳಿಗೆ ಒಬ್ಬ ಮಗನೂ ಸ್ವಲ್ಪಕಾಲದಲ್ಲಿಯೇ ಹುಟ್ಟಿದನು. ಆ ಮಗನೇ ತಮ್ಮ ಕಥಾನಾಯಕನಾದ ರಾಮನಾಥಯ್ಯ.

ರಾಮನಾಥಯ್ಯನು ಪುಣ್ಯವಂತನೆಂದೂ, ಅದೃಷ್ಟಶಾಲಿಯೆಂದೂ ನಾನು ಬರೆಯಲಾರೆ. ಏಕೆಂದರೆ, ಹುಟ್ಟಿದ ಮೂರು ತಿಂಗಳೊಳಗಾಗಿಯೇ ತನ್ನ ತಂದೆಯನ್ನು ಪರಲೋಕಯಾತ್ರೆಗೆ ಕಳುಹಿದನು. ಆರು ತಿಂಗಳಲ್ಲಿಯೇ ತಾಯಿಯನ್ನೂ ತಿಂದುಕೊಂಡನು. ಮಾತಾಪಿತೃಗಳಿಂದ ಬಿಡಲ್ಪಟ್ಟು ಅನ್ಯಪೋಷಣೆಗೆ ಸಿಕ್ಕುಬಿದ್ದವನನ್ನು ಅದೃಷ್ಟಶಾಲಿಯೆಂದು ಹೇಳಿದರೆ ವಾಚಕರೊಪ್ಪಿಯಾರೆ?

ರಾಮನಾಥಯ್ಯನವರ ತಾತಂದಿರಿಗೆ ತಾಪತ್ರಯವು ಹೆಚ್ಚಿತು. ಪುತ್ರಶೋಕವು ಸಹಿಸಕೂಡದಷ್ಟಾಯಿತು. ಪಾಂಡಿತ್ಯವೆಲ್ಲಾ ಮರೆತು, ಬ್ರಾಹ್ಮಣಾರ್ಥಕ್ಕೆ ತಕ್ಕಷ್ಟು ಮಂತ್ರಗಳು ಮಾತ್ರ ಎದೆಯಲ್ಲಿದ್ದು ಕೊನೆಗೆ ಅದೂ ಮರೆಯುತ್ತ ಬಂತು. ಸಂಪಾದನೆಗೆ ಕುಂದಕವುಂಟಾಯ್ತು. ಇಷ್ಟೊಂದು ಗಲಭೆಯಲ್ಲಿ ರಾಮನಾಥಯ್ಯನವರ ಪುರೋಭಿವೃದ್ಧಿಯನ್ನು ಹೇಗೆ ತಾನೇ ನಾವು ಬಯಸಬೇಕು?

ರಾಮನಾಥಯ್ಯನವರನ್ನು ಮುಂದಕ್ಕೆ ತರದಿದ್ದರೆ ಬದುಕಿದುದಕ್ಕೆ ಸಾರ್ಥಕವೇನು? ಪಂಡಿತವರ್ಯನಾದ ತಾತಯ್ಯನು ಕೊನೆಗೆ ಎಲ್ಲಿಯೋ ಒಂದು ಹೋಟಲಿನಲ್ಲಿ ಗುಪ್ತವಾಗಿ ಅಡುಗೆಗೆ ನಿಂತು ಕೈಯಲ್ಲಿ ಹತ್ತಿಪ್ಪತ್ತು ರೂಪಾಯಿಗಳನ್ನು ಸೇರಿಸಿಕೊಂಡು ಕೊನೆಗೆ ಸ್ವಂತ ಹೋಟಲೊಂದನ್ನು ಸ್ಥಾಪಿಸಿದನು.

ಪರಸ್ಥಳ. ಪಂಡಿತರ ಯೋಗ್ಯತೆಯನ್ನು ಯಾರು ಬಲ್ಲರು? ಬೋರ್ಡುಗಳನ್ನು ಹಾಕಿದರು. ವರ್ತಮಾನ ಪತ್ರಿಕೆಗಳಲ್ಲಿ ಬರೆದರು. ನೋಟೀಸುಗಳನ್ನು ಅಚ್ಚು ಮಾಡಿಸಿ ಊರಲ್ಲಿಯೆಲ್ಲಾ ಹಂಚಿದರು.—'ಒಳ್ಳೆಯ ಹೋಟೇಲ್! ಆರೋಗ್ಯಕರ! ರುಚಿಕರ!! ಮನೋಹರ!!!' ಆ ನೂತನ ವಿದ್ಯಾಸಾಮರ್ಥ್ಯದಿಂದ ಪಂಡಿತರ ಹೋಟಲಿಗೆ ಪರಸ್ಥಳದ ನೂರಾರು ವಿದ್ಯಾರ್ಥಿಗಳು ಗಿರಾಕಿಗಳಾಗಿ ಪ್ರತಿ ಮಾಸದಲ್ಲಿಯೂ ತಮ್ಮ ತಮ್ಮ ತಿಂಡಿಯ ಖರ್ಚು ಹತ್ತು ಹತ್ತು ರೂಪಾಯಿಗಳನ್ನು ಸಲಿಸತೊಡಗಿದ್ದರು. ಇದರಿಂದಲೇ ರಾಮನಾಥಯ್ಯನವರ ನೂತನ ವಿದ್ಯಾಭ್ಯಾಸಕ್ಕೆ ಅನುಕೂಲವಾದುದು.

A. B. C. D. ಗಳಾಯಿತು. ಲೋವರ್ ಸೆಕಂಡರಿ ಕ್ಲಾಸಾಯ್ತು. ನಾಲ್ಕನೆಯ ಫಾರಮಿನ ಪಾಠಕ್ಕೆ ಆರಂಭವಾಯಿತು. ಯೂನಿವರ್ಸಿಟಿಯ ರೂಲುಗಳು ದಿನಕ್ಕೊಂದು ಜಾರಿಗೆ ಬಂದುವು. ರಾಮನಾಥಯ್ಯನವರು ಮೆಟ್ರಿಕ್ಯುಲೇಷನ್ನಿಗೆ ಬಂದೊಡನೆ ಸದ್ಗೃಹಸ್ಥರೊಬ್ಬರು ತಮ್ಮ ಮಗಳನ್ನು ಕೊಟ್ಟು ಲಗ್ನಮಾಡಿದರು.

ಕಾಲಕ್ರಮದಲ್ಲಿ ರಾಮನಾಥಯ್ಯನವರಿಗೆ ಮೆಟ್ರಿಕ್ಯುಲೇಷನ್ನು ಪ್ಯಾಸಾಯಿತು. ಅದರೊಡನೆ ಸರ್ವನಾಶವಾದ ಶೋಭನಪ್ರಸ್ತವೂ ಜರುಗಿತು. ಈ ಸಂತೋಷೋತ್ಸವವನ್ನು ನೋಡಿ, ಮುಂದೆ ಮಮ್ಮಗನ ಬಾಳ್ವೆಯನ್ನು ಅನುಭವಿಸಲು ಅದೃಷ್ಟವಿಲ್ಲದೆ ಹೋಗಿ ತಾತಂದಿರು ಕಾಲವಾದರು. ನಿರ್ಭಾಗ್ಯ ರಾಮನಾಥಯ್ಯನವರು ತಾವೇ ತಾವಾದರು.

ಚಿಕ್ಕ ಸಂಸಾರ. ಗಂಡ, ಹೆಂಡತಿ, ಒಂದು ಮಗು. ಹೆಂಡತಿ ಜಾನಕಮ್ಮನಂತೂ ಗೃಹಸ್ಥರ ಮಗಳೆಂದು ಮೊದಲೇ ಅರಿಕೆಮಾಡಿದ್ದೇವೆ. ಘನತೆಯುಳ್ಳ ಸೌಭಾಗ್ಯವತಿ; ಬುದ್ಧಿಮತಿಯಾದ ಒಲುಪುಗಾತಿ.— ಅಷ್ಟೇಕೆ? ಸಂಸಾರಕ್ಕೆ ತಕ್ಕ ಗುಣವುಳ್ಳ ಚೆನ್ನಾರಿಚೆಲುವೆ. ತನಗೊಂದು ಮಗುವಾಗುತ್ತಲೇ ತಾನು ತಂದೆಯ ಮನೆಯಲ್ಲಿರುವುದು ಯೋಗ್ಯತೆಗೆ ಕುಂದೆಂದು ತನ್ನ ಗಂಡನನ್ನು ಪೀಡಿಸತೊಡಗಿದಳು. 'ಮೆಟ್ರಿಕ್ಯುಲೇಷನ್ ಪ್ಯಾಸ್‌ಮಾಡಿದಿರೇ? ಸಾವಿರ ರೂಪಾಯಿ ಸಂಬಳ ಬರುವುದಿಲ್ಲವೆ? ನೀವೇಕೆ ಸುಮ್ಮನೆ ಕುಳಿತಿರುವಿರಿ?' ಎಂದಳು.

ರಾಮನಾಥಯ್ಯನವರಿಗೆ ನಾಚಿಕೆ ಹತ್ತಿತು. ಸಾವಿರ ರೂಪಾಯಿ ವ್ಯಯಮಾಡಿ ಕಲಿತ ವಿದ್ಯೆಗೆ ಸಾವಿರ ರೂಪಾಯಿಯ ಸಂಬಳವೆ? ಮೊದಲೇ ನಿರ್ಭಾಗ್ಯರಾದ ಅವರನ್ನು ಕೇಳುವರಾರು? ಮನೆತನದ ಘನತೆಯನ್ನು ತಿಳಿದಿದ್ದ ದೊಡ್ಡ ಮನುಷ್ಯರೊಬ್ಬರು ಡಿಸ್ಟ್ರಿಕ್ಟಾಫೀಸಿನಲ್ಲಿ ಎಲ್ಲಿಯೋ ಒಂದು 20 ರೂಪಾಯಿಯ ನೌಕರಿಯನ್ನು ಮಾಡಿಸಿಕೊಟ್ಟರು. ಆ ಸಂಬಳದಲ್ಲಿಯೇ ಗಂಡಹೆಂಡಿರು ಸಂಸಾರವನ್ನು ತಳ್ಳುತ್ತಿದ್ದರು. ಬುದ್ಧಿಮತಿಯಾದ ಜಾನಕಮ್ಮನು ಮಗುವಿನ ಪೋಷಣೆಗೋ ಮತ್ತೆ ಯಾವು

ದಕ್ಕೋ ತಿಂಗಳಿಗೊಂದಾವೃತ್ತಿ ತಪ್ಪದೆ ಒಂದು ರೂಪಾಯಿಯನ್ನು ಮಿಗಿಸಿ ಸೇವಿಂಗ್ಸ್‌ಬ್ಯಾಂಕಿನಲ್ಲಿಡುತ್ತಿದ್ದಳು. ಅದು ಈಗ ಒಂದು ನೂರು ರೂಪಾಯಿಯಾಗಿದೆ. ಬಡವರಿಗೆ ಒಂದು ದೊಡ್ಡ ಗಂಟು.

ಬೇಸಗೆಯ ಕಾಲ. ಹೊತ್ತಿಗೆ ಮುಂಚೆ ಊಟಮಾಡಿಕೊಂಡು ಎಲ್ಲರೂ ಕಚ್ಚೇರಿಗೆ ಹೋಗುತ್ತಿದ್ದರು. ರಾಮನಾಥಯ್ಯನವರೂ ಮತ್ತೊಬ್ಬರೂ ಜಟ್ಕಾಗಾಡಿಯಲ್ಲಿ ಹೊರಟರು. ಆಗ ತಾನೇ ಟಪ್ಪಾಲಿನಲ್ಲಿ ಬಂದಿದ್ದ ಪರದೇಶದ ಒಂದು ಕಾಗದವನ್ನು ನೋಡಿ, ಸ್ವಲ್ಪ ಹಸನ್ಮುಖಿಯಾಗಿ ಆ ಮತ್ತೊಬ್ಬರು—'ರಾಮನಾಥಯ್ಯನವರೆ! ಇನ್ನು ಬಿಡಿ! ನಿಮ್ಮ ಅದೃಷ್ಟವು ಖುಲಾಯಿಸಿತು! ಸುಲಭದಲ್ಲಿ ಸಾಹುಕಾರಿ!! ನಿಮ್ಮ ಭಾಗ್ಯವೇ ಭಾಗ್ಯ!!!'— ಎಂದು ಪತ್ರವನ್ನು ಅವರ ಕಡೆಗೆ ಎಸೆದರು.

ರಾಮನಾಥಯ್ಯನವರು ಕಷ್ಟಪಟ್ಟವರು. ಲಾಭವು ಬಂದರೆ ಯಾರಿಗೆ ಬೇಡ? ದಕ್ಷಿಣ ಅಮೇರಿಕದ ಚಿಲೀದೇಶದ ಒಂದು ಕಂಪನಿಯಲ್ಲಿ ಆರು ಪೌಂಡುಗಳಿಗೆ ಒಂದು ಟಿಕೆಟ್ಟನ್ನು ಕೊಂಡುಕೊಂಡು ಹೆಸರು ದಾಖಲ್ಮಾಡಿಸಿದರೆ ಅದೃಷ್ಟವಶಾತ್ ಮೊದಲನೆಯ ಬಹುಮಾನವು 3 ಲಕ್ಷ ರೂಪಾಯಿಯೂ, ಎರಡನೆಯ ಬಹುಮಾನವು 2 ಲಕ್ಷ ರೂಪಾಯಿಯೂ, ಮೂರನೆಯ ಬಹುಮಾನವು ಒಂದು ಲಕ್ಷ ರೂಪಾಯಿಯೂ ದೊರೆಯಬಹುದು ಎಂದು ಅದರಲ್ಲಿದ್ದಿತ್ತು. ಮುಖವು ಆನಂದಭರಿತವಾಯಿತು. ಬಡತನವೇ ಮರೆತುಹೋಯಿತು. ಕಚ್ಚೇರಿಯಲ್ಲಿ ಕೆಲಸ ಮಾಡಲು ಮೈ ಬೊಗ್ಗಲಿಲ್ಲ.

ಸಂಜೆಗೆ ರಾಮನಾಥಯ್ಯನವರು ಎಂದಿಗೂ ಮುಂದಾಗಿ ಮನೆಗೆ ಬಂದರು. ಊಟದಲ್ಲಿ ಮನಸ್ಸಿಲ್ಲ. ಆನಂದವು ಹೊಟ್ಟೆಯಲ್ಲಿ ತುಂಬಿ ತುಳುಕುತ್ತಿದೆ. ನಸುನಗೆ ಮೋರೆಯನ್ನೆಲ್ಲ ಆವರಿಸಿದೆ. ಮುದ್ದುರಾಮನಿಗೂ ಜಾನಕಮ್ಮನಿಗೂ ಮುದ್ದಿಗೆ ಪಾರವೇ ಇಲ್ಲ. ಅತಿಯಾಗಿ ಬೇಸರಪಟ್ಟ ಜಾನಕಮ್ಮನು—'ಇದೇನಿದು ಇಷ್ಟು ಸಂತೋಷ?' ಎಂದಳು.

**ರಾಮು:**—'ಸಂತೋಷವೇ? ಸಾಹುಕಾರಿ!'

**ಜಾನಕಿ:**—'ಹಾಗೆಂದರೇನು?'

**ರಾಮು:**—'ನಿನ್ನ ಗಂಡನು ಸಾಹುಕಾರ; ಭಾರೀ ಸಾಹುಕಾರ!'

**ಜಾನಕಿ:**—'ಛೀ! ಅದೆಂತದು? ಅವನ ಮುಖಕ್ಕೆ ಮಣ್ಣುಹಾಕ! ಮೋಹನಾಕಾರರಾದ ನನ್ನ ಪತಿ ಇದಿರಿರುವಲ್ಲಿ ಮಿಕ್ಕವರು ನನ್ನ ಗಂಡಂದಿರು ಹೇಗಾದಾರು?'

**ರಾಮು:**—'ಅಲ್ಲವೆ; ನಾನೇ ಸಾಹುಕಾರ! ಆರು ಪೌಂಡುಗಳಿಂದಲೇ ಸಾಹುಕಾರ.'

**ಜಾನಕಿ:**—'ಇದೆಂತಹ ಹುಚ್ಚು! ಆರು ಪೌಂಡುಗಳಿದ್ದ ಮಾತ್ರಕ್ಕೇ ಸಾಹುಕಾರರೆನ್ನುವುದಕ್ಕೆ ನಾಚಿಗೆಯಾಗುವುದಿಲ್ಲವೆ?'

**ರಾಮು:**—'ಹಾಗಲ್ಲವೇ! ಆರು ಪೌಂಡುಗಳನ್ನು ಈಗಲೇ ಕಳುಹಿದರೆ ಅದೃಷ್ಟವಶಾತ್ ದರಿದ್ರಪಕ್ಷಕ್ಕೆ ಒಂದು ಲಕ್ಷ ರೂಪಾಯಿ ನನಗೆ ಬರುವುದು, ಇದಕ್ಕೂ ಹೆಚ್ಚಿನ ಸಾಹುಕಾರಿ ಇನ್ನೆಂತದು? 90 ರೂಪಾಯಿ ಕೊಟ್ಟ ಮಾತ್ರಕ್ಕೇ ಲಕ್ಷ ರೂಪಾಯಿ ಬಂದರೆ ಬೇಡವೆನ್ನುತ್ತೀಯಾ?'

ಜಾನಕಮ್ಮನು ಬುದ್ಧಿಮತಿ ಎಂಬುದು ವಾಚಕರಿಗೆ ಗೊತ್ತಾಗಿರಬೇಕು. ಮುಂದೆ ಐಶ್ವರ್ಯವನ್ನು ಹೊಂದುವುದಕ್ಕೆ ಹಿಂದಿನಿಂದಲೂ ಕಷ್ಟಪಟ್ಟು ಶೇಖರಿಸಿಟ್ಟಿದ್ದ ದ್ರವ್ಯವನ್ನು ಕೊಡಲು ಒಪ್ಪಲಿಲ್ಲ. ಹೆಂಗಸು ಎಷ್ಟಾದರೂ ಬುದ್ಧಿಹೀನೆ ಅಲ್ಲವೆ? ಮೆಟ್ರಿಕ್ಯುಲೇಷನ್ ಪಾಸ್‌ಮಾಡಿ ಸರಕಾರೀ ಉದ್ಯೋಗದಲ್ಲಿರುವ ರಾಮನಾಥಯ್ಯನವರಿಗಿಂತಲೂ ಮುಸುರೆ ತಿಕ್ಕುವ ಹೆಂಗಸು ಬುದ್ಧಿವಂತಳೆಂದು ಯಾರು ಹೇಳಬಲ್ಲರು? ಗಂಡಸರು ಮಾಡುವ ಕಾರ್ಯಕ್ಕೆ ಹೆಂಗಸರು ಅಡ್ಡಿಮಾಡುವ ಆ ನೀಚಪದ್ಧತಿ ಈ ಜಾನಕಮ್ಮನಿಗೂ ಇತ್ತೇನು? ರಾಮನಾಥಯ್ಯನವರು ಸಾಹುಕಾರರಾದ ಮೇಲೆ ಜಾನಕಮ್ಮನ ಐಸಿರಿ ಎಷ್ಟರ ಮಟ್ಟಿಗಿದ್ದೀತೆಂದು ಅವರ ಸಹಪಾಠಿಗಳೆಲ್ಲರೂ ಆಲೋಚಿಸಲಿ!

ಅಬಲೆಯರ ಬಲವು ಸಬಲರಲ್ಲಿ ನಡೆಯದು. ಜಾನಕಿಯ ನಡತೆಗೇಕೋ ನಮಗೆ ಕೋಪಬರುತ್ತಿದೆ. 'ಕರೆದು ಹೆಣ್ಣು ಕೊಟ್ಟರೆ ಅಳಿಯ

ನಿಗೆ ಮಲರೋಗ!' ಮನೆಯುವರಿಗೆ ಒಂದು ಲಕ್ಷ—(ಅಬ್ಬಬ್ಬ!!!)–ಬಂದರೆ ಯಾರಿಗೆ ತಾನೇ ಬೇಡ? ಅಂತೂ ಇಂತೂ ಅವಳೊಡನೆ ರಗಳೆಮಾಡಿ ಸೇವಿಂಗ್ಸ್ ಬ್ಯಾಂಕಿನಲ್ಲಿದ್ದ ರೂಪಾಯಿಗಳಲ್ಲಿ ೯೦ ರೂಪಾಯಿಗಳನ್ನು ತೆಗೆದು ಕಂಪೆನಿಯ ಏಜಂಟರಿಗೆ ಕಳುಹಿದುದಾಯ್ತು. ಯಥಾಕಾಲದಲ್ಲಿ ರಶೀದಿಯೂ ಬಂತು.

ಇನ್ನೇನು? ರಾಮನಾಥಯ್ಯನವರು ಸಾಹುಕಾರರಾದರು. ಕೆಲಸಕ್ಕೆ ಮನಸ್ಸು ಬಾರದು. ದಿನಗಳನ್ನು ಎಣಿಸಿದರು. ಬರುವ ಹಣವನ್ನು ಯಾವ ರೀತಿ ವಿನಿಯೋಗಿಸುವುದೆಂಬ ಯೋಚನೆ ಹತ್ತಿತು. ಜಾನಕಿಗೆ ಮೆಯ್ತುಂಬ ಆಭರಣ, ಸಂಸಾರಕ್ಕೆ ಬೇಕಾದಷ್ಟು ಜಮೀನು; ಉಳಿದುದನ್ನು ಮದ್ರಾಸ್ ಬ್ಯಾಂಕಿಗೆ ಹಾಕಿಬಿಡಬೇಕು! ಹಾಗೆಯೇ ಜಾನಕಿಗೆ ಒಂದು ಸೀರೆಯನ್ನು ತರಬೇಕೆಂದೂ, ಹಣವು ಬಂದಾಗ ಕೊಟ್ಟು ತೀರಿಸಬಹುದೆಂದೂ ಯೋಚಿಸಿ ತನ್ನ ಸಹಪಾಠಿಗಳ ಜಾಮೀನಿನಿಂದ ಅಂಗಡಿಯಲ್ಲಿ ಸುಮಾರು ೫೦ ರೂಪಾಯಿಯ ಒಂದು ಸೀರೆಯನ್ನು ಕೊಂಡುತಂದುದಾಯಿತು. ಸಾಹುಕಾರರಿಗೆ ಇದೆಲ್ಲಾ ಒಂದು ಗಣ್ಯವೆ?

ದಿನ ಹೋಯಿತು; ತಿಂಗಳು ಹೋಯಿತು; ವರ್ಷವು ಕಳೆಯಿತು:— ಬಹುಮಾನದ ವರ್ತಮಾನವೇ ಇಲ್ಲ. ಸಾಲಗಾರನ ತಗಾದೆ ಹೆಚ್ಚಾಯಿತು; ಮನೆಯಲ್ಲಿ ತೊಂದರೆ ಹೆಚ್ಚಿತು. ಮಗುವಿಗೆ ಕಾಯಿಲೆ; ಜಾನಕಿಗೆ ಅಸ್ವಸ್ಥ. ರಾಮನಾಥಯ್ಯನವರು ಭವಿಷತ್ ಸಾಹುಕಾರಿಯಲ್ಲಿ ಸರಕಾರೀ ಕೆಲಸಕ್ಕೆ ಅಸಡ್ಡೆ ತೋರಿದುದರಿಂದ ಅವರ ಸಂಬಳವನ್ನೂ ತಡೆದರು. ಈ ಮಧ್ಯೆ ಊರಲ್ಲಿ ಪ್ಲೇಗು ತಲೆದೋರಿತು. ಇಷ್ಟೆಲ್ಲ ಗಲಭೆಯಲ್ಲಿ ಮುಂದುಗಾಣದೆ ತಲ್ಲಣಿಸುತ್ತಿದ್ದ ರಾಮನಾಥಯ್ಯನವರಿಗೆ ಇನ್ನೆಲ್ಲಿಗೋ ವರ್ಗಕ್ಕೆ ಕೂಡ ಅಪ್ಪಣೆ ಬಂದಿತು. ಅಪಾರವಾದ ದುಃಖ; ಚಿತ್ತವು ಚಂಚಲವಾಯ್ತು. ಮಾಡತಕ್ಕುದೇನು? ರಾಮನಾಥಯ್ಯನವರು ಪುನಃ ಏಜಂಟಿಗೆ ಬರೆದರು. ಉತ್ತರವಿಲ್ಲ. ಮನೆಯಲ್ಲಿ ಸೊನ್ನೆ. 'ಸೀದಾ' ಕಂಪನಿಗೆ ಬರೆದರು. ಒಂದು ತಿಂಗಳಲ್ಲಿ ಉತ್ತರ ಬಂತು. ನೋಡಿದರು;

ಗಂಟಲಾರಿತು; ಮುಖವು ವಿವರ್ಣವಾಯ್ತು. ಮೋರೆ ಮುಚ್ಚಿಕೊಂಡು 'ಗೊಳೋ' ಎಂದತ್ತರು.

ಜಾನಕಮ್ಮನು ಬಂದಳು. ನೋಡಿದಳು. ಕಾರಣವು ಗೊತ್ತಾಗ ಲಿಲ್ಲ. ನೆರೆಕರೆಯುವರೂ ಕೂಡಿದರು. ರಾಮನಾಥಯ್ಯನವರ ಆ ರೋದ ನವನ್ನು ನಿಲ್ಲಿಸುವರಾರು? ಕೊನೆಗೆ ಪ್ರೀತಿಪಾತ್ರಳಾದ ಜಾನಕಮ್ಮನು ಏನೋ ಮಾಡಿ,—'ಇದೇಕೆ?' ಎಂದಳು. ರಾಮನಾಥಯ್ಯನವರಿಗೆ ಹೇಳು ವುದಕ್ಕೆ ಮನಸ್ಸುಬಾರದೆ ಕಷ್ಟದಿಂದ—'ಜಾನಕಿ! ತಲೆಗೆ ಕಲ್ಲು ಬಿತ್ತು!' ಎಂದರು.

**ಜಾನಕಿ:**—'ಏಕೆ?'

ಉತ್ತರವಾಗಿ ರಾಮನಾಥಯ್ಯನವರು ದೀರ್ಘಶ್ವಾಸವನ್ನು ಬಿಟ್ಟು ಕಾಗದವನ್ನು ಕೆಳಗೆಸೆದರು.

ಮೇಲ್ಕೋಟೆಯ ನಾಮವೂ, ಚಿಕ್ಕನಾಯ್ಕನ ಹಳ್ಳಿಯ ಪಾತ್ರೆಯೂ ಹತ್ತಿರ ಬಂದುವು. ಜಾನಕಿಯೂ, ನೆರೆಯುವರೂ ಈ ಬುದ್ಧಿಗೆ ಚಿಂತಿಸಿ ದರು. ಸಾಲಗಾರರಿಗೆ ಆಭರಣಗಳನ್ನು ವಿಕ್ರಯಿಸಿ ಕೊಟ್ಟುದಾಯ್ತು. ಆಸ್ಪತ್ರೆಯಿಂದ ಔಷಧಿಯನ್ನು ತಂದು ಮಗುವಿಗೆ ಗುಣಮಾಡಿದರು. ಕೊನೆಗೆ ದಾರಿಯ ಖರ್ಚಿಗೆ ಬ್ಯಾಂಕಿನಲ್ಲಿ ಉಳಿದಿದ್ದ ೧೦ ರೂಪಾಯಿಗಳು.

ಇಷ್ಟಕ್ಕೆಲ್ಲಾ ಕಾರಣವು ರಾಮನಾಥಯ್ಯನವರ ಆ ನೂತನ ವಿದ್ಯೆ ಯಲ್ಲವೆ? ಕಂಪೆನಿಗಳಿಗೆ ಬಿದ್ದು ಮರುಳಾಗಿ ತೊಂದರೆಪಡುವ ನೂತನ ವಿದ್ಯಾಸಾಧಕರಿಗೆ ಅವರೇ ಗುರುಗಳು. ಆಲೋಚನೆಮಾಡಿದರೆ ಜಾನ ಕಮ್ಮನಿಂದಲೇ ಇಷ್ಟು ಅನರ್ಥವುಂಟಾಯಿತೆಂದು ಹೇಳಕೂಡದೇನು? ಅವಳು ಹಣವನ್ನು ಶೇಖರಿಸಿಡದಿದ್ದರೆ ಏಕೆ ಉಂಟಾಗುತ್ತಿತ್ತು? ಇಲ್ಲ. ಅಪವಾದವು ಜಾನಕಿಯ ಮೇಲೂ ಇಲ್ಲ; ರಾಮನಾಥಯ್ಯನವರ ಮೇಲೂ ಇಲ್ಲ. ಇಷ್ಟು ಅಜ್ಞಾನವನ್ನೂ, ಅನರ್ಥವನ್ನೂ ಉಂಟುಮಾಡಿದುದು ಆ ಹಾಳು ಮೆಟ್ರಿಕ್ಯುಲೇಷನು. ಅದಕ್ಕಾಗಿಯೋ ಏನೋ ಯೂನಿವರ್ಸಿಟಿ ಯವರು ವಿದ್ಯಾರ್ಥಿಗಳಿಗೆ ಸೊನ್ನೆಸುತ್ತುತ್ತಿರುವುದು!

## ವಿಚಿತ್ರ ವಿವಾಹ.

ಅಂದು ಮಹಾರಾಜನ ಮಗಳ ಮದುವೆ! ಅದರಲ್ಲಿಯೂ, ಸ್ವಯಂವರದ ಪದ್ಧತಿ!! ಅನೇಕ ರಾಜಾಧಿರಾಜರೂ ಬಂದು ನೆರೆದಿರುವ ಮಹಾಸನ್ನಿವೇಶ!!!—ಮದುವೆಯ ಮಂಡಪವನ್ನು ಹೇಗೆ ಸಿಂಗರಿಸುವರೆಂಬುದನ್ನೇ ಹೇಳಬೇಕಾಗಿಲ್ಲ; ಬಾಣ, ಕಾಳಿದಾಸ, ಶ್ರೀಹರ್ಷ, ಮೊದಲಾದ ಮಹಾಕವಿಗಳೇನಾದರೂ, ಆ ಮಂಟಪವನ್ನು ನೋಡಿದ್ದರೆ, ಅದನ್ನು ವರ್ಣಿಸಲು ದಿಕ್ಕು ತೋಚದೆ, ಮೂಕರೇ ಆಗುತ್ತಿದ್ದರು;—ಅಂತಹ ಅವಮಾನವು ಆಗಬಾರದೆಂದೇ, ಆ ಸ್ವಯಂವರದ ಕಾಲದಲ್ಲಿ, ಅವರು ಹುಟ್ಟಲೇ ಇಲ್ಲ! ಆ ಮಂಟಪದ ಸೊಬಗನ್ನೂ ಸಂಪತ್ತನ್ನೂ ನೋಡಿ. ಇಂದ್ರನೇನೋ, ಮತ್ಸರಿಸುತ್ತಲಿದ್ದಂತೆ, ವರ್ತಮಾನವಿದ್ದಿತು; ನಿಜವಾದ ವಿಷಯವೇನೋ, ಆರಿಗೂ ತಿಳಿಯದು. ಅಂತೂ, ಭರತಖಂಡದಲ್ಲೆಲ್ಲ, ಆ ಮದುವೆಯು ಪೂರಯ್ಸುವಷ್ಟು ದಿನಗಳೂ, ಕಟಿಲ್ಲತೆಗೆ ಸಂಪೂರ್ಣ ಶಾಶ್ವತೆಯೊದಗಿದ್ದಿತು!!!

ಮಹರ್ಷಿಗಳೂ, ಈ ವಿವಾಹವೈಭವವನ್ನು ಆಶಿಸಿ, ಲೌಕಿಕ ಕಾರ್ಯದಲ್ಲಿ ಆಸಕ್ತರಾಗಿರುವಾಗ, ಉಳಿದ ಬ್ರಾಹ್ಮಣರೇನು, ಉದಾಸೀನರಾಗಿರುವರೆ? ಮದುವೆಗೆ ಒಂದು ತಿಂಗಳುಂಟೆನ್ನುವಾಗ, ಲಕ್ಷಾಂತರ ಜನರು ಬಂದು ಸೇರಿದರು!—ಇಪ್ಪತ್ತಯ್ದು ದಿನಗಳಿಗೆ ಮೊದಲು ಕೆಲವರು; ಹದಿನಯ್ದು ದಿನಗಳಿಗೆ ಮುಂಚೆ ಕೆಲವರು; ಹತ್ತು ದಿನಗಳಿಗೆ ಮೊದಲು ಹಲವರು;—ಅಂತೂ, ಎಂಟು ದಿನಗಳಿಗೆ ಮೊದಲೇ, ಎಲ್ಲರೂ ನೆರೆದರು. ಏಕಕಾಲದಲ್ಲಿ, ಒಂದೆಡೆಯಲ್ಲಿ, ಬ್ರಾಹ್ಮಣಸೃಷ್ಟಿಯನ್ನು ನೋಡಬೇಕೆನ್ನುವರೆಲ್ಲರೂ ಅಂದು ಅದನ್ನು ನೋಡಿ, ಆನಂದಭರಿತರಾದರು.

ಸೇರಿದ ಈ ಎಲ್ಲ ಬ್ರಾಹ್ಮಣರೂ ಸಂಪೂರ್ಣ ಜ್ಞಾನಿಗಳಾಗಿರಲಿಲ್ಲ. ಈಗಿನ ಕಾಲದಂತೆಯೆ, ಜ್ಞಾನಿಗಳು ವಿರಳರಾಗಿಯೂ, ಉಂಡಾಡುಗರು ಹೆಚ್ಚಾಗಿಯೂ, ಇದ್ದರು. ಉದ್ದಾಮ ಪಂಡಿತರೆಲ್ಲರೂ ರಾಜನಿಂದ ಆಹುತ

ರಾಗಿದ್ದರು; ಉಳಿದವರು ರಾಜಭಕ್ತಿಯನ್ನು ಪ್ರಕಟೀಕರಿಸುವ ವ್ಯಾಜ್ಯ ದಿಂದ, ತಾವಾಗಿ, ಬಂದಿದ್ದರು. ಹತ್ತಾರು ಮೈಲಿಗೂ, ಮದುವೆಯ ಮಂಡಪವು ಕಾಣುವಂತೆ ಸಿಂಗರಿಸಲ್ಪಟ್ಟಿದ್ದಿತು. ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರ, — ಚತುರ್ವರ್ಣಗಳೂ, ತಾರತಮ್ಯಾನುಸಾರವಾಗಿ ಅಲ್ಲಿ ಮಂಡಿ ಸಿದ್ದರು.

ಹಸೆಗೆ ವರನು ಬರುವ ನಿರೀಕ್ಷಣೆಯಲ್ಲಿದ್ದಿತು. ಪುರೋಹಿತರೂ ಏಳನೆಯ ತಿಂಗಳಲ್ಲಿಯೇ ಹುಟ್ಟಿದವರಾಗಿದ್ದರು. ಎಲ್ಲರ ಅವಸರದಿಂ ದಲೂ, ಅವರದೇ ಮುಂದು! ವರನನ್ನು ಕೂಗಿದರು. ಶಾಂತಸ್ವಭಾವನೂ, ಧರ್ಮ ಸ್ವರೂಪಿಯೂ ಆದ ಒಬ್ಬ ಯುವಕನು ಬಂದು ಕುಳಿತನು. ಕನ್ನಿಕೆ ಯನ್ನು ಕೂಗುವಷ್ಟರಲ್ಲಿಯೆ, ಇನ್ನೊಬ್ಬನು ಬಂದು, ಹಸೆಯ ಮಣೆಯ ಮೇಲೆ ಮಂಡಿಸಿದನು. ನೋಡಿದರೆ, ಮೊದಲಿನವರ ರೂಪಕ್ಕೆ ವ್ಯತಿರೇಕ ವಾದ ಸ್ವಭಾವವಾಗಿದ್ದಿತು. ದೀರ್ಘಾಕಾರವೂ, ಆಜಾನುಬಾಹುವೂ, ಉಗ್ರತೇಜಸ್ಸೂ ಅವನಲ್ಲಿ ನೆಲೆಯಾಗಿ, ನೋಡಿದವರ ಎದೆ ನಡಗುವಂತೆ ಇದ್ದಿತು. ಅವನು ಹಸೆಯ ಮಣೆಯ ಮೇಲೆ ಕುಳಿತುಕೊಳ್ಳುವ ರಭಸ ದಲ್ಲಿ, ವಿವಾಹ ಮಂಡಪದಲ್ಲಿಯೆಲ್ಲ ಭೂಕಂಪವಾಯಿತಂತೆ! ಹೇಗಾ ದರೂ, ಆಗಿ ಹೋಗಲಿ! — ಅಂತೂ, ಇಬ್ಬರು ಬಂದು ಹಸೆಯ ಮಣೆಯ ಮೇಲೆ ಕುಳಿತರು. ಸಭೆಯಲ್ಲಿ ಕುಳಿತಿದ್ದ ವಜ್ರಶುಂಠ ಭಟ್ಟರು ಮೂರ್ಖ ಬ್ರಹ್ಮರನ್ನು ನೋಡಿ,—'ಏನಯ್ಯ! ಈ ಊರಲ್ಲಿ ಗಂಡಸರು-ಗಂಡಸರಿಗೇ ಮದುವೆಯಾಗುವುದೊ? ಇದೆಂತಹ ವಿಚಿತ್ರ ವಿವಾಹವೋ, ನಾನು ಕಾಣೆನು!' ಎಂದರು. ಮೂರ್ಖಬ್ರಹ್ಮರು — 'ಅಹುದು; ಭಟ್ಟರೆ! ನನಗೂ ಹೊಸತಾಗಿದೆ. ಮುಂದೆ ಏನಾಗುವುದೋ, ನೋಡುವ!' — ಎಂದರು.

ಆ ಮೇಲೆ, ಪುರೋಹಿತರು ಇನ್ನೊಬ್ಬನನ್ನು ಕೂಗಿದರು. ಇನ್ನೊ ಬ್ಬನು ಬಂದು, ಮದುವೆಯ ಜಗುಲಿಯನ್ನೇರಿದನು. ಸಭೆಯು ದಿಗ್ಭ್ರಾಂತ ವಾಯಿತು. ಅವನು ಒಳ್ಳೆಯ ಬೆಳ್ಳನೆಯ ಕಾಂತಿಯಿಂದ ಕೂಡಿ, ಮುಗು ಳ್ನಗೆಯಿಂದ, ಮೊದಲಿನ ಇಬ್ಬರ ಪಕ್ಕದಲ್ಲಿ ಬಂದು ಕುಳಿತನು. ವಜ್ರ

ಶುಂಠ ಭಟ್ಟನು—'ಏನಯ್ಯ! ಮೂರ್ಖಬ್ರಹ್ಮ! ಮೂವರು ಗಂಡಸರು ಬಂದು ಕುಳಿತರು! ನಾನು ಮೊದಲೇ ಹೇಳಲಿಲ್ಲವೆ?—ಗಂಡಸರು-ಗಂಡಸರಿಗೇ ಮದುವೆಯೆಂದು! ಇದೋ ನೋಡು; ಮೊದಲನೆಯವನನ್ನು ಎರಡನೆಯವನು ಮದುವೆಮಾಡಿಕೊಳ್ಳುವನು; ಎರಡನೆಯವನನ್ನು ಮೂರನೆಯವನು ಮದುವೆ ಮಾಡಿಕೊಳ್ಳುವನು!!' ಎನ್ನಲು,—'ಹಾಗಲ್ಲವೊ? ವಜ್ರಶುಂಠ! ಮಧ್ಯದವನು ಪಕ್ಕದವರಿಬ್ಬರನ್ನು ಮದುವೆಮಾಡಿಕೊಳ್ಳುವನು! ಅವನ ಆಕಾರ—ನೋಡು! ಎಷ್ಟು ದೊಡ್ಡದು! ದೊಡ್ಡವರು ಚಿಕ್ಕವರನ್ನಲ್ಲವೆ, ಮದುವೆಮಾಡಿಕೊಳ್ಳುವುದು? ನನ್ನ ಹೆಂಡತಿ, ನನಗಿಂತ, ಒಂದಡಿ ಚಿಕ್ಕವಳು;—ಅಷ್ಟು ನನಗೆ ಗೊತ್ತಿಲ್ಲವೆ?'—ಎಂದನು. ಆಗ ಮಹೋದರ ಶಾಸ್ತ್ರಿಗಳೆದ್ದು,—'ನೀವೆಂತಹ ಹುಚ್ಚರಯ್ಯ! ಗಂಡನು ಉದ್ದವಾಗಿರಬೇಕು; ಹೆಂಡತಿ ಚಿಕ್ಕವಳಾಗಿರಬೇಕು;—ಎಂಬುದೇನು ಧರ್ಮಶಾಸ್ತ್ರವೊ? ನನ್ನನ್ನು ನೋಡಿ! ನಾನು ಮೂರಡಿಯಿರುವೆನು; ನನ್ನ ಹೊಟ್ಟೆಯೂ, ಮೂರಡಿ ಮುಂದಕ್ಕೆ ಬಂದಿದೆ; ಅಂತೂ ಆರಡಿ ನಾನಿದ್ದರೂ, ನನ್ನ ಹೆಂಡತಿ ನನಗಿಂತಲೂ ಎತ್ತರವಾಗಿದ್ದಾಳೆ! ಆದುದರಿಂದ, ನನಗೇನು, ಮದುವೆಯಾಗಲಿಲ್ಲವೆಂದರ್ಥವೊ? ನಾನು ಹೇಳುವೆನು;—ಮೂರನೆಯವನೇ ಮೊದಲಿಬ್ಬರನ್ನೂ ಮದುವೆಮಾಡಿಕೊಳ್ಳುವನು;'—ಉಳಿದವರು—'ಸರಿ! ಸರಿ! ಹಾಗೆಯೆ ಸರಿ!'—ಎಂದರು. ಪುನಃ ಪುರೋಹಿತರು ಕೂಗಿದರು.

ಇನ್ನಿಬ್ಬರು, ಒಟ್ಟೊಟ್ಟಿಗೆ ಬಂದು, ಹಸೆಯ ಮೇಲೆ ಕುಳಿತರು. ಮೂರ್ಖಬ್ರಹ್ಮನು ವಜ್ರಶುಂಠನನ್ನು ನೋಡಿ,—'ಏನಯ್ಯ! ನಾವು ಹೇಳಿದುದೆಲ್ಲವೂ ಸುಳ್ಳಾಯಿತು! ಮೊದಲು, ಒಬ್ಬೊಬ್ಬರೇ ಬರುತ್ತಿದ್ದರು. ಈಗ, ಇಬ್ಬರಿಬ್ಬರು ಬರಲು ಮೊದಲುಮಾಡಿದಂತಿದೆ!!' ಎನ್ನಲು, ವಜ್ರಶುಂಠನು—ಅಯ್ಯೊ! ಹುಚ್ಚ! ಹಾಗಲ್ಲ. ಅವರಿಬ್ಬರೂ ಒಂದೇ ಸಮನಾಗಿರುವರು; ಬಹುಶಃ, ಒಳಗಿಂದಲೇ ಮದುವೆ ಮಾಡಿಕೊಂಡು ಬಂದಿರಬೇಕು!' ಎಂದನು,

ಪುರೋಹಿತರು, ಪುನಃ, ಕೂಗಿದರು. ದಿವ್ಯಾಲಂಕಾರಭೂಷಿತೆಯಾದ, ದೇವಕನ್ಯಕೆಯಂತಹ ಒಬ್ಬ ರಮಣಿಯು ಬಂದು, ಹಸೆಯ ಮೇಲೆ ಕುಳಿತಳು. ಸಭೆಯವರ ಕಣ್ಣೆಲ್ಲವೂ ಮಿಂಚಿನಿಂದ ಕೋರೈಸಿದಂತೆ ಆಯಿತು. ವಜ್ರಶುಂಠನು ತನ್ನ ಕೆಳೆಯನನ್ನು ಕುರಿತು-"ಏನು? ಬ್ರಹ್ಮರೆ! ಗಂಡಸರ ಸರದಿ ಮುಗಿದಂತಿದೆ! ಈಗ, ಹೆಂಗಸರು ಬರಲು ಮೊದಲುಮಾಡಿದರು!!" ಎನ್ನಲು,—"ಶುಂಠರೆ! ಅದನ್ನೇ ಆಲೋಚಿಸುತ್ತಿದ್ದೆನು. ಗಂಡಸರು ಗಂಡಸರಿಗೇ ಮದುವೆಯಾಗಿದ್ದರೆ, ನಾನು ಹೆಂಗಸನ್ನು ಮದುವೆಯಾಗಿಬಿಟ್ಟೆನಲ್ಲ;— ಎಂಬ ಚಿಂತೆಗೊಳಗಾಗಬೇಕಾಗುತ್ತಿದ್ದಿತು. ಈಗ, ಸಮಾಧಾನವಾಯಿತು. ಒಟ್ಟಿಗೆ ಐಯ್ದು ಮದುವೆಯಾಗುವುದರಿಂದ, ದಕ್ಷಿಣೆಯೂ ಐಯ್ದರಷ್ಟು ಹೆಚ್ಚಿ ಬರುವಂತಾಯಿತು!!"—ಎಂದರು.

ಅಷ್ಟರಲ್ಲಿಯೆ, ಪುರೋಹಿತರು ಪಾಣಿಗ್ರಹಣಕರ್ಮವನ್ನು ಮಾಡಿಸಲೆಳಸಿದರು. ಹಸೆಯ ಮಣೆಯ ಮೇಲೆ, ಐಯ್ದು ಗಂಡುಗಳೂ,—ಒಂದೇ ಒಂದು ಹೆಣ್ಣೂ,—ಇರುವುದನ್ನು ನೋಡಿ, ಸಭೆಯಲ್ಲಿ ಅತ್ಯಂತ ಕೋಲಾಹಲಕ್ಕಿಟ್ಟಿತು. ಒಬ್ಬೊಬ್ಬರು, ಒಂದೊಂದು, ಮಾತನ್ನಾಡಿದರು. "ಇದೆಂತಹ ವಿಚಿತ್ರವಿವಾಹ! ಭೂಲೋಕದಲ್ಲಿ ಹಿಂದೆ ಕೇಳಿರಲಿಲ್ಲ; ಮುಂದೆ ನೋಡುವಂತಿಲ್ಲ! ಒಬ್ಬಳಿಗೆ ಐಯ್ವರಿಲ್ಲಿಯಾದರೂ ಉಂಟೆ?"—ಎಂದು ತರ್ಕಕ್ಕೆ ಆರಂಭವಾಯಿತು. ಆಗ, ವಜ್ರಶುಂಠನೆದ್ದು,—"ಏಕೆ ಕೂಡದು? ನಾನು ಲಗ್ನಮಾಡಿಕೊಳ್ಳುವುದಕ್ಕೆ ಮೊದಲು, ನನ್ನ ಹೆಂಡತಿಯನ್ನು ಹತ್ತುಹನ್ನೆರಡು ಜನರು ಕೇಳಿದ್ದರಂತೆ; ಆದರೆ, ಏನೋ—ವ್ಯಾಪಾರವು ಸರಿಹೋಗಲಿಲ್ಲ! ಚತುರನಾದುದರಿಂದ, ನಾನು, ಅವರೆಲ್ಲರೂ ಕೇಳಿ ಹೊರಟುಹೋದ ಮೇಲೆ, ಇನ್ನೂ ನೂರು ರೂಪಾಯಿಗಳು ಹೆಚ್ಚೆಂದು ಹೇಳಿ, ಅವಳನ್ನು ಬೇಗನೆ ಮದುವೆಮಾಡಿಕೊಂಡುಬಿಟ್ಟೆನು. ಆ ಊರಲ್ಲಿ ನಾನು ಮದುವೆಮಾಡಿಕೊಳ್ಳಲೇ ಇಲ್ಲ!! ಅಲ್ಲಿಯೇನಾದರೂ ಆಗಿದ್ದಿದ್ದರೆ, ಆ ಹತ್ತುಹನ್ನೆರಡು ಜನರೂ ಬಂದು,

ಹಸೆಯ ಮೇಲೆ ಕುಳಿತೇ ಬಿಡುತ್ತಿದ್ದರು!!! ಆಗ, ನಾನೊಬ್ಬನೇ ಏನು ಮಾಡಬಹುದಾಗಿದ್ದಿತು?"—ಎಂದನು. ಮೂರ್ಖಬ್ರಹ್ಮನು—"ಸರಿ! ಇರಬಹುದು!—ಹುಡುಗಿಯು ಬಲುಚೆಲುವೆ; ಅವರಪ್ಪನು ಬಹಳ ದುಡ್ಡನ್ನು ಕೇಳಿರಬಹುದು! ಅವಳ ಮೆಯ್ಯ ಮೇಲೆ, ನೋಡು!—ಎಷ್ಟೊಂದು ಒಡವೆಗಳಿವೆ!!—ಒಬ್ಬರಿಂದ ಅಷ್ಟನ್ನೂ ಕೊಡಲು ಸಾಧ್ಯವೆ? ಎಲ್ಲರೂ ಒಗ್ಗಟ್ಟಾಗಿ, ಎಲ್ಲಿಯೋ ಹಣವನ್ನು ಒದಗಿಸಿಕೊಂಡು ಬಂದಿರಬೇಕು;—ಅದರಿಂದ, ಎಲ್ಲರೂ ಹಸೆಗೆ ಬರಬೇಕಾಯಿತು!!!—ಏನಾದರೇನು? ಅಯ್ದು ಮದುವೆಗಳೆಂದು, ಎಷ್ಟೋ, ಆಶೆಗೊಂಡಿದ್ದೆನು! ಒಂದೇ ಮದುವೆಯಾಯಿತಲ್ಲವೆ?"—ಎಂದು ನಿಟ್ಟುಸಿರಿಟ್ಟನು. ಅಷ್ಟರಲ್ಲಿ, ಮಹೋದರಶಾಸ್ತ್ರಗಳೆದ್ದು,—"ಏಕಯ್ಯ! ದುಃಖಿಸುವೆ? ಒಂದೇ ಮದುವೆಯೆಂದರೆ, ಆರೊಪ್ಪುವರು? ಹುಡುಗಿಯದು ಒಂದು ಮದುವೆ; ಹುಡುಗರದು ಅಯ್ದು ಮದುವೆ;—ಅಂತು, ಆರು ಮದುವೆಗಳಾದಂತಾಯಿತು! ಇಷ್ಟು ಹೆಚ್ಚು ಮದುವೆಗಳಿರುವುದರಿಂದಲೇ, ನಾನಾ ದೇಶದ ಜನರು ಇಲ್ಲಿ ನೆರೆದಿರುವರು. ಒಂದೇ ಮದುವೆಗೆ, ಇಷ್ಟು ಜನರು ನೆರೆವುದುಂಟೆ?"—ಎಂದನು. ಮೂರ್ಖಬ್ರಹ್ಮನು—"ಸ್ವಾಮಿ! ತಾವು ಹೇಳಿದುದೇನೋ, ಸರಿ!—ಹೀಗೆ, ಮನಸ್ಸಿನಲ್ಲಿಯೇ ಮಂಡಿಗೆಯುಂಡರೆ ಫಲವೇನು? ಕೊಂಚ, ನಾವು ಗಲುಬೆಯನ್ನಬ್ಬಿಸಿದ ಹೊರತು, ದುಡ್ಡು ಹೊರಡುವುದಿಲ್ಲ!!—ಆದುದರಿಂದ, ನಮಗೆ ತಕ್ಕ ಬ್ರಾಹ್ಮಣರೆಲ್ಲರನ್ನೂ ಮೆಲ್ಲನೆ ಗುಂಪುಗೂಡಿಸಿ, 'ಈ ವಿವಾಹವು ವಿಚಿತ್ರವಾಗಿದೆ; ಎಂದಿಗೂ ಒಪ್ಪುವುದಲ್ಲ. ಇದನ್ನು ಸಭಿಕರಾದ ನಾವು ಎಂದೂ ಅಂಗೀಕರಿಸಲಾರೆವು. ಒಬ್ಬಳಿಗೆ ಒಬ್ಬನು ಸರಿ; ಅಥವಾ, ಇಬ್ಬರು ಸರಿ; ಇನ್ನೂ, ಧಾರಾಳವಾಗಿ ಒಪ್ಪುಗೆಯನ್ನು ಕೊಟ್ಟ ಪಕ್ಷದಲ್ಲಿಯೂ, ಮೂವರಿರಲಿ!-ಅದೆಲ್ಲವನ್ನೂ ಬಿಟ್ಟು, ಯಾರ ಮಾತನ್ನೂ ಕೇಳದೆ, ಅಯ್ದು ಮಂದಿಗಳನ್ನು ಅರಿಯದ ಆ ಹೆಣ್ಣುಕೂಸಿನ ಕತ್ತಿಗೆ ಕಟ್ಟಿದರೆ, ಅದರ ಪಾಡೇನಾಗಬೇಕು? ಧರ್ಮಶಾಸ್ತ್ರವು ಅದನ್ನು ಹೇಗೆ ಒಪ್ಪುವುದು?' ಎಂದು,

ವೊದಲಾಗಿ, ಮುಷ್ಕರವನ್ನು ಹಾಕಿದರೆ, ತಾನಾಗಿಯೇ ದುಡ್ಡು ಹೊರ ಡುವುದು!!! ನಾವು ಊಹಿಸಿದುದಕ್ಕಿಂತಲೂ, ಹೆಚ್ಚಾಗಿ, ಬಂದರೂ ಬರ ಬಹುದು!!!" — ಎಂದನು.

ವಜ್ರಶುಂಠನು —"ಆಹಾ! ಅದಕ್ಕೆ, ತಮ್ಮನ್ನು ಬ್ರಹ್ಮರೆಂದು ಕರೆ ಯುವುದು! ನೂತನಸೃಷ್ಟಿಯಲ್ಲಿ ತಮ್ಮಂತಹರು ಪ್ರಸಿದ್ಧರಾಗಿರುವಾಗ, ಇಂತಹ ಅತಿಸ್ವಾರಸ್ಯವಾದ ಯುಕ್ತಿಗಳಿಗೆ ಕಡಮೆಯೇನಿದೆ?"—ಎನ್ನು ವಷ್ಟರಲ್ಲಿ, ದೈತ್ಯಾಚಾರ್ಯರು ರಭಸದಿಂದೆದ್ದು,—"ಏನಿರಯ್ಯಾ! ಮನ ಸ್ಸಿಗೆ ಬಂದ್ಹಂಗೆ ಮಾತನಾಡೋದೋ? ಗಂಡಸರು ದಾರೂ ಹೆಚ್ಚು ಮಂದಿ ಹೆಂಡಿರನ್ನು ಕಟ್ಟಿಕೊಂಡಿಲ್ಲವೊ? ಹಂಗೇನೆ, ಹೆಂಗಸೂ ಬೇಕಾ ದಷ್ಟು ಗಂಡಂದಿರನ್ನು ಕಟ್ಟಿಕೊಳ್ಳೋದಕ್ಕೆ ಅಡ್ಡಿದಾವುದು? ಸಾವಿರ ಶಾಸ್ತ್ರ ಮಗುಚಿಹಾಕಿದ....ಗಂಡನಾದ ನನ್ನಿದಿರಿಗೆ ನಿಮ್ಮ ಹರಟೆಗಳೊ? ದಾರುದಾವುದನ್ನು ಹೇಳಿದರೂ; ಅಲ್ಲವೆಂದು ವಾಕ್ಯಾರ್ಥವಾಡಿಬಿಡು ಥೇನು! ನಿಮ್ಮೆಲ್ಲರಿಗಿಂತಲೂ, ನನಗೆ ಹೆಚ್ಚಾಗಿ ಬಂದರೆ ಸರಿ;— ಇಲ್ಲದಿ ದ್ದರೆ, ಈ ಮದುವೆ ಸರಿಯೆಂದು ಒಂದು ಚುಟಕೇಲಿ ನಿಮ್ಮ ವಾಕ್ಯ ಪೂರ್ವಪಕ್ಷಾ ಮಾಡಿಬಿಡುಥೇನು!!" — ಎನ್ನಲು, ಸುತ್ತಣವರು ಆಲೋ ಚಿಸಿ,—"ಸ್ವಾಮಿ! ದೈತ್ಯಾಚಾರ್ಯರೇ! 'ಎಣ್ಣೆಬರುವ ಹೊತ್ತಿಗೆ ಕಣ್ಣು ಮುಚ್ಚುವ ಹಾಗೆ' ಮಾಡಬೇಡಿ! ನಮಗೆ ಬಂದುದರಲ್ಲಿ, ತಮಗೂ ಪಾಲುಕೊಡುವೆವು!!" — ಎಂದು ಹೇಳಲು, ಆಚಾರ್ಯರು ಸಂತೋಷಿಸಿ, —'ಭಲಾ! ಹಂಗ್ಹೇಳಿದರಲ್ಲವೆ? ಇನ್ನು, ನೋಡಿರಯ್ಯಾ! ನಾನು ನಿಮ್ಮ ಕಡೆಯವನು!!" — ಎಂದರು. ಮೂರ್ಖಬ್ರಹ್ಮನು ಆಚಾರ್ಯರನ್ನು ಬಹುಭಯಭಕ್ತಿಯಿಂದ ನಮಸ್ಕರಿಸಿ,—"ಸ್ವಾಮಿ! ತಾವು ನಮ್ಮ ಪಕ್ಷ ವಷ್ಟೆ! ಈ ಮದುವೆ ಶಾಸ್ತ್ರಕ್ಕೆ ಒಪ್ಪುವುದೆ? ತಾವು ಹೇಗೆ ಸಾಧಿಸುವಿರಿ? ಗುಟ್ಟಾಗಿ, ನನ್ನಲ್ಲಿ ಹೇಳಿದ್ದರೆ, ಇನ್ನೂ ಸ್ವಲ್ಪ ಹೆಚ್ಚಾಗಿಯೇ, ನಾನು ಕೊಡುವೆನು!"— ಎಂದುದಕ್ಕೆ, ಆಚಾರ್ಯರು—"ನೀನು ಒಳ್ಳೆಯ ಶಿಷ್ಯನಾಗಿ ಕಾಣುವೆಯಯ್ಯಾ! ದಾರಿಗೂ ಹೇಳಬೇಡ! ಇದಕ್ಕೆ, ದಾವ

ಶಾಸ್ತ್ರವೂ ಬೇಡ! ಪ್ರತಿ ಗಂಡಸಿಗೂ, ಪ್ರತಿ ಹೆಂಗಸಿಗೂ ಒಂದೊಂದು ಕೈಯ್ಗೆ ಅಯ್ದಯ್ದು ಬೆರಲುಗಳಿವೆಯುಷ್ಟೆ!–ಪಾಣಿಗ್ರಹಣವೆಂದರೆ, ಕಯ್ ಹಿಡಿಯುವುದು: ಕಯ್ ಹಿಡಿವುದೆಂದರೆ, ಬೆರಲುಹಿಡಿಯುವುದು!–ಅಯ್ದು ಬೆರಲುಗಳೇತಕ್ಕೆ? ಅಯ್ದು ಜನವೂ, ಒಂದೊಂದನ್ನು ಹಿಡಿದುಕೊಳ್ಳಬೇಕೆಂದಲ್ಲವೆ?— ನೀನು ಶುದ್ಧ ಮೂರ್ಖನು! ಒಂದು ಹುಡುಗಿಯ ಕಯ್ಯ ಅಯ್ದು ಬೆರಲುಗಳನ್ನು ಅಯ್ದು ಜನ ಗಂಡಸರು ಹಿಡಿಯುವುದೂ, ಒಬ್ಬ ಹುಡುಗನ ಕಯ್ಯ ಅಯ್ದು ಬೆರಲುಗಳನ್ನು ಅಯ್ದು ಜನ ಹೆಂಗಸರು ಹಿಡಿಯುವುದೂ ಶಾಸ್ತ್ರವಲ್ಲವೆ?— ಬ್ರಹ್ಮನ ಸೃಷ್ಟಿಗಿಂತಲೂ ಶಾಸ್ತ್ರವೆ?— ದಾವ ವಿದ್ವಾಂಸನು ತಾನೇ, ಈ ವಾಕ್ಯಾರ್ಥವನ್ನು ಸಿದ್ಧಾನ್ತಪಡಿಸಿ ಹೇಳ್ತಾನೆ? ಇದಿರಿಗೆ ಬರಲಿ!—ಬಂದರೆ, ನಾನೇನು, ಕಡಮೆಯಾದವನೆ?"—ಎಂದು ಹೇಳಲು, ಮೂರ್ಖಬ್ರಹ್ಮನು–"ಸರಿ ಸ್ವಾಮಿ! ಆದರೆ, ಎರಡು ಕಯ್ಗಳಿವೆಯಲ್ಲವೆ? ಎರಡು ಕಯ್ಗಳಿಂದ, ಹತ್ತು ಬೆರಲುಗಳಾದುವಷ್ಟೆ! ಹತ್ತುಹತ್ತು ಜನರೆಂದು ಏಕೆ ಹೇಳಬಾರದು?"— ಎನ್ನಲು, ಆಚಾರ್ಯರು—"ಅದೂ ಸರಿ! ಹಾಗೂ ಆಗಬಹುದು! ಒಂದು ಕಯ್ಯ ಬೆರಲುಗಳ ವಿವಾಹಕ್ಕೇ, ಇಷ್ಟು ವೆಚ್ಚವಾಗುವುದು ದೊರೆಗಳೇ, ಎಷ್ಟೋ ಸಾಲಮಾಡಬೇಕಾಗಿರುವುದು! ಹಾಗಿರುವಾಗ, ಎರಡು ಕಯ್ಗಳ ವಿವಾಹದ ಅವಸ್ಥೆಯೇನಾಗಬೇಕು?—"ನಾವು ಹಣವಿಲ್ಲದವರಾದುದರಿಂದ, ಒಂದೊಂದೇ ಬೆರಲನ್ನು ಹಿಡಿದು, ಒಬ್ಬೊಬ್ಬಳನ್ನೇ ಕಟ್ಟಿಕೊಂಡಿರುವೆವು!—ಅದಕ್ಕೆ, ಇದೇ ರಹಸ್ಯವು!!"—ಎಂದು ಉತ್ತರಕೊಟ್ಟರು. "ಸರಿ! ಸರಿ!—ನಮ್ಮ ಜನಗಳಿಗೆಲ್ಲ, ಮೆಲ್ಲಮೆಲ್ಲನೆ ತಿಳಿಯಿಸಿ, 'ಈ ವಿವಾಹವು ಒಪ್ಪತಕ್ಕುದಲ್ಲ'ವೆಂದು ಕೂಗಿಬಿಡುವ!"— ಎಂದು ಇಬ್ಬರೂ ಆಲೋಚಿಸಿ, ಸುತ್ತಣವರೆಲ್ಲರಿಗೂ ಹೇಳಿ, ಒಟ್ಟಿಗೆ, ಒಂದು ಗುಂಪಾಗಿ ಸೇರಿ, ಅವರೆಲ್ಲರೂ ಎದ್ದು ನಿಂದು,—"ಪುರೋಹಿತರೆ! ರಾಜರ ಮನೆಯ ಮದುವೆಯಾದ ಮಾತ್ರಕ್ಕೇ ನಾವೇನೂ, ಹೆದರುವರಲ್ಲ! ಈ ಅನ್ಯಾಯವನ್ನು ನಾವು ಒಪ್ಪಲಾರೆವು!! ಒಬ್ಬಳಿಗೆ

ಅಯ್ವರಿಲ್ಲಿಯಾದರೂ ಉಂಟೆ? ಮುಂದೆ ಮಕ್ಕಳುಮರಿಗಳು ಹುಟ್ಟಿದರೆ ತಂದೆಗಳಾರೆಂಬ ವಿಷಯದಲ್ಲಿ ಬಹು ಸಂದೇಹಗಳೊದಗಿ, ಧರ್ಮವಿರೋಧವಾಗದೆ ಇದ್ದೀತೆ? ಇದೆಂದಿಗೂ, ಶಾಸ್ತ್ರಸಮ್ಮತವಲ್ಲ!!-ಕೂಡದು!!!”- ಎಂದು ಕೂಗಿದರು.

ವಿದ್ಯಾವಂತರು ವಿರಳರಾಗಿಯೂ, ಮೂಢರು ಅನೇಕರಾಗಿಯೂ ಇರುವರೆಂಬುದನ್ನು ಮೊದಲೇ ತಿಳಿಯಿಸಿದೆಯಷ್ಟೆ! ಇಷ್ಟು ದೊಡ್ಡ ಗಲುಬೆಯನ್ನು ನಿಲ್ಲಿಸಿದ ಹೊರತು, ಮುಂದಣ ಕಾರ್ಯವು ನಡೆಯುವುದೇ ದುಸ್ಸಾಧ್ಯವಾಯಿತು. ಆ ಕಳವಳವನ್ನು ಮಹಾರಾಜನು ಕೇಳಿ, ಬಹಳವಾಗಿ ಮನನೊಂದು, ಪುರೋಹಿತರನ್ನು ಕುರಿತು—‘ಸ್ವಾಮಿ! ಮೊದಲೇ, ವಿಜ್ಞಾಪಿಸಿದೆನು. ತಾವು, ನನಗೇನೋ, ಸಮಾಧಾನವನ್ನು ಹೇಳಿದಿರಿ. ಈಗ, ಲೋಕವನ್ನು ಮೆಚ್ಚಿಸುವುದು ಹೇಗೆ?’-ಎನ್ನಲು, ಪುರೋಹಿತನು- ‘ಕಷ್ಟವಿಲ್ಲ! ವಿದ್ವಾಂಸರ ಮೂಲಕ, ಅದೇ ಸಂಗತಿಯನ್ನೇ ಒಪ್ಪಿಸುವೆನು!’— ಎಂದು ಅವನನ್ನು ಸಮಾಧಾನಗೊಳಿಸಿ, ಆಕ್ಷೇಪಮಾಡುವವರ ಒಂದು ಸಂಘವನ್ನೂ, ಸಮಾಧಾನಮಾಡುವವರ ಒಂದು ಸಂಘವನ್ನೂ ಏರ್ಪಡಿಸಿ, ಸಭಿಕರೆಲ್ಲರೂ ನಿಶ್ಶಬ್ದತೆಯಿಂದ ಕೇಳಬೇಕೆಂದು ಅವರನ್ನು ಪ್ರಾರ್ಥಿಸಿಕೊಂಡರು. ಎರಡು ಸಂಘಗಳಿಗೂ ಈ ರೀತಿಯಾಗಿ ಉತ್ತರ ಪ್ರತ್ಯುತ್ತರಗಳಾದುವು: —

**ಪೂರ್ವಪಕ್ಷ:**—‘ಈ ವಿಚಿತ್ರವಿವಾಹವು ಲೋಕಸಮ್ಮತವೂ, ಶಾಸ್ತ್ರಾಭಿಮತವೂ, ಆಗಿರುವುದಿಲ್ಲ!’

**ಸಿದ್ಧಾನ್ತ:**—‘ಏಕೆ? ಆಯ್ದು ಮಂದಿ ಪುರುಷರೇ ಒಪ್ಪಿರುವುದರಿಂದ, ಲೋಕ ಸಮ್ಮತವಾಯಿತು; ಮೇಲಾಗಿ, ತಾಯಿ ಅಪ್ಪಣೆಯಂತೆ ಇದು ನಡೆವುದಾದುದರಿಂದ, ಮಾತೃವಾಕ್ಯಪರಿಪಾಲನೆಗಾಗಿ, ಶಾಸ್ತ್ರಾಭಿಮತವೂ ಆದಂತಾಯಿತು!.’

**ಪೂರ್ವಪಕ್ಷ:**—‘ನೀನು ಹೇಳಿದ ಸಿದ್ಧಾನ್ತವು ನಮಗೆ ವಿಶದವಾಗಲಿಲ್ಲ; ಅದನ್ನು ವಿವರಿಸಿದ ಹೊರತು, ನಾನು ಒಪ್ಪಲಾರೆನು!’

**ಸಿದ್ಧಾನ್ತ:**—'ಹಾಗಾದರೆ, ಕೇಳು! – ಹಸೆಯ ಮೇಲೆ ಕುಳಿತಿರುವ ಈ ಅಯ್ವರಲ್ಲಿ, ಒಬ್ಬನು ಸ್ವಯಂವರದ ಪಣವನ್ನು ಗೆದ್ದನು. ರತ್ನಗಳಲ್ಲಿ, ಸ್ತ್ರೀಯೂ ಒಂದು ರತ್ನವಷ್ಟೆ! ಪಣವನ್ನು ಗೆದ್ದ ಸಂತೋಷವನ್ನು ತಾಯಿಗೆ ತಿಳಿಸುವುದಕ್ಕೆಂದು ಮನೆಗೆ ಹೋದಾಗ, ಬಾಗಿಲು ಹಾಕಿದ್ದಿತು. ಬಾಗಿಲು ತೆರೆವುದರೊಳಗಾಗಿ,–'ಅಮ್ಮ! ಒಂದು ರತ್ನವು ದೊರೆಯಿತು!'– ಎಂದು ಕೂಗಿದನು. ಎಲ್ಲ ಮಕ್ಕಳಲ್ಲಿಯೂ ಸಮದೃಷ್ಟಿಯನ್ನು ಉಳ್ಳವಳಾದುದರಿಂದ, ಆಕೆಯು ಅದನ್ನು ಅಯ್ವರೂ ಸಮವಾಗಿ ಅನುಭವಿಸಿರೆಂದಳು. ಅನಂತರ, ನಡೆದುದನ್ನು ತಿಳಿಯಿಸಿ, ಮಹಾಪತಿವ್ರತಾ ಶಿರೋಮಣಿಯಾದುದರಿಂದ, ಆಕೆಯಾಡಿದುದಕ್ಕೆ ಪ್ರತಿಯಿಲ್ಲದೆ, ಸೋದರರೆಲ್ಲರೂ ಮಾತೃವಾಕ್ಯವನ್ನು ಸಂರಕ್ಷಿಸಲೊಪ್ಪಿದರು. ಅದರಿಂದ, ಈ ವಿವಾಹವು ಎಲ್ಲರಿಗೂ ಅಭಿಮತವಾದುದು!'

**ಪೂರ್ವಪಕ್ಷ:**—'ಇದನ್ನು ನಿನ್ನ, ಒಬ್ಬನ, ಮಾತಿನ ಮೇಲೆಯೇ ನಂಬಬೇಕೊ? ಒಂದು ಸಾಕ್ಷ್ಯವೂ, ಒಂದು ಕಣ್ಣೂ, ಒಬ್ಬ ಮಗನೂ ದಾರ್ಢ್ಯತೆಯನ್ನು ಉಂಟು ಮಾಡುವುದಿಲ್ಲ!'

**ಸಿದ್ಧಾನ್ತ:**—'ಬೇಡ! ಮಹರ್ಷಿಗಳನ್ನು ಕೇಳು! ಇದು ಅವರ ಒಪ್ಪುಗೆಯಿಂದಲೇ, ನಡೆದುದಾಗಿದೆ!!'

**ಪೂರ್ವಪಕ್ಷ:**–'ಮಹರ್ಷಿಗಳ ಒಪ್ಪುಗೆಯುಂಟೆ? ಏನೆಂದು ಹೇಳಿರುವರು?'

**ಸಿದ್ಧಾನ್ತ:**—'ಈ ಕನ್ಯೆಯು ದೇವಾಂಶಸಂಭೂತೆಯು. ಹಿಂದೆ, ಈಕೆಯು ಈಶ್ವರಾನುಗ್ರಹವನ್ನು ಅಪೇಕ್ಷಿಸಿದಾಗ, 'ಪತಿಂ ದೇಹಿ!', 'ಪತಿಂ ದೇಹಿ!' ಎಂದು ಅಯ್ದಾವೃತ್ತಿ ಉಚ್ಚರಿಸಿದುದರಿಂದ, ಆ ಅನುಗ್ರಹದ ಮೂಲಕ, ಈಕೆಗೆ ಅಯ್ವರು ಪತಿಗಳಾಗಬೇಕಾಯಿತು! ಅಂತಹ ಅನುಗ್ರಹಕ್ಕೆ ತಕ್ಕಂತೆ, ದೇವಾಂಶೀಯರಾದ ಈ ಅಯ್ವರು ಇವರ ಪತಿಗಳಾಗಿರುವರು!! ಇವರ ವಿಷಯದಲ್ಲಿ ಆಕ್ಷೇಪಿಸುವರೆಲ್ಲರೂ ನರಕಭಾಗಿಗಳಾಗುವರು!!'

ಕೇಳಿ, ಪೂರ್ವಪಕ್ಷದವರು—'ಸ್ವಾಮಿ! ಪುರೋಹಿತರೆ! ನಮಗೆ ನರಕವು ಬೇಡ;—ಬೇಗನೆ, ಲಗ್ನಕಾರ್ಯವು ನೆರವೇರಲಿ! ಬ್ರಾಹ್ಮಣರೆಲ್ಲರೂ ಕ್ಷುಧಾತುರರಾಗಿರುವರು!!-ಅಂತಹ ಮಹನೀಯರೂ, ದೇವಾಂಶಿಯರೂ ಆಗಿರುವುದರಿಂದಲೇ, ವಧೂವರರು ಇಂತಹ ತೇಜಃಪುಂಜರಾಗಿರುವುದು! ವಿವಾಹ ಕಾಲದಲ್ಲಿ, ಸ್ವಲ್ಪ ವಿನೋದವಾಗಿರುವುದು ಉತ್ತಮವೆಂದು, ನಾವು ಚರ್ಚಿಸಿದೆವಲ್ಲದೆ, ಮತ್ತೆ ಬೇರೆ ಇಲ್ಲ!! ನಮ್ಮಲ್ಲಿ ಅಂತಹ ಯೋಗ್ಯತೆಯೇನಿರುವುದು?' ಎಂದ ಮೇಲೆ, ವಿವಾಹವೆಲ್ಲವೂ ಸಾಂಗವಾಗಿ ನೆರವೇರಿತು. ಬ್ರಾಹ್ಮಣರಾದಿಯಾಗಿ ಸರ್ವರೂ, ಎಲ್ಲ ಭಾಗಗಳಲ್ಲಿಯೂ ತೃಪ್ತಿಗೊಂಡರು. ಎಲ್ಲರೂ ಸೇರಿ, ವಧೂವರರನ್ನು ಆಶೀರ್ವದಿಸಿದರು. ಕೊನೆಗೆ ಎಲ್ಲರೂ ತಮ್ಮ ತಮ್ಮೂರುಗಳಿಗೆ ತೆರಳುವಾಗ, ದಾರಿಯಲ್ಲಿ—'ಇನ್ನು ಮುಂದೆ, ಧರ್ಮಶಾಸ್ತ್ರ ಮುಂತಾದವುಗಳಿಂದ ಏನೂ ಪ್ರಯೋಜನವಿಲ್ಲ! ದೊಡ್ಡವರು ಹೇಳಿದಂತೆ, ನಡೆವುದೇ, ಮೇಲು!'—ಎಂದು ಸಿದ್ಧಾಂತಮಾಡಿಕೊಂಡರು.

ಇಂತಹ ವಿಚಿತ್ರ ವಿವಾಹವನ್ನು ನೋಡಬೇಕೆಂಬ ಬಯಕೆಯು ಎಲ್ಲರಲ್ಲಿಯೂ ಹುಟ್ಟುವುದು ಸಹಜ! ಹಾಗಾದರೆ, 'ಮಹಾಭಾರತ'ದಲ್ಲಿ, ಏನಾದರೂ, ಇದೆಯೊ?—ನೋಡಿ!!

R. SRINIVAS RAO.

# ಸೋಜಿಗದ ಮೋಸ.

i.

ಏಪ್ರಿಲ್ ತಿಂಗಳ ದಿನವೊಂದು ಅಂತವಾಗುತ್ತಿದ್ದಿತು. ಬಾಜೀಮಿತ್ರನು ರಾಮ ಸರ್ಕಾರನ ಮನೆಯಲ್ಲಿ 'ಇಸ್ಪೀಟ'ನ್ನಾಡುತ್ತಿದ್ದನು. ಪಕ್ಕನೆ ಅವನ ಮಗನು ಮಧ್ಯದಲ್ಲಿ ಪ್ರವೇಶಿಸಿ, ಊರ್ಧ್ವಶ್ವಾಸದಿಂದ-'ಅಪ್ಪಾ! ಮನೆಗೆ ಹೊರಡು; ತಂತಿ ಬಂದಿದೆ'—ಎಂದು ಕೂಗಿದನು. 'ತಂತಿ' ಎಂಬ ಶಬ್ದ

ವನ್ನು ಕೇಳಿ, ಅಲ್ಲಿದ್ದವರೆಲ್ಲರೂ ಗಾಬರಿಯಾದರು. ತಂತಿ ಬರುವುದೂ, ಕೆಂಪು ಮುಂಡಾಸಿನವರನ್ನು ನೋಡುವುದೂ ಹಳ್ಳಿಯಲ್ಲಿ ಅಪರೂಪ; ಮತ್ತೂ 'ತಂತಿ' ಎಂಬ ಶಬ್ದಕ್ಕೆ ಗ್ರಾಮ ನಿಘಂಟುವಿನಲ್ಲಿ ದುರ್ವಾರ್ತೆಯನ್ನು ತಿಳುಹುವ 'ಯಮನ-ಚೀಟಿ' ಎಂಬ ಅರ್ಥವಿದ್ದುದರಿಂದ, ಗ್ರಾಮದಲ್ಲಿ ಅನೇಕರು ಅದನ್ನೊಡೆದು ನೋಡುವುದಕ್ಕೆ ಮೊದಲೇ ತಿಲ-ದರ್ಭೆಗಳನ್ನು ಸಿದ್ಧಮಾಡಿಕೊಳ್ಳುತ್ತಿದ್ದರು.

'ಇಸ್ಪೀಟ'ನ್ನು ಹೊತ್ತು ಹಾಕಿ, ಕಾಲನ್ನು ಕೆರಕ್ಕೆ ತೂರಿಸಿ, ಬಾಜೀಮಿತ್ರನು ಶೀಘ್ರಗತಿಯಿಂದ ಮನೆಗೆ ಬಂದನು. ತಂತಿಯ ಜವಾನನು ದೂರದಲ್ಲಿರುವ 'ಆಫೀಸಿ'ನಿಂದ ನಡೆದು, ಬಿಸಿಲಿಂದ ದಣಿದವನಾಗಿ, ಮನೆಯ ಮುಂಗಡೆ ಜಗಲಿಯ ಮೇಲೆ ದೊಡ್ಡದಾದ ದೊಣ್ಣೆಯನ್ನು ಸಮೀಪದಲ್ಲಿಟ್ಟುಕೊಂಡು ಕುಳಿತಿದ್ದನು. ಅವನ ಸುತ್ತಲೂ ಅನೇಕರು ಹುಡುಗ-ಹುಡುಗಿಯರು! ರಸೀದಿಗೆ 'ಸಹಿ'ಯನ್ನು ಹಾಕಿ, ನಡುಗುವ ಬೆರಳುಗಳಿಂದ ಬಾಜೀಮಿತ್ರನು 'ಟೆಲಿಗ್ರಾಮು'ನ್ನು ಒಡೆದುನೋಡಿದನು. ಒಡನೆ ಮುಖವು ಸಂತೋಷದ ಬೆಳಕಿನಿಂದ ಬೆಳಗಲಾರಂಭಿಸಿತು. ಒಳಗೆ ಬಂದು, ಆತುರದಿಂದ ಕಾದುಕೊಂಡಿದ್ದ ಹೆಂಡತಿಯೊಡನೆ— 'ಶುಭ ವರ್ತಮಾನ!' ಎಂದನು.

'ಏನು? ನಾದಿನಿ ಹಡೆದಳೆ? ಗೌರಿ ದೊಡ್ಡವಳಾದಳೆ?'

'ಅಲ್ಲ; ಅಲ್ಲ. ವಿನೋದನು ಬರುತ್ತಾನೆ!'

'ವಿನೋದ? ಎಲ್ಲಿಂದ? ಯಾವಾಗ ಬರುತ್ತಾನೆ?'

'ಅದನ್ನವನು ತಿಳಿಸಿಲ್ಲ.—ನಾಳೆ ಬರುವುದೆಂದು ತೋರುತ್ತಿದೆ.'

ವಿನೋದನೂ ಬಾಜಿಯೂ ಸಹೋದರರು; ಚಿಕ್ಕಂದೇ ತಂದೆತಾಯಿಗಳನ್ನು ಕಳೆದುಕೊಂಡರು. ಬಾಜಿಯ ಹೆಂಡತಿ ಇನ್ನೂ ಮಗುವಾಗಿದ್ದ ಆ ವಿನೋದನನ್ನು ತನ್ನ ಮಗುವಿನಂತೆ ಸಾಕಿ, ದೊಡ್ಡದು ಮಾಡಿದ್ದಳು. ಆದರೆ, ವಿನೋದನಾಗ ತುಟಿಮೀರಿದ ಹಲ್ಲಾಗಿದ್ದುದರಿಂದ, ಸಹೋದರರಿಬ್ಬರಿಗೂ ಆಗಾಗ ಜಗಳವು ನಡೆಯುತ್ತಲೇ ಇದ್ದುದು. ಒಮ್ಮೆ, ಬಾಜಿ

ಕೋಪದಿಂದ ಅಂಧನಾಗಿ, ವಿನೋದನನ್ನು ಹೊಡೆದುಬಿಟ್ಟನು. ಅದೇ ದಿನ ವಿನೋದನು ಮನೆಯಿಂದ ಪಲಾಯನ! ಒಂದು ದಿನ, ಎರಡು, ಮೂರು,—ಇಡೀ ವಾರವೇ ಕಳೆಯಿತು! ವಿನೋದನು ಮಾತ್ರ ಹಿಂದಿರುಗ ಲಿಲ್ಲ. ಬಾಜಿ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಪಡಿಸಿದನು; ಹತ್ತು ರೂಪಾಯಿಗಳ ಬಹುಮಾನವನ್ನು ಕೊಡುತ್ತೇನೆಂದನು; ಆದರೂ ಫಲ ವಾಗಲಿಲ್ಲ. ವಿನೋದನ ವರ್ತಮಾನವೇನೂ ದೊರೆಯಲಿಲ್ಲ. ತಿಂಗಳು ಗಳು ವರ್ಷಗಳಾಗಿ,—ಈಗ ಮೂರು ವರ್ಷಗಳು! ವಿನೋದನ ವಿಷಯ ವನ್ನು ಗೊತ್ತುಮಾಡಿಕೊಳ್ಳಲಾರದೆ, ಬಾಜಿಗೆ ಮುಖವಿಲ್ಲ. ಅದೃಶ್ಯ ನಾಗಿದ್ದ ಆ ತಮ್ಮನು ಪುನಃ ಮನೆಗೆ ಬರುವನೆಂಬ ಸಮಾಚಾರವನ್ನು ಕೇಳಿ, ಅವನ ಸಂತೋಷಕ್ಕೆ ಪಾರವಿಲ್ಲ! ಸಾಯಂಕಾಲವೇ, ಅಂಗಳದಲ್ಲಿ ರುವ ತುಲಸೀದೇವಿಗೆ ಬಗೆಬಗೆಯ ಕಜ್ಜಾಯಗಳನ್ನರ್ಪಿಸಿದರು. ಮುಖ್ಯ, ಮಕ್ಕಳ ಪುಣ್ಯ!—ಸಿಕ್ಕಿದುದು ಸಿಕ್ಕಿತೆಂದು, ಕೋಸುಂಬರಿ ಕಾಳನ್ನೂ ಬೆಲ್ಲದ ಪಾನಕವನ್ನೂ, ಗೊತ್ತು ಗುರಿಯಿಲ್ಲದಂತೆ ಹೊಟ್ಟೆಯಲ್ಲಿ ಜಮಾ ಯಿಸಿ ಬಿಟ್ಟು, ಮರುದಿನ ಮಜ್ಜಿಗೆ ಹುಲ್ಲಿನ 'ಅಜಮಾಯಿಷಿ'ಗಾಗಿ ಗ್ರಾಮವನ್ನೆಲ್ಲ ಹುಡುಕಬೇಕಾದುದು!

ಮರುದಿನ ಮಧ್ಯಾಹ್ನ, ವಿನೋದನ ಗಾಡಿ ಗ್ರಾಮ ಪ್ರವೇಶಮಾಡಿತು. 'ನಗದೀ' ಪೆಟ್ಟಿಗೆಯನ್ನು ಕೈಯಲ್ಲಿ ಹಿಡಿದುಕೊಂಡು, ವಿನೋದನು ಕೆಳ ಗಿಳಿದನು. ಗಾಡಿಯವನೂ ಆಳೂ ಸೇರಿ, ಸಾಮಾನುಗಳನ್ನು ಒಳಗೆ ತಂದಿಟ್ಟರು. ವಿನೋದನು ಗೃಹಪ್ರವೇಶ ಮಾಡಿ, ಅಣ್ಣ-ಅತ್ತಿಗೆಯರಿಗೆ ನಮಸ್ಕರಿಸಿ,—ಮಕ್ಕಳನ್ನು ತೊಡೆಯ ಮೇಲೆ ತಟ್ಟತೊಡಗಿದನು. ಆ ಮೇಲೆ ಅತ್ತಿಗೆಯನ್ನು ಕರೆದು, ಪೆಟ್ಟಿಗೆಯನ್ನು ಕಯ್ಯಲ್ಲಿಟ್ಟು,—'ಅತ್ತಿಗೆ! ನಿನ್ನ ಕಬ್ಬಿಣದ ಪೆಟ್ಟಿಗೆಯಲ್ಲಿ ಇಟ್ಟುಬಿಡು!'—ಎಂದನು. ಪೆಟ್ಟಿಗೆ ಭಾರ ವಾಗಿದ್ದ ವಿಚಾರವು ಗೊತ್ತಾಗದಿರಲಿಲ್ಲ. ಅತ್ತಿಗೆ ಸಂತೋಷಪಟ್ಟು, ಅದ ನ್ನಿಡುವಾಗ,—'ಇಷ್ಟು ದಿನ ಎಲ್ಲಿದ್ದೆ?'

'ಮೋತೀಹರಿಯಲ್ಲಿ.'

'ಕೊನೆಗೆ, ಈಗಲಾದರೂ ನಮ್ಮ ಜ್ಞಾಪಕವಾಯಿತೆ?'

'ಕೆಲಸವನ್ನು ಬಿಟ್ಟು ಹೇಗೆ ಬರಲಿ,—ಅತ್ತಿಗೆ?'

'ಸ-ಂ-ಬ-ಳ?'

'ನೂರಿಪ್ಪತ್ತು.'

'ಮದುವೆಯಾಯಿತೋ?'

'ಮದುವೆ?'

ಅತ್ತಿಗೆ ಇನ್ನೇನೋ ಹೇಳಬೇಕೆಂದಿರುವಾಗ, ಬಾಜಿ ಒಳಗೆ ಬಂದು,—"ಇದೇನು ಹುಡುಗಾಟ! ದಣಿದು ಬಂದಿದ್ದಾನೆ! ಅನ್ನನೀರಿನ ಯೋಚನೆಯೇ ಇಲ್ಲದೆ ಏನು ಚಕ್ಕಂದ?"—ಎಂದನು.

ಭೋಜನವಾಯಿತು. – ಸಾಯಂಕಾಲವೂ ಆಯಿತು. ಸ್ನೇಹಿತರು ಅನೇಕರು ಆಗಲೇ ಬಂದು ಸಭೆಸೇರಿದ್ದರು. ಸಹೋದರರಿಬ್ಬರೂ ಸಂತೋಷದಿಂದ ನಡುವೆ ಕುಳಿತಿದ್ದರು. ನಂಟರಿಷ್ಟರಿಗೂ, ಗುರುಹಿರಿಯರಿಗೂ ಸಾಷ್ಟಾಂಗವನ್ನು ಮಾಡಿಮಾಡಿ, ವಿನೋದನ ಕೈಕಾಲುಗಳು ನೋಯಹತ್ತಿದ್ದುವು. ಕೆಲವರು—"ಬಹುಕಾಲ ಸಮಾಚಾರವನ್ನೇನೂ ತಿಳಿಯದೆ, ಹುಡುಗನು ಎಲ್ಲಿಗೆ ಯಾರ ಜತೆಯಲ್ಲಿ ಹೋಗಿರಬಹುದೋ ಎಂದುಕೊಂಡಿದ್ದೆವು. ನಿಮ್ಮಮ್ಮನ ಪುಣ್ಯದಿಂದ, ನೀನೀಗ ನಿಜವಾಗಿಯೂ ದೊಡ್ಡ ಮನುಷ್ಯನಾದೆ. ನೂರಿಪ್ಪತ್ತು ರೂಪಾಯಿಯೆಂದರೆ ಈ ಕಾಲದಲ್ಲಿ ಸಾಮಾನ್ಯವಾದ ಮಾತಲ್ಲ."—ಎಂದರು.

(ii.)

ಮರುದಿನ ಬೆಳಗ್ಗೆ ವಿನೋದನು ಮನೆಯ ಮಕ್ಕಳನ್ನು ಚಾವಡಿಯಲ್ಲಿ ಸುತ್ತಲೂ ಕುಳ್ಳಿರಿಸಿಕೊಂಡು,—'ನಾನೇನು ತಂದಿರುವೆನೋ ಗೊತ್ತುಂಟೇ?'—ಎಂದನು.— 'ಏನು, ಚಿಕ್ಕಪ್ಪ? ಏನು?'— ಎಂದು ಮಕ್ಕಳು ಗಲಭೆಗಾರಂಭಿಸಿದರು. ವಿನೋದನು 'ಟ್ರಂಕಿ'ನ ಬಾಯನ್ನು ತೆರೆದು, ಒಬ್ಬನಿಗೆ ಒಂದು ಮಣ್ಣಿನ ಮಂಗವನ್ನೂ ಇನ್ನೊಬ್ಬನಿಗೆ ಒಂದು

ಚೆಂಡನ್ನೂ, ಮತ್ತೊಬ್ಬನಿಗೆ ಒಂದು ಗಾಜಿನ ಹೆಣ್ಣುಬೊಂಬೆಯನ್ನೂ ಹಂಚಿದನು. ಆ .ಮೇಲೆ, ಅತ್ತಿಗೆಯ ಮುಖವನ್ನು ನೋಡಿ,—'ನನಗೇನು ತಂದಿರುವೆಯೆಂದು ಕೇಳುವುದಿಲ್ಲವೇ?'—ಎಂದನು.

'ಏನು ತಂದಿರುವೆಯೋ ಕೊಡು, ತೆಗೆದುಕೊಳ್ಳುತ್ತೇನೆ,–ಹೋಗಲಿ! ಏನು ತಂದಿರುವೆ? ಹೇಳಿಬಿಡು!'

'ನೀನೇ ಯೋಚಿಸು.'

'ಹೇಗೆ?'

'ಅಥವಾ ಅದು ಏತರ ಹಾಗಿರಬಹುದು?—ಹೇಳಲಾರೆಯಾ?'

'ಹೇಳುತ್ತೇನೆ ತಾಳು; ಸ್ವಲ್ಪ ಯೋಚಿಸಬೇಕಾಗಿದೆ. ಮಂಗನಲ್ಲ;—ಮನೆಯಲ್ಲಿ ಒಂದು ಮೊದಲೇ ಇದೆ!'

ಕೋಪ ಬಂದವನಂತೆ ನಟಿಸಿ, ವಿನೋದನು—'ಏನತ್ತಿಗೆ? ಅಣ್ಣನನ್ನು ಮಂಗನೆಂದು ಹೇಳುವೆಯಾ?'—ಎಂದನು.

'ಈಗ ನೋಡು! ನಾನೇನಾದರೂ ಹೆಸರು ಹೇಳಿದೆನೊ? ನೀನೇ ಏನೋ ಗುಣಿಸಿಕೊಂಡು, ಇಷ್ಟಪ್ರಕಾರ ಹೇಳಿಕೊಂಡರೆ, ನಾನೇನು ಮಾಡಬೇಕು?'

'ಹೆಣ್ಣುಬೊಂಬೆ ಬೇಕಾಗಿಲ್ಲ. ಅದೂ ಮನೆಯಲ್ಲಿ ಮೊದಲೇ ಇದೆ!'

'ಇಲ್ಲ,—ಬೇಕಾದುದು ಮಯಣದ ಹೆಣ್ಣುಬೊಂಬೆ. ನೀನೊಂದನ್ನು ಸಂಪಾದಿಸಿಕೊಂಡು, ಮನೆಗೆ ಕರೆತಂದರೆ, ನೋಡಿ ಸಂತೋಷಪಡುತ್ತೇನೆ!'

'ನಾನು ತಂದಿರುವುದನ್ನು ನೀನು ಕಣ್ಣಿಂದ ನೋಡಿದುದಾದರೆ, ಈಗಣ ನಿನ್ನ ಸಂತೋಷವು ಇಮ್ಮಡಿಯಾಗಿಯೇ ಆಗುವುದು. ಅದಕ್ಕಾಗಿಯೇ, ನನಗೆ ಇಷ್ಟು ವಿಳಂಬ. ನಾನು ಸ್ವಲ್ಪ ಹಣವನ್ನು ಕೂಡಿಡುತ್ತಿದ್ದೆನು. ಎಲ್ಲಿ ನನ್ನ ಪೆಟ್ಟಿಗೆ?'

ಕಬ್ಬಿಣದ ಪೆಟ್ಟಿಗೆಯನ್ನು ತೆರೆದು, ಹಸುರುಬಟ್ಟೆಯಲ್ಲಿ ಸುತ್ತಿಟ್ಟ ಆ ಪೆಟ್ಟಿಗೆಯನ್ನು ಅತ್ತಿಗೆ ಮುಂದಿಟ್ಟಳು. ವಿನೋದನು ಬೀಯಗದ ಕೈಯನ್ನು ಅಂಗಿಯ ಜೇಬುಗಳಲ್ಲಿಯೆಲ್ಲ ಹುಡುಕಿದನು. ಎರಡು ಟ್ರಂಕುಗಳನ್ನು ತಲೆಕೆಳಗು ಮಾಡಿ ನೋಡಿದರೂ — ಸಿಕ್ಕಲಿಲ್ಲ. ಹತಾಶನಾಗಿ,—'ಬಂಡಿಯಲ್ಲಿ ಬಿಟ್ಟಿರಬಹುದು!'— ಎಂದು ತಲೆಯನ್ನು ಕೈಗಳಿಂದ ಆದರಿಸಿಕೊಂಡು, ಯೋಚಿಸುತ್ತ, ಬಿದ್ದುಕೊಂಡನು.

ಅವನನ್ನು ಸಮಾಧಾನಪಡಿಸುವ ಉದ್ದೇಶದಿಂದ ಅತ್ತಿಗೆ—'ಬೀಯಗದ ಕೈ — ಹೋದರೆ ಹೋಗಲಿ! ಏನು ಭಾಗ್ಯವದು! ಪದಾರ್ಥಗಳೆಲ್ಲ ಸುರಕ್ಷಿತವಾಗಿರುವುವಲ್ಲ? ಸಾಕು! ಇನ್ನೇನು? ಹೆಚ್ಚೆಂದರೆ, ಬೀಯಗವನ್ನೊಡೆಯಬೇಕು; ಅಷ್ಟೇ ತಾನೇ?'

ದುಃಖದಲ್ಲಿಯೂ ನಗುತ್ತ ವಿನೋದನು ಹೇಳಿದನು:—'ನಿತ್ಯದ ವೆಚ್ಚಕ್ಕೆ ಇಟ್ಟುಕೊಂಡಿದ್ದ ಹಣವೂ ಅದರಲ್ಲಿದೆ. ನನ್ನ ಕೈಯಲ್ಲಿ ಒಂದು ಕಾಸೂ ಇಲ್ಲ — ಅತ್ತಿಗೆ!'

'ಪ್ರಕೃತ ಏನು ಬೇಕೋ—ಹೇಳು. ನಾನು ಕೊಡುವೆನು.'

'ಬೀಯಗವನ್ನು ಕಲಿಕತ್ತೆಯಲ್ಲಿಯೇ ತೆಗೆಯಿಸಬೇಕಾಯಿತು! ನಿನ್ನ ಆಭರಣಗಳಿಗಾಗಿ, ಎಷ್ಟೋ ಪ್ರಯಾಸಪಟ್ಟಿದ್ದೆನು. ಅದನ್ನೀಗ ನಿನಗೆ ತೋರಿಸುವುದಕ್ಕೂ ಅದೃಷ್ಟವಿಲ್ಲದೆ ಹೋಯಿತು! ಅದೇ ನನಗೀಗ ಕೋಪವನ್ನುಂಟುಮಾಡುವುದು.'

'ಅದನ್ನು ಕುರಿತು ಚಿಂತಿಸದಿರು. ಎರಡು ದಿನಗಳಲ್ಲಿಯೇ ಸರಿಪಡಿಸಬಹುದು. ನೀನು ತಂದುದೇನು? ಹೇಳು.'

'ಒಂದು ಜೊತೆ ಬಂಗಾರದ ಬಳೆ.'

ಅತ್ತಿಗೆಯ ಸಂತೋಷವು ಕುತ್ತಿಗೆಯ ವರೆಗೂ ಏರಿತು. ಅಷ್ಟರಲ್ಲಿ ವಿನೋದನು—'ಚಾ' ಮಾಡುವುದಕ್ಕೆ ಬರುವುದೇ? ಬೆಳಗ್ಗೆ 'ಚಾ' ಕುಡಿಯುವುದು ಹೊಸ ಪದ್ಧತಿ!' — ಎಂದನು.

ಅತ್ತಿಗೆಯು ಮನಸ್ಸು ಆಶ್ಚರ್ಯದಿಂದ ತುಂಬಿತು. 'ವಿನೋದನ ಕೋಪವು ಎಷ್ಟು ಬೇಗ ಅಡಗಿಹೋಯಿತು!'—ಎಂದುಕೊಂಡು,— 'ಮನೆಯಲ್ಲಿ ಚಾಸೊಪ್ಪು ಕಡಮೆಯಾಗಿದೆ'—ಎಂದಳು.

'ನನ್ನಲ್ಲಿದೆ,—ಇನ್ನು ಬೇಕಾದುದು ಕುದಿಯುವ ನೀರು, ಸಕ್ಕರೆ, ಹಾಲು.'

'ಚಿಕ್ಕಪ್ಪ! ಕಚ್ಚಪ್ಪ!—ನಮಗೂ ಸ್ವಲ್ಪ ಕೊಡು! ನಾವು 'ಚಾ'— 'ಟೀ' ಕುಡಿಯುತ್ತೇವೆ!—ಎಂದು ಮಕ್ಕಳು ಕೂಗುತ್ತ, ಕುಣಿಯಲಾರಂಭಿಸಿದರು.

ಬಿಸಿನೀರನ್ನು ತಂದು, ಒಂದು ಹಿಡಿ ಚಾಸೊಪ್ಪು ಹಾಕಿ, ಮುಚ್ಚಿಟ್ಟಾಯಿತು. ಅಷ್ಟರಲ್ಲಿ, ಮಕ್ಕಳಲ್ಲಿ ಒಬ್ಬನೊಂದು ಗಿಂದಲು, ಒಬ್ಬನೊಂದು ಬಾಟಲಿ, ಒಬ್ಬನೊಂದು ಕಲ್ಲುಗಡಿಗೆ, ಒಬ್ಬಳೊಂದು ತಂಬಿಗೆ—ಇವುಗಳನ್ನು ತಂದು ಸುತ್ತಲೂ ಕುಳಿತರು. ಚಿಕ್ಕ ಮಗುವೊಂದು ಪಾತ್ರವೇನೂ ದೊರೆಯದೆ, ಅಪಾತ್ರನ ಹಾಗೆ, ಒರಳುಕಲ್ಲಿನ ಹತ್ತಿರ ಹೋಗಿ ಕುಳಿತುಕೊಂಡಿತು. 'ಚಾಯಿ' ಸಿದ್ಧವಾಗಿ, ಹಾಲುಸಕ್ಕರೆಯನ್ನು ಬೆರೆಯಿಸಿ, ಎಲ್ಲರ ಪಾತ್ರೆಗಳಲ್ಲಿಯೂ ಅಷ್ಟು ಹೊಯ್ದುದಾಯಿತು. ಮಕ್ಕಳ ಹೊಟ್ಟೆಗೆ ಅದು ಮುಟ್ಟಿತೋ ಇಲ್ಲವೋ—ತಿಳಿಯದು. ಮಕ್ಕಳೆಲ್ಲ ಸೇರಿಕೊಂಡು, ನೆಲದ ಮೇಲೆ ಬಿದ್ದು ಹೊರಳಾಡಿ—ಸದ್ಯಕ್ಕೆ 'ಚಾ—ಟೀ' ಮಾಡಕೂಡದೆಂಬಷ್ಟು ಕೋಲಾಹಲವನ್ನೆಬ್ಬಿಸಿದರು.

ಗ್ರಾಮದಲ್ಲಿದ್ದ ಇತರ ಯುವಕರು,—'ಬೀ. ಏ' ಪಾಸು ಮಾಡಿದವರು,—ಕಲ್ಕತ್ತಾದಲ್ಲಿ 'ಹಜೂರಾಫೀಸಿ'ನಲ್ಲಿ ಇಪ್ಪತ್ತು ರೂಪಾಯಿಯ ಕೆಲಸ ಕೊಡಬೇಕೆಂದು ಅರ್ಜಿ ಬರೆದುಕೊಂಡು, ಉತ್ತರಾಭಿಲಾಷೆಯಲ್ಲಿ ಆತುರದಿಂದ, ಅಂಚೆಯ ಮನೆಯವರ ಶಾಪಕ್ಕೆ ಪಾತ್ರರಾಗಿದ್ದರು. ಇನ್ನು ಕೆಲವರು 'ಎಮ್. ಏ'ಕಾರರು ನಾಲ್ವತ್ತು ರೂಪಾಯಿಯ ಉಪಾಧ್ಯಾಯರ ಕೆಲಸವನ್ನು ಸಂಪಾದಿಸಿಕೊಳ್ಳಲಾರದೆ, 'ಬೆಲ್ಲವನ್ನು ತೂಗಿದರೇನು?' ಎಂದು ಕನವರಿಸುತ್ತಿದ್ದರು. ಹಳಬರಾದ ನಮ್ಮ ಚಕ್ರವರ್ತಿ

ಮಹಾಶಯರು—'ಭ್ರಾತೃವೆ! ಅದೆಲ್ಲ ಅದೃಷ್ಟದ ಮಾತು. ಏಕೆ? ನಮ್ಮ ವಿನೋದನೇನು ಎ. ಬಿ. ಪ್ಯಾಸು ಮಾಡಿದ ಎ. ಎಮ್. ಬಿರುದಿನವನೊ?'—ಎಂದರು. ಅನೇಕರು—'ಕೇವಲ ನಿಜ,' 'ಅದು ಸತ್ಯ,' 'ನಿಜವಾದ ಮಾತನ್ನೇ ಹೇಳಿದೆ'—ಎಂದು ಮುಂತಾಗಿ ತಲೆಯುಲ್ಲಾಡಿಸಿದರು. ಹೊಸ ಸ್ಕೂಲಿಗೆ ಸೇರಿದವರೊಬ್ಬರು ಸ್ವಲ್ಪ ರೇಗಿಕೊಂಡು,—'ಅದೇನೋ ನಿಜ. ಆದರೆ ಅದರೊಂದಿಗೆ ಬುದ್ಧಿವಂತಿಕೆಯೂ ಬೇಕೇ ಬೇಕು'—ಎಂದರು. ಕೇಳಿ, ಮತ್ತೊಬ್ಬನು—'ವಿನೋದನು ಬುದ್ಧಿಶಾಲಿಯೆಂಬುದು ಹುಟ್ಟುವ ಮೊದಲೇ ಗೊತ್ತಾಗಿದ್ದಿತು'—ಎನ್ನಲು, ಸರ್ಕಾರ ಮಹಾಶಯನು,—'ಬಾಲ್ಯದಲ್ಲಿ ಸ್ವಲ್ಪ ಮದ್ದನ ಹಾಗಿದ್ದನು. ಆದರೆ, ದೊಡ್ಡವನಾಗುತ್ತ ಬಂದ ಹಾಗೆ ಸ್ವಭಾವವು ಬದಲಾಗುವುದೇನು ಆಶ್ಚರ್ಯವೆ? ಮುಖ್ಯ,—ದೇವರು ಅವನನ್ನು ಇನ್ನೂ ಅಭಿವೃದ್ಧಿಗೆ ತಂದು, ಅವನ ಸಂಬಳವನ್ನು ಹೆಚ್ಚಿಸಿ, ಜಾಗ್ರತೆಯಾಗಿಯೆ ಒಂದು ಲಗ್ನಮಾಡಿಸಲೆಂದು ನಮ್ಮ ನಿರಂತರ ಪ್ರಾರ್ಥನೆ!' ಎಂದನು.

ಸಹೋದರನ ಮುಖವನ್ನು ನೋಡಿ, ನಸುನಗುತ್ತ, ಬಾಜಿ—'ತಮ್ಮ ಆಶೀರ್ವಾದ!'—ಎಂದನು.

(iii)

ಅತುಳಘೋಷನು ನೆರೆಯ ಗ್ರಾಮದಲ್ಲಿದ್ದ ಒಬ್ಬ ಜಮೀನುದಾರನು. ಅವನಿಗೆ ಅವಿವಾಹಿತೆಯಾದ ಹದಿಮೂರು ವರ್ಷದ ಒಬ್ಬ ಮಗಳು. ವಿನೋದವಿಹಾರಿ ಅದೇ ಜಾತಿಗೆ ಸೇರಿದವನು; ಒಳ್ಳೇಯ ಕುಟುಂಬದವನು; ಯುವಕನು; ಸಂಪಾದಿಸಿ ತರತಕ್ಕವನು;—ಇನ್ನೂ ಬ್ರಹ್ಮಚಾರಿ. ಎಂದ ಮೇಲೆ, ಇವೆರಡು ವಿಷಯಗಳ ಪ್ರತಿಫಲವಾಗಿ, ಸಾಮಾನ್ಯವಾಗಿ ಏನು ಸಂಭವಿಸಬಹುದೆಂಬುದನ್ನು ಊಹಿಸಲಾಗುವುದಿಲ್ಲವೇನು?

ಅಂದು ಮಧ್ಯಾಹ್ನ ಅತುಳಘೋಷನು ಬಾಜೀಮಿತ್ರನ ಬಳಿಗೆ ಒಬ್ಬ ಪಂಚಾಯಿತ—ಯಾನೆ—ಮಧ್ಯಸ್ಥನನ್ನು ಕಳುಹಿದನು. 'ಅಂತಹ

ನಂಟಿನಿಂದ ತನಗೆ ಸಂತೋಷವೇ. ಆದರೆ ಮನೆಯವರನ್ನೂ, ಹುಡುಗನನ್ನೂ ಕೇಳಿ, ಹೇಳುತ್ತೇನೆ'—ಎಂದು ಬಾಜಿ ಉತ್ತರವನ್ನು ಕಳುಹಿದನು. ಮನೆಯವರು ಅಭಿಪ್ರಾಯಪಟ್ಟರು:—'ಹುಡುಗಿಯನ್ನು ನೋಡಿದಲ್ಲಿ ಆಗಬಹುದು;—ಆಕ್ಷೇಪವಿಲ್ಲ. ವರದಕ್ಷಿಣೆಯ ವಿಷಯದಲ್ಲಿ ಸ್ವಲ್ಪ ಧಾರಾಳ ಮನಸ್ಸುಮಾಡಿದರೆ, ಮದುವೆ ಯಾವ ತೊಂದರೆಯೂ ಇಲ್ಲದೆ ಇದೇ ತಿಂಗಳಲ್ಲಿಯೇ ನಡೆಯಬಹುದು.'

ಹುಡುಗಿಯನ್ನು ಮೊದಲು ನೂರಾರು ಬಾರಿ ನೋಡಿದ್ದರೂ, ನಿತ್ಯವೂ ನೋಡುತ್ತಿದ್ದರೂ, ಮದುವೆಯ ಮಾತೇನಾದರೂ ಬಂದರೆ, 'ಕನ್ಯಾಪರೀಕ್ಷೆ' ನಡೆಯಬೇಕಾದುದತ್ಯಾವಶ್ಯಕವಾದುದೊಂದು ಪದ್ಧತಿ. ಅದೇ, ಗೊತ್ತಾದ ಶುಭಮುಹೂರ್ತದಲ್ಲಿ, ಯಜಮಾನನಾದ ಬಾಜೀ ಮಿತ್ರನೂ, ಕುಟುಂಬಕ್ಕೆ ಸಂಬಂಧಿಸಿದ ಕೆಲವರು ಹಿರಿಮನುಷ್ಯರೂ, ಸ್ನೇಹಿತರೂ,—ಎಲ್ಲರೂ ಸೇರಿಕೊಂಡು, ಅತುಳಘೋಷನ ಮನೆಗೆ ಹೋದರು. ಘೋಷನು ಸಮಾದರದಿಂದ ಅವರನ್ನು ಬರಮಾಡಿಕೊಂಡನು. ವಿವಾಹದ 'ಸಶೇಷ'ವನ್ನು ಪೂರ್ತಿಮಾಡುವ ಮಾತಾಯಿತು. ಆದರೆ ವರದಕ್ಷಿಣೆಯ ಮಾತು ಬರುತ್ತಲೇ,—'ನನಗೆ ತಾಪತ್ರಯ ಹೆಚ್ಚು, ನಾಲ್ಕು ಮಂದಿ ಗಂಡುಮಕ್ಕಳಿದ್ದಾರೆ. ಲಗ್ನವಾಗಲು ಇನ್ನೂ ಒಬ್ಬಳಿದ್ದಾಳೆ. ವರದಕ್ಷಿಣೆ ಸಾವಿರ ರೂಪಾಯಿಗಳಿಗೆ ಹೆಚ್ಚು ತೀರದು, ಎಂದನು. ಸ್ನೇಹಿತರಲ್ಲಿ ಕೆಲವರು ಸಂಖ್ಯೆಯನ್ನು ಕೇಳಿ ನಸುನಗುತ್ತ,—ಸಾವಿರ ರೂಪಾಯಿ ಹೇಗೆ ಯಾವ ಕೈಯಿಂದ ಕೊಡುವನಪ್ಪ! ಜಮೀನಿನ ಉತ್ಪತ್ತಿಯ ಐದುಸಾವಿರ ರೂಪಾಯಿಗಳಲ್ಲಿ—ಜೀವವಿಮೆಗಿಂತಿಷ್ಟು, ಹೆಂಡತಿಯ ಆಭರಣಗಳಿಗಿಂತಿಷ್ಟು, ಪ್ರೋಸ್ಟಾಫೀಸಿನವರಿಗಿಂತಿಷ್ಟು, 12—24ರ ಸಲೆಯ ಬಡ್ಡಿಗಿಂತಿಷ್ಟು, ಎಂದು ಹಂಚಿಬಿಟ್ಟು,—ಈ ಹೊಟ್ಟೆ, ಆ ಬಟ್ಟೆಗಳ ವೆಚ್ಚವನ್ನೂ ನೋಡಿಕೊಂಡು,—ಹೇಗಯ್ಯ ಎಂಟು ದಿನಗಳ ಮದುವೆ ಮಾಡುವನು? ಸಾವಿರ ರೂಪಾಯಿ—ಕೈಯಲ್ಲಿಯೇ ಇದೆಯೋ? ಅಥವಾ, ಬಡ್ಡಿಯನ್ನು ಬರುವವರಿಂದ ಪಡೆಯಬೇಕೊ?'—

ಎಂದು ಮಾತಾಡಿಕೊಳ್ಳುತ್ತಿರುವಾಗ, ನಂಟರಿಷ್ಟರು ಹೇಳಿದರು:— 'ಏನು? 'ಮಾತ್ರಿಕ್ಯುಲೇಶ'ವನ್ನು ಮಾಡಿ, 'ಎಫ್. ಏ.' ಪರೀಕ್ಷೆಗೆ ಓದು ತ್ತಿರುವವನಿಗೇ ಈ 'ಗ್ರೇಡು' ಇದೆ. ಆ ಮೇಲೆ ಅವನ ಪುರುಷಾವಸ್ಥೆ ಯೆಲ್ಲ ತಿಂಗಳಿಗೆ ಹದಿನೈದು ರೂಪಾಯಿ ತರುವುದರಲ್ಲಿಯೇ ಮುಗಿದು ಹೋಗುವುದು!'

ಹುಡುಗಿಯ ಕಡೆಯವರು:—'ಓಹೋ! ಆ ವಿಷಯವೊ? ಪೂರಾ ಬೇರೆ. ಅಂತಹನಿಗೆ ವಿದ್ಯಾವಂತನೆಂಬ ಹೆಸರಿದೆ. ಅವನು ಮತ್ಸ್ಯಾವ ತಾರದ ಹಾಗೆ ಎಷ್ಟು ದೊಡ್ಡವನಾಗಿ ಬೆಳೆವನೋ ಯಾರು ಬಲ್ಲರು? ಒಂದು ವೇಳೆ, ಒಂದು ಕಾಲದಲ್ಲಿ, ಅವನು ಹಾಯಿ್-ಕೋಟ.ಿ ಜಡ್ಜಿಯೂ, ಆಗುವನೋ ಏನೋ? ಆದರೆ, ಆಗಲೇ ಉದ್ಯೋಗದಲ್ಲಿರ ತಕ್ಕವರಿಗೆ ಮುಂದಣ ಸ್ಥಿತಿಗತಿಗಳು ಕೆಲವು ಮಟ್ಟಿಗೆ ನಿಯಮಿತವಾಗಿ ರುವುವೆಂಬುದನ್ನು ನೀವು ಒಪ್ಪುವುದಿಲ್ಲವೆ?'

ಚರ್ಚೆ ಪ್ರಬಲವಾಗುತ್ತ, ಘೋಷಮಹಾಶಯನು ಸ್ವಲ್ಪಸ್ವಲ್ಪ ಏರುತ್ತ ಬಂದ ಹಾಗೆ, ಗಂಡಿನವರ ಕಣ್ಣುಗಳಿಂದ ನಕ್ರಾಶ್ರುಗಳು ಹೊರಡ ಲಾರಂಭಿಸಿತು. ಕೊನೆಗೆ, ಬಹು ಪ್ರಯಾಸಪಟ್ಟು,—ಕೈಕಾಲುಕಟ್ಟಿ ಮಕ್ಕ ಳನ್ನು ಶಾಲೆಗೆ ಹೊತ್ತುಕೊಂಡು ಹೋಗುವ ಹಾಗೆ,—ಘೋಷನು 2000 ರೂಪಾಯಿಗಳ ವರೆಗೆ ಏರಬೇಕಾಯಿತು. ಗಂಡಿನವರು ಹೇಳಿ ದರು:—'ಸರಿ; ಆಗಬಹುದು. ಇನ್ನೊಂದು ಸಾವಿರ ರೂಪಾಯಿ ಸೀರೆ-ಬಟ್ಟೆ—ಉಂಗುರ—ಉಡಿದಾರ ಮೊದಲಾದ ಬಹುಮಾನರೂಪದಲ್ಲಿ;—ಇಷ್ಟಾದರೆ ಆಯಿತು.' ಘೋಷನು, ಮನೆಯವರೊಂದಿಗೆ ಯೋಚಿಸಿ, ಹೇಳುವೆನೆಂದನು. ಬಂದವರಷ್ಟು ಧೂಮಪಾನವನ್ನು ಮಾಡಿ, ಎಲೆ ಯಡಕೆಯನ್ನಷ್ಟು ಜಗಿದು, ತಮ್ಮ ಮನೆಗೆ ಹೋದರು.

ಮರುದಿನ, ಹೆಣ್ಣಿನವರು ಬಂದು,—'ಘೋಷಮಹಾಶಯರು ದರ ವನ್ನು, ಬಹುಕಷ್ಟದಿಂದ ತದಿಗೆಗೆ ಏರಿಸಿದ್ದಾರೆ. ಒಪ್ಪಿಗೆಯಿದ್ದರೆ ಆಗಲಿ; ಇಲ್ಲದಿದ್ದರೆ, ಬೇಡ!'—ಎಂದು ತಿಳುಹಿದರು. 'ಹಣವು ಮುಖ್ಯವಲ್ಲ.

ಉತ್ತಮಸಂಬಂಧವು ಬೇಕು. ಘೋಷರೊಂದಿಗೆ ಸಂಬಂಧವನ್ನು ಬೆಳೆಯಿಸಬೇಕೆಂದು ಬಹುಕಾಲದಿಂದಲೂ ಆತುರವಿರುವುದರಿಂದ, ಅವರ ಇಷ್ಟಪ್ರಕಾರವೇ ಆಗಲಿ! ಇನ್ನು, ಜಾಗ್ರತೆ! ಮುಹೂರ್ತವು ಗೊತ್ತಾಗಬೇಕು!'— ಎಂದು ಬಾಜಿಯೆಂದನು.

ವಿನೋದನನ್ನು ತೃಪ್ತಿಪಡಿಸುವುದರಲ್ಲಿ ಹೆಚ್ಚು ಕಷ್ಟವಿರಲಿಲ್ಲ. ಆದರೆ, 'ಸಾವಿರ ರೂಪಾಯಿಯ ಆಭರಣ'ವೆಂದು ಕೇಳಿದಾಗ, ಅವನು ಗುಣುಗುಟ್ಟಲಾರಂಭಿಸಿದನು:—'ಸಾವಿರ ರೂಪಾಯಿಗೆ ಎಂತಹ ಆಭರಣ— ಅತ್ತಿಗೆ? ನಿನ್ನ ಬಳೆಯೊಂದಕ್ಕೇ 250ರ ಮೇಲಾಯಿತು. ಸಾವಿರ ರೂಪಾಯಿಗೆ ನೋಡಲು, ಸೊಗಸಾದ ಒಡವೆಗಳೇನೂ ಸಿಕ್ಕುವುದಿಲ್ಲ!'—

'ಹೇಗೆ ಸಿಕ್ಕೀತು? ಅದು ಪ್ರಕೃತಕ್ಕೆ ಮಾತ್ರ. ಆ ಮೇಲೆ ಹಣವನ್ನುಳಿಯಿಸಿಕೊಂಡು, ಬೇಕಾದಷ್ಟು ನಗನಾಣ್ಯಗಳನ್ನು ಮಾಡಿಸಬಹುದಲ್ಲವೇ?

ಸ್ವಲ್ಪ ಯೋಚಿಸಿ, ವಿನೋದನು—'ನೋಡು! ಅತ್ತಿಗೆ! ನಾವಿದರಲ್ಲಿ ಇಷ್ಟು ಕೆಲಸ ಮಾಡಿಸಬಹುದು. ಆಭರಣಗಳನ್ನು ಮಾಡಿಸದೆ, ಆ ಹಣವನ್ನವರು ನಮಗೆ ಕೊಟ್ಟರೆ, ನಾವೂ ಒಂದು ಸಾವಿರ ರೂಪಾಯಿಯನ್ನು ಸೇರಿಸಿ, ಕಲಿಕತ್ತೆಯಲ್ಲಿ ಒಳ್ಳೆಯ ಒಡವೆಗಳನ್ನು ಮಾಡಿಸುವ. ಪೆಟ್ಟಿಗೆಯನ್ನು ಸರಿಪಡಿಸಲು, ನಾನು ಹೇಗೂ ಹೋಗಬೇಕಲ್ಲ?'

ಹುಬ್ಬುಗಳನ್ನೊತ್ತಿಕೊಂಡು, ಸ್ವಲ್ಪ ಯೋಚಿಸಿ,—'ಆಗಲಿ! ಹಾಗೆಯೇ ಹೇಳಿ ಕಳುಹುವ! ಮದುವಣಿಗಿತ್ತಿ ತಾಯಿ ಮನೆಗೆ ಹಿಂದಿರುಗುವಾಗ, ಇಟ್ಟು ಕಳುಹಬಹುದು!'

'ಅತ್ತಿಗೆ! ಕಲಿಕತ್ತೆಗೆ ಹೋಗಿ ಒಡವೆಗಳನ್ನು ಮಾಡಿಸಿ ತರಲು, ಎಷ್ಟು ದಿನ ಬೇಕು?'

'ಎಷ್ಟು ದಿನಗಳೇಕೆ?—ನಮ್ಮ ವಿಮಲೆಯ ಮನೆಗೆ ಹೋಗಿ, ಅಕ್ಕಸಾಲೆಯನ್ನು ಕರೆಯಿಸಿ, ಮನೆಯಲ್ಲಿಯೇ ಕುಳಿತು ಕೆಲಸ ಮಾಡುವಂತೆ

ಮಾಡಿದರೆ, ಒಂದು ವಾರ ಸಾಕು!—ಅವಳ ಆಭರಣಗಳನ್ನವಳು, ಹಾಗೆಯೇ ಮಾಡಿಸಿಕೊಂಡಳು.'

'ಆದರೆ, ಘೋಷನೊಪ್ಪಬೇಕಲ್ಲ?'

'ಮಾವನಾಗುವವನೇ ತಾನೇ? ಒಪ್ಪದೆ ಇರಲಾರ! ಇನ್ನೇನಾದರೂ ಕೋಮಟಿತನವಿದೆಯೋ— ತಿಳಿಯದು!'— ಎಂದು ಅತ್ತಿಗೆ ಹೋಗಿ, ಗಂಡನಿಗೆ ಹೇಳಿದಳು. ಬಾಜಿಯೂ ಏತಕ್ಕೆ ಒಪ್ಪಲಾರರೆಂದನು. ಹಾಗೆಯೇ, ಕುಳಿತುಕೊಂಡು, ಹೊಗೆಬತ್ತಿಯನ್ನು ಸೇದುತ್ತ, ಹಿಂದಣ ಸಂಗತಿಗಳನ್ನೆಲ್ಲ ಜ್ಞಾಪಕಮಾಡಿಕೊಂಡು,—'ಕೆಲಸವನ್ನು ವಿನೋದನು ಸಂಪಾದಿಸಲಿ, ಸಂಪಾದಿಸದಿರಲಿ; ನಡತೆಯನ್ನೇನೋ ಚೆನ್ನಾಗಿ ತಿದ್ದಿ ಕೊಂಡಿದ್ದಾನೆ!'— ಎಂದುಕೊಂಡನು.

ಘೋಷನೂ ಒಪ್ಪಿದನು.—ಲಗ್ನಕಾಲದಲ್ಲಿ ಮಗಳನ್ನು ನಿರಾಭರಣೆ ಯಾಗಿ ತಂದು ಮಂಟಪದಲ್ಲಿ ನಿಲ್ಲಿಸಲು ಯತ್ನವಿಲ್ಲದೆ, ಪ್ರತ್ಯೇಕವಾಗಿ ಒಡವೆಗೆಂದು 500 ರೂಪಾಯಿಗಳನ್ನು ವೆಚ್ಚಮಾಡಿದನು. ಕೊನೆಗೆ 'ಜಮಾ ಖರ್ಚಿನ ಪಟ್ಟಿ'ಯನ್ನು ನೋಡುವಾಗ, ಒಂದು ವರ್ಷದ ಹುಟ್ಟುವಳಿಯೇ ಇಲ್ಲ! ಮದುವೆಯೇನೋ ಸಂಭ್ರಮವಾಗಿ ನಡೆದು ಹೋಯಿತು. - ಸ್ವಲ್ಪ ನಾಗೋಲಿಯ ನಿಷ್ಠುರವೂ ಉಂಟಾಗಿರಬಹುದು! 'ಅತ್ತಿಗೆಗೆ ಕೊಟ್ಟಾ ಶೀರೆಯೂ ಹಳ್ತಾಗಿತ್ತೂ'—ಎಂದು ಗಂಡಿನವರೂ, 'ನಮ್ಮಾಳಿಗೆ ಎಡರ್ೂ ಅಡ್ಕೇಲಿ ಕೋಟ್ಲಿಲ್ಲಾ'—ಎಂದು ಹೆಣ್ಣಿನವರೂ, ಆ ಮೂಗಿನ ದನಿಯ ಹಾಡಿನಲ್ಲಿಯೇ ಹಾಡಿ ಮುಗಿಯಿಸಿದರೇನೋ— ತಿಳಿಯದು. ವಿನೋದನ ಹೆಂಡತಿಯ ಹೆಸರು ಸರಳಕುಮಾರಿ.

---

## ( iv )

'ಆಭರಣಗಳನ್ನು ಮಾಡಿಸಲು ಸ್ವಲ್ಪ ಕಾಲಬೇಕು; ಅದುಕಾರಣ, ಮದುವಣಗಿತ್ತಿಯನ್ನು ನಿಮ್ಮಲ್ಲಿಗೆ ಈಗ ಕಳುಹಿಸಲಾಗುವುದಿಲ್ಲ. ಹದಿ ನೈದು ದಿನಗಳು ಹೋಗಲಿ!'—ಎಂದು ವಿನೋದನ ಅತ್ತಿಗೆ ಬೀಯಗಿತಿಗೆ

ಹೇಳಿದಳು.—'ಹಾಗೆಯೇ ಆಗಲಿ! ಹತ್ತಿರವೇ ಇದ್ದೀರಿ! ಅಂದು ನಾಲ್ಕು ಗಳಿಗೆಯ ಮಾತಿಗೆ ಪಲ್ಲಕ್ಕಿಯನ್ನು ಕಳುಹಿ ಕೊಡುವೆನು'—ಎಂದಾಕೆಯೆಂದಳು. ಹತ್ತಿರ ನಿಂತವಳೊಬ್ಬಳು—'ನಮ್ಮ ಕಾಲದಲ್ಲಿ ಅತ್ತೆಯ ಮನೆಗೆ ಹೋಗುವುದೆಂದರೆ, ನಾಲ್ಕೆಂಟು ದಿನ ಅಳು! ಈಗ ಈ ಹೆಣ್ಣುಗಳು ಕಣ್ಣಿಗೆ ಮೆಣಸಿನ ಪುಡಿಯನ್ನು ಹಾಕಿದರೂ, ನೀರು ಸುರಿಯಿಸುವುದಿಲ್ಲ. ವಶೀಕರಣವು ಚೆನ್ನಾಗಿ ಗೊತ್ತು! ಎರಡು ದಿನಗಳಲ್ಲಿಯೇ, ಎಂತಹ ಗಂಡನನ್ನೂ 'ಸಾವಿರ ಕುದುರೆಯ ಸವಾರನಾದರೂ ಮನೆಯ ಹೆಂಡತಿಯ—'ಎಂದು ಮಾಡಿಕೊಂಡು ಬಿಡುತ್ತಾರೆ'–ಎಂದುಕೊಂಡಳು.

ಮದುವೆ ಮುಗಿದು, ಒಂದು ವಾರವಾಯಿತು. ಆದರೂ ವಿನೋದನು ಕಲಿಕತ್ತೆಗೆ ಹೋಗುವ ಯೋಚನೆಯಿಲ್ಲಿಲ್ಲ. ವಿನೋದಪ್ರಿಯರಾದ ಬಂಧುಮಹಾಶಯರು ಕಣ್ಣುಮುಚ್ಚುತ್ತ, ಹೇಳುತ್ತಿದ್ದರು—'ಮಾವನೇ ಗಟ್ಟಿಗ; ಅಳಿಯನು ಮತ್ತೂ ಗಟ್ಟಿಗ!'—ಅತ್ತಿಗೆ ವಿನೋದನ ಸಮೀಪಕ್ಕೆ ಬಂದು,—'ಆಭರಣಗಳ ವಿಷಯದಲ್ಲಿ ಇನ್ನೂ ವಿಳಂಬವಾಡುವುದು ಚೆನ್ನಾಗಿರುವುದಿಲ್ಲ. ನಾನು ನಿನ್ನ ಅತ್ತೆಯನ್ನು ಕಂಡೆನು. ಅವಳು ಕೇಳಿದಳು!'—ಎಂದಳು.

"ಏನು ಅತ್ತಿಗೆ! ಮೆಲ್ಲಗೆ ಓಡಿಸಿ ಬಿಡುವ ಯೋಚನೆಯೋ?"

"ಏನಾದರೂ ಹೇಳಿಕೊ! ನೀನು ಹೆಣ್ಣಿನವರನ್ನು ತೃಪ್ತಿಪಡಿಸದಿದ್ದರೆ, ಅದು ಕೇವಲ ನಾಚಿಗೆಗೇಡು. ನಾಳೆಯ ದಿನ ಬೆಳಗ್ಗೆ ಹೊರಡು; ಸಾಯಂಕಾಲದ ವರೆಗೂ ಅಲ್ಲಿರು. ಬಂಗಾರವನ್ನು ಕೊಂಡುಕೊಂಡು, ಅಕ್ಕಸಾಲೆಯೊಡನೆ ಅಳತೆಗಳನ್ನು ಕೊಟ್ಟು, ವಿಮಲೆಯೊಡನೆ ನೋಡಿಕೊಳ್ಳೆಂದು ಹೇಳಿ, ಸಂಜೆಯ 'ಟ್ರೆಯಿನಿ'ನಲ್ಲಿ ಹಿಂದಿರುಗಿ ಬಂದು ಬಿಡು. ನಿನ್ನ ತಿಂಡಿಯನ್ನು ಕೊಟ್ಟಡಿಯಲ್ಲಿಯೇ ಮುಚ್ಚಿಟ್ಟಿರುತ್ತೇನೆ."

"ಹಾಗೆಯೇ ಆಗಲತ್ತಿಗೆ!"

ಮರುದಿನ ಬೆಳಗ್ಗೆ ವಿನೋದನು ಹೋಗುವುದೆಂದು ನಿಶ್ಚಯವಾಯಿತು. ಸಂಜೆಯಾಗಿ, ಊಟವು ಮುಗಿದು, ಮಲಗುವ ಸಮಯ

ವಾಯಿತು. ಹಾಸುಗೆಯನ್ನು, ತೆರೆದಿದ್ದ ಕಿಡಕಿಗಿದಿರಾಗಿ ಹಾಸಿ, ವಿನೋದ-ಸರಳೆಕುಮಾರಿಯರು ಮಲಗಿದರು. ಹಿತ್ತಲಲ್ಲಿದ್ದ ಗಿಡಮರಗಳು, ಬೆಳ್ದಿಂಗಳಲ್ಲಿ ಸ್ನಾನಮಾಡುತ್ತಿದ್ದುವು. ಗಾಳಿಯೂ ಬೀಸುತ್ತಿದ್ದಿದು.

ವಿನೋದನು ಮೌನವಾಗಿ ಯೋಚಿಸುತ್ತಿದ್ದನು. ಸರಳೆ ಕೇಳಿದಳು:—“ಯೋಚಿಸುವುದೇನನ್ನು?”

“ಬಹಳ ತೊಂದರೆ!”

‘ಅಂತಹ ತೊಂದರೆಯೇನು?’—ಎಂದು ಹುಡುಗಿ ಆತುರದಿಂದ ಕೇಳಿದಳು.

‘ಹೇಳಿದರೆ, ನೀನು ನನ್ನನ್ನು ನಂಬಲಾರೆ!’

‘ಹೆಂಡತಿಗೆ ಗಂಡನಲ್ಲಿಯೂ ಅಪನಂಬಿಕೆಯೆ?’

ವಿನೋದನು ಮುಖವನ್ನೇ ದೃಷ್ಟಿಸುತ್ತಿದ್ದನು. ಕೇಶರಾಶಿ ಗುಂಗುರು ಗುಂಗುರಾಗಿ ಅವಳ ಭುಜಗಳ ಮೇಲೆ ಬಿದ್ದಿದ್ದಿತು. ಸರಳಪ್ರೇಮವು ಕಣ್ಣಿನಲ್ಲಿ ಪ್ರಕಾಶಿಸುತ್ತಿದ್ದಿತು.

ವಿನೋದನು ಹೇಳಿದನು:—‘ನಾನು ಕೆಟ್ಟ ನೀಚನು. ನಿಮ್ಮೆಲ್ಲರನ್ನೂ ವಂಚಿಸಿರುವೆನು!’—ಎಂದನು.

ಹುಡುಗಿ ಮೌನವಾಗಿ ಅವನನ್ನೇ ನೋಡುತ್ತಿದ್ದಳು. ವಿನೋದನು ಮುಂಬರಿದನು:—‘ನನಗೆ ಕೆಲಸವೂ ಇಲ್ಲ; ನೂರಿಪ್ಪತ್ತು ರೂಪಾಯಿ ಸಂಬಳವೂ ಇಲ್ಲ!’

ಅತ್ಯಾಶ್ಚರ್ಯದಿಂದ,—‘ಹಾಗಾದರೆ?’

‘ನನಗೆ ಉದ್ಯೋಗವಿಲ್ಲ. ಅಲ್ಲಹಾಬಾದಿನಲ್ಲಿ ಒಂದಿದ್ದಿತು; ಆದರೆ ಅದನ್ನು ನಾನು ಕಳೆದುಕೊಂಡೆನು. ಬೇರೆ ಏನೂ ಉಪಾಯವಿಲ್ಲದೆ, ಮದುವೆಮಾಡಿಕೊಂಡು, ಸ್ವಲ್ಪ ಹಣವನ್ನು ಸಂಪಾದಿಸಬೇಕೆಂದು, ಈ ಉಪಾಯವನ್ನು ಹೂಡಿದೆನು. ಉದ್ಯೋಗದಲ್ಲಿರುವನೆಂದು ಸುಳ್ಳು

ಹೇಳಿದರೆ ಸಹಜವಾಗಿ ಮದುವೆಯಾಗದೆ ಇರುವುದಿಲ್ಲವೆಂದೂ, ಆ ಮೇಲೆ ನನ್ನ ಉದ್ಯೋಗ—ಸ್ಥಳ, ಇವುಗಳ ವಿಷಯದಲ್ಲಿ ಅನ್ವೇಷಣವು ನಡೆಯದೆ ಇರುವುದಿಲ್ಲವೆಂದೂ ನನಗೆ ಚೆನ್ನಾಗಿ ಗೊತ್ತು. ಆದುದರಿಂದ, ಈಗ, ಈ ಹಣವನ್ನು ಕಟ್ಟಿಕೊಂಡು, ಹೇಳದೆ ಪಲಾಯನಮಾಡಬೇಕೆಂದಿದ್ದೇನೆ.'

ಸ್ವಲ್ಪ ಹೊತ್ತಿಗೆ ಮೊದಲು, ಸರಳಕುಮಾರಿ, ಆ ತನ್ನ ಸರಳಪ್ರೇಮದ ಸ್ಥಿರ ವಿಶ್ವಾಸದಿಂದ—'ಹೆಂಡತಿಗೆ ಗಂಡನಲ್ಲಿಯೂ ಅಪನಂಬಿಕೆಯೆ?'—ಎಂದು ಹೇಳಲಿಲ್ಲವೆ? ಆದರೆ, ಉಷಾದೇವಿಯ ಸ್ಪರ್ಶದಿಂದ ನಿಶೆ ಹೇಗೆ ಅದೃಶ್ಯೆಯಾಗುವಳೋ ಹಾಗೆ ಗಂಡನ ವೃತ್ತಾಂತಕಥನದಿಂದ ಹೆಂಡತಿಯ ವಿಶ್ವಾಸವು ಅದೆಲ್ಲಿಯೋ ಮಾಯವಾಯಿತು. ವಜ್ರಾಘಾತವನ್ನು ಹೊಂದಿದವಳಂತೆ ಅವಳು ಶಬ್ದಹೀನೆಯಾದಳು.

ಕೈಯನ್ನವಳ ಭುಜದ ಮೇಲಿಟ್ಟು, ವಿನೋದನು ಹೇಳತೊಡಗಿದನು:—'ಮದುವೆಗೆ ಮೊದಲು, 'ಆಭರಣಗಳನ್ನು ನಾನೇ ಮಾಡಿಸುತ್ತೇನೆ ಕಲಿಕತ್ತೆಯಲ್ಲಿ' ಎಂದು ಹೇಳಿದುದರ ಕಾರಣವಿಷ್ಟೇ. ಮಾಡಿಸುತ್ತೇನೆಂಬ ನೆಪದಿಂದ ಆ ಹಣವನ್ನು ಕಟ್ಟಿಕೊಂಡು, ಎಂದಾದರೂ ಒಂದು ದಿನ ಎಲ್ಲಿಯಾದರೂ ಪಲಾಯನಮಾಡಬೇಕೆಂಬುದೇ ನನ್ನ ನಿಜವಾದ ಉದ್ದೇಶವಾಗಿದ್ದಿತು. ಆದರೆ ನೀನು ನನ್ನ ತಂತ್ರಗಳನ್ನೆಲ್ಲ ಅತಂತ್ರ ಮಾಡಿಬಿಟ್ಟೆ!'

ನಡುಗುತ್ತ, ಸರಳಕುಮಾರಿ ಅವನ ಕೈಯಿಂದ ಮೆಲ್ಲಗೆ ತಪ್ಪಿಸಿಕೊಂಡು, ಹಾಸುಗೆಯ ಮೇಲೆ ಕುಳಿತು,—'ನಾನೇನು ಮಾಡಿದೆ?' ಎಂದಳು.

'ಬಂಗಾರದ ಸಂಕಲೆಯಲ್ಲಿ ಕಟ್ಟಿ ಬಿಗಿದೆ! ನಾನು ನಿನ್ನನ್ನು ಬಿಟ್ಟು ಹೋಗಲಾರೆ; ಹಾಗೂ ನಿಲ್ಲುವುದಕ್ಕೂ ಮಾರ್ಗವಿಲ್ಲ. ಅಥವಾ ಬಿಟ್ಟು ಹೋದೆನೆಂದರೆ, ಇಂದೋ ನಾಳೆಯೋ ರಹಸ್ಯವು ಬಯಲಾಗಿ, ಆ ಮೇಲೆ ಜನಗಳಿಗೆ ನನ್ನ ಮುಖವನ್ನು ಹೇಗೆ ತೋರಲಿ?'

ಕೋಪ-ಲಜ್ಜೆ-ತಿರಸ್ಕಾರಗಳಿಂದ, ಕುಮಾರಿಯ ಹೃದಯವು ಒಡೆವಂತಿದ್ದಿತು. ಕೇಳಿದಳವಳು:—'ಎಲ್ಲಿಗೆ ಹೋಗಬೇಕೆಂದು ಯೋಚನೆ?'

'ಎಲ್ಲಿಯಾದರೂ ಕಲ್ಲಿದ್ದಲ ಗಣಿಗೆ ಹೋಗಿ, ಏನಾದರೂ ಕೆಲಸವನ್ನು ಮಾಡಿಕೊಳ್ಳಬೇಕೆಂದಿದ್ದೇನೆ. ಕೆಲಸವೇನೋ ಕಷ್ಟ; ಆದರೆ ಲಾಭಕರ.'

'ನಿಮ್ಮೊಡನೆ ನಾನೂ ಬರುತ್ತೇನೆ!'

ವಿನೋದನು ಹಾಸುಗೆಯಿಂದ ಹಾರಿ ಎದ್ದು ನಿಂತನು. 'ಬರುವೆಯಾ, ಸರಳೆ?'—ಎಂದು ಸಂತೋಷದಿಂದ—'ಬರಲು ನಿಶ್ಚಯಿಸಿರುವೆಯಾ, ಸರಳೆ?'—ಎಂದನು.

'ಅಹುದು; ನಿಶ್ಚಯಿಸಿರುವೆನು! ನೀವಿಲ್ಲಿಂದ ಹೊರಟುಹೋಗಿ, ನಾನೊಬ್ಬಳೇ ನಿಂತುಬಿಟ್ಟರೆ, ಜನಗಳ ಬಾಯಿಂದ ಏನೆಲ್ಲ ಬರುವುದೆಂದು ಕ್ಷಣಕಾಲ ಯೋಚಿಸಿರುವಿರಾ? ತಮ್ಮ ಮನಬಂದಂತೆ ಅವರಾಡಿಕೊಳ್ಳುತ್ತಿರುವಾಗ, ನಾನು ಸುಮ್ಮನೆ ಕುಳಿತುಕೊಂಡು, ಕೇಳಬೇಕಾಗುವುದಲ್ಲವೆ?'

ವಿನೋದನ ಸಂತೋಷಕ್ಕೆ ಮೇರೆಯೇ ಇಲ್ಲ! ಕುಮಾರಿಯ ಪಲಾಯನದಲ್ಲಿ ಭಕ್ತಿ ಮಾತ್ರವಲ್ಲದೆ ಆತ್ಮರಕ್ಷಣೆಯೂ ಅಡಕವಾಗಿದ್ದುದು. ಹೇಳಿದನು:—'ಪ್ರಿಯೆ! ಇಬ್ಬರೂ ಹೋಗುವ!'

'ಯಾವಾಗ?'

'ನಾಳೆ ನಾನು ಕಲಿಕತ್ತೆಗೆ ಹೊರಡಬೇಕೆಂದು ನಿಶ್ಚಯವಾಗಿದೆ. ಆದುದರಿಂದ ಮಲಗುವ ಮೊದಲು, ಹಣವನ್ನು ನನ್ನ ಕೈಚೀಲದಲ್ಲಿ ಹಾಕಿ, ಈ ಕೊಟ್ಟಡಿಯಲ್ಲಿಡುತ್ತೇನೆ. ಎರಡು ಗಂಟೆಗೇ ನಾವಿಲ್ಲಿಂದ ಹೊರಟುಹೋಗುವ! ಗಣಿಗಳ ಹತ್ತಿರ ಬೇಕಾದ ಮನೆಗಳಿವೆ. ಸ್ಥಳವು ಯಾರಿಗೂ ಗೊತ್ತಾಗದು. ಒಂದನ್ನು ಬಾಡಿಗೆಗೆ ತೆಗೆದುಕೊಂಡು ನಮ್ಮ ಸಂಸಾರವನ್ನು ಹೊಸದಾಗಿ ಆರಂಭಿಸುವ!'

ಆ ಸಮಯದಲ್ಲಿ, ಆ ಬಾಲೆಯ ಮನಸ್ಸಿನಲ್ಲಿ ಆ ಕೋಪ-ತಾಪಗಳ ಮಧ್ಯೇ, ಉಂಟಾಗುತ್ತಿದ್ದುದೇನು? ಒಂದು ಮಾತು ಮಾತ್ರ ಮುಂಬರಿಯುತ್ತಿದ್ದುದು.—'ನೀನು ನನ್ನ ತಂತ್ರಗಳನ್ನೆಲ್ಲ ಅತಂತ್ರಮಾಡಿಬಿಟ್ಟೆ!'—ಯೋಚನೆಯುತಿ ಮಧುರ! ತನ್ನ ಸ್ವಾಮಿ ತನ್ನನ್ನು ತ್ಯಾಗಮಾಡಲಾರದವನು. ಮುಳ್ಳಿಂದ ತುಂಬಿದ ಕಾಡಿನಲ್ಲಿರುವ ಮಧುರವಾದುದೊಂದು ಹಣ್ಣಿನ ಹಾಗೆ, ಕಳವಳದ ಮಧ್ಯದಲ್ಲಿ ಏಳುತ್ತಿದ್ದ ಈ ಅಣುಮಾತ್ರ ಸಂತೋಷದಿಂದ ತೃಪ್ತಳಾಗಿ, ಸರಳಕುಮಾರಿ ಸುಖನಿದ್ರೆಗೆ ವಶೆಯಾದಳು.

ಬೆಳಗಿನ ಜಾವದಲ್ಲಿ ಬಾಜಿಯ ಹೆಂಡತಿ ವಿನೋದನನ್ನು ಎಬ್ಬಿಸಲು ಬಂದಳು;—ನೋಡಿದಳು; ಅಲ್ಲಿ ಯಾರೂ ಇಲ್ಲ. ಹಾಸುಗೆಯ ಮೇಲೆ, ಬಾಜಿಗೆ ಬರೆದಿದ್ದ ಪತ್ರವೊಂದು ಬಿದ್ದಿದೆ!

*  *  *  *  *

'ಬಹುಮಾನಿತ ಭ್ರಾತೃವೆ!—

'ನಾನು ಹೆಂಡತಿಯೊಂದಿಗೆ ಪಶ್ಚಿಮದಿಕ್ಕಿಗೆ ಹೊರಟುಹೋಗಿದ್ದೇನೆ. ನಿಮ್ಮೆಲ್ಲರಿಗೂ ತೊಂದರೆಕೊಟ್ಟೆನು. ನನಗೆ ಮೋತೀಹರಿಯಲ್ಲಿ ಕೆಲಸವಿರುವುದೆಂಬುದು ಸುಳ್ಳುಮಾತು. ಅಲ್ಲಹಾಬಾದಿನ ಸ್ಟೇಶನಿನಲ್ಲಿ ಚಿಕ್ಕದೊಂದು ಚಾಕರಿಯಿದ್ದುದು; ನನ್ನಿಂದ ನಾನದನ್ನು ಕಳೆದುಕೊಂಡೆನು. ಅನಂತರ ಹತಾಶನಾಗಿ, ಮದುವೆಯ ಮೂಲಕವಾದರೂ ಸಹಾಯವನ್ನು ಪಡೆಯಬೇಕೆಂದು ನಿರ್ಧರಿಸಿದೆನು. ಯಾರೂ ಪಕ್ಕನೆ ಕಂಡುಹಿಡಿಯದಂತೆ, ಉದ್ಯೋಗಸ್ಥರ ಪಟ್ಟಿಯನ್ನು ತೆಗೆದು, ಎಲ್ಲಿಯಾದರೂ ಯಾರಾದರೂ ನನ್ನ ಹೆಸರಿನವರು ದೊಡ್ಡ ಉದ್ಯೋಗದಲ್ಲಿ ಇದ್ದಾರೆಯೋ ಎಂದು ಹುಡುಕಿನೋಡಿದೆನು. ಮೋತೀಹರಿಯಲ್ಲಿ ವಿನೋದ-ವಿಹಾರೀ-ಮಿತ್ರನೆಂಬ ಒಬ್ಬನಿದ್ದನು ನಾನವನ ಸಂಬಳವನ್ನೇ ಮನಸ್ಸಿನಲ್ಲಿಟ್ಟುಕೊಂಡು, ಮನೆಗೆ ಬಂದು, ಮದುವೆಮಾಡಿಕೊಂಡೆನು.

'ನನ್ನೊಡನೆ ಒಂದು ತಾಮ್ರದ ಕಾಸೂ ಇಲ್ಲ. ನನ್ನ 'ನಗದೀ' ಪೆಟ್ಟಿಗೆಯಲ್ಲಿ ಒಡೆದುಹೋದ ಕುಪ್ಪಿಯ ಚೂರುಗಳಲ್ಲದೆ ಇನ್ನೇನೂ

ಇಲ್ಲ. ಅತ್ತಿಗೆಯ ಬಳೆ ಇನ್ನೂ ಸಿದ್ಧವಾಗಿಲ್ಲ. ವರದಕ್ಷಿಣೆಯಾಗಿ ಬಂದ ಎರಡುಸಾವಿರ ರೂಪಾಯಿಗಳಲ್ಲಿ, ಒಂದು ನನ್ನ ಕೈಸೇರಿದೆ; ಮಿಕ್ಕ ಸಾವಿರದಿಂದ ಅತ್ತಿಗೆಗೆ ಬಳೆಯನ್ನು ಮಾಡಿಸಿ ಕೊಡು! ನಾನು ಮುಂದೆ ನನ್ನ ಸ್ಥಿತಿಗತಿಗಳನ್ನು ಬದಲಾಯಿಸಿಕೊಳ್ಳುವ ಅದೃಷ್ಟವುಳ್ಳವನಾದರೆ, ಎಂದಾದರೂ ಒಂದು ದಿನ ನನ್ನನ್ನು ನೀನು ನೋಡದೆ ಹೋಗಲಾರೆ. ಪ್ರಕೃತ, ಇದೋ! ನನ್ನ ವಿನಯಪೂರ್ವಕವಾದ ನಮಸ್ಕಾರಗಳು.

ನಿನ್ನ ಅಪಾತ್ರಸೋದರ,

**"ವಿನೋದ".**

*　　*　　*　　*　　*

ಪತ್ರವನ್ನೋದಿ, ಅವಳು ಸ್ತಬ್ಧೆಯಾಗಿ ಹೋದಳು. ಆದರೆ ವಿನೋದನು ಸತ್ಯವನ್ನೊಪ್ಪಿಕೊಂಡಿದ್ದುದರಿಂದ, ಕೋಪವುಂಟಾಗಲಿಲ್ಲ. ಅಷ್ಟು ಚಿಕ್ಕವಳಾದ ಆ ಬಾಲೆ ಗಂಡನೊಡನೆ ದೇಶಾಂತರಕ್ಕೆ ಹೊರಟುಹೋದ ಆ ಸಂಗತಿ ಅವಳಿಗೆ ಅತಿಶಯವಾಗಿ ಆಶ್ಚರ್ಯವನ್ನುಂಟುಮಾಡಿದ್ದುದು. ಹಾಗೆಯೇ ಯೋಚಿಸುತ್ತ—'ಕಾಲವೇನಾಗಿ ಹೋಯಿತು?'—ಎಂದುಕೊಂಡಳು.

H. B. ROW.

# ನವೀನ ಭರತಖಂಡ.

[ಮನೆಯೊಳಗಿನ ಹೊರಕೊಟ್ಟಡಿಯಲ್ಲಿ ರಾಜುವು ಓದುತ್ತ ಕುಳಿತಿರುವನು.]

**ರಾಜು:**—'ಅಯ್ಯೋ! ಹಾಳು ಗಣಿತವೆ? ಇದಾರಿಗೆ ಬೇಕಾಗಿದೆ? ಓದಿಯೋದಿ, ಬುದ್ಧಿಯೆಲ್ಲಾ ಕೆಟ್ಟುಹೋಯಿತು! ಹೇಗೆ ನಾನು ಎಫ್. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗುವೆನೋ—ತಿಳಿಯದು! ಇದಕ್ಕೆ ಬದಲು, ಆ ಷೇಕ್ಸ್‌ಪೀಯರಿನ ನಾಟಕಗಳನ್ನಾದರೂ, ತೆಗೆದುಕೊಂಡರೆ, ಜೀವಾವಧಿ ಅನ್ನನೀರು ಬಿಟ್ಟು ಕುಳಿತುಕೊಳ್ಳಬಹುದಲ್ಲ'—ನನ್ನ ಗ್ರಹ

ಕಾರ! ಗಣಿತವನ್ನೋದಿಯೇ ನಾನು ತೀರಬೇಕು! ಅದು ಬಾರದಿದ್ದರೆ, ಬೇರೆ ಮಾರ್ಗವಿಲ್ಲ! ಎಲ್ಲಿಯಾದರೂ, ಯಾರ ಸಂಗಡಲಾದರೂ, ಹೇಳಿಸಿ ಕೊಳ್ಳದಿದ್ದರೆ ಯತ್ನವಿಲ್ಲ!'—(ಎಂದು ಯೋಚಿಸುವಷ್ಟರಲ್ಲಿ, ತಂದೆಯು ಬಂದ ಸಪ್ಪಳಾಗಲು) 'ಓಹೋ! ಇನ್ನೇನು? ತಂದೆಯವರು ಬಂದೇ ಬಿಟ್ಟರು! ಇನ್ನೇನೂ ಉಪಾಯವಿಲ್ಲ! ಈ ಷೇಕ್ಸ್‌ಪೀಯರಿನ ನಾಟಕವನ್ನು ಬಚ್ಚಿಟ್ಟು ಬೀಜಗಣಿತ (algebra)ವನ್ನು ಕೈಯಲ್ಲಿ ತೆಗೆದುಕೊಳ್ಳುತ್ತೇನೆ.'

[ಗಣಿತಶಾಸ್ತ್ರಜ್ಞನಾದ ತಂದೆಯು ಕೊಟಡಿಯೊಳಗೆ ಪ್ರವೇಶಿಸುವನು.]

**ತಂದೆ:**—'ರಾಜೂ! ನಿನ್ನ ಕೈಯಲ್ಲಿರುವುದೇನು?'

**ರಾಜು:**—'ಬೀಜಗಣಿತ!'

**ತಂದೆ:**—'ಅದನ್ನು ಚೆನ್ನಾಗಿ ಕಲಿಯುತ್ತಿರುವೆಯಷ್ಟೆ?'

**ರಾಜು:**—'ಏನೋ? ಕೊಂಚ ತಿಳಿದ ಮಟ್ಟಿಗೆ!'

**ತಂದೆ:**—'ಪರ್ಮ್ಯುಟೇಷನ್ (Permutation—ಪರಿವರ್ತನ) ನ್ನು ಚೆನ್ನಾಗಿ ಗ್ರಹಿಸಿರುವೆಯೋ? ಹೇಗೆ?'

**ರಾಜು:**—'ಎಲ್ಲೋ ಸ್ವಲ್ಪ—ಗ್ರಹಿಸಿದ್ದೇನೆ.'

**ತಂದೆ:**—'ಎಲ್ಲೋ ಸ್ವಲ್ಪ! ಹಾಗೆಂದರೇನು? ನಿನಗೆ ಬುದ್ಧಿ ಕಡಮೆಯೆಂದು ತೋರುತ್ತಿದೆ! ಕೆನ್ನೆಗೆ ಎರಡೇಟು ಬಿದ್ದರೆ, ಸರಿಯಾಗುವುದು!'

**ರಾಜು:**—'ಅಪ್ಪಾ! ನೀವು ಏನಾದರೂ ಮಾಡಿ;—ನನಗಂತೂ, ಗಣಿತಶಾಸ್ತ್ರವು ರುಚಿಸುವುದಿಲ್ಲ! ನಾನದನ್ನು ನಿಜವಾಗಿಯೂ ಓದಲಾರೆ!'

**ತಂದೆ:**—'ಏನುಏನು? ನನ್ನಿದಿರಿಗೆನೇ ನಿನಗೆ ಈ ಮಾತೆ?'

**ರಾಜು:**—'ತಂದೆಯೆ! ನಾನು ನಿನ್ನನ್ನೆಷ್ಟು ಪ್ರಬಲವಾಗಿ ಪ್ರೀತಿಸುತ್ತಿರುವೆನೋ—ಅದನ್ನು ದೇವರೇ ಬಲ್ಲನು. ನನ್ನ ಕ್ಷೇಮಕ್ಕೋಸ್ಕರವೇ ರಾತ್ರಿಹಗಲೂ ನೀವು ವಿಶೇಷವಾಗಿ ಪರಿತಪಿಸುತ್ತಿರುವಿರೆಂಬುದೂ ನನಗೆ ಚೆನ್ನಾಗಿ ತಿಳಿದಿರುವುದು. ಆದರೆ, ಇದೊಂದು ವಿಷಯದಲ್ಲಿ ಮಾತ್ರ

ಕ್ಷಮಿಸು. ಗಣಿತಶಾಸ್ತ್ರವನ್ನು ಓದಿದಷ್ಟೂ ನನ್ನ ಬುದ್ಧಿಮಾಂದ್ಯವಾಗುವುದೇ ಹೊರತು, ಚುರುಕಾಗುವುದಿಲ್ಲ. ನನಗಿಷ್ಟವಲ್ಲದ ವಿಷಯವನ್ನು ಗ್ರಹಿಸುವುದು ಅಸಾಧ್ಯ. ಗಣಿತಶಾಸ್ತ್ರವನ್ನು ತುಂಬ ಕಷ್ಟಪಟ್ಟು ಕಲಿಯುತ್ತಿದ್ದೇನೆ. ಆದರೆ, ಅದು ಖಂಡಿತವಾಗಿಯೂ ನನ್ನ ತಲೆಗೇ ಹತ್ತಲುವುದಿಲ್ಲ!'

**ತಂದೆ:**—'ಅಯ್ಯೋ! ಹುಚ್ಚ! ಅನ್ಯಾಯವಾಗಿ ಭವಿಷ್ಯವನ್ನೆಲ್ಲಾ ಕೆಡಿಸಿಕೊಳ್ಳುವೆಯಲ್ಲ! ನಿನ್ನ ಬುದ್ಧಿಕೌಶಲ್ಯಕ್ಕೆ ತಕ್ಕಂತೆಯಾದರೂ, ನಿನಗೆ ಬೀ. ಏ. ಎಂಬ ಎರಡಕ್ಷರವಿದ್ದರೆ, ಎಷ್ಟೋ ಗೌರವವಾಗಿರುವುದೆಂದು ನಾನು ಕಷ್ಟಪಟ್ಟು ಪ್ರಯತ್ನಿಸಿದುದಕ್ಕೆ, ಚೆನ್ನಾಗಿಯೇ ನನಗೆ ಫಲವಾಯಿತು! ಅದರಲ್ಲಿಯೂ, ಗಣಿತಶಾಸ್ತ್ರದ ಬೀ. ಎ. ಎಂದರೆ ಸಾಮಾನ್ಯವೆ?—ಆದರೆ, ನಿನಗೆ ಇಷ್ಟವಿಲ್ಲ! ನಾನೇನು ಮಾಡಲಿ?—ಸುಮ್ಮನೆ ನಿನ್ನ ಕಿವಿಯಲ್ಲಿ 'ಗಣಿತಶಾಸ್ತ್ರ'ವೆಂದು ಊದುತ್ತಿದ್ದರೆ, ನಿನಗೆ ತಲೆಗೇ ಹಿಡಿಯುವುದಿಲ್ಲವಾದ ಮೇಲೆ, ನಾನೇನು ಮಾಡಬೇಕು?—ನಿನ್ನ ದಾರಿಯಲ್ಲೇ ನಿನ್ನನ್ನು ಬಿಟ್ಟು ಹೊರಟುಹೋಗುತ್ತೇನೆ.' (ಎಂದು ಕೋಪದೊಡನೆ ಹೋಗುವನು.)

**ರಾಜು:**—'ಈಗೇನು ಮಾಡಲಿ?—ಅಯ್ಯೋ! ತಂದೆಯೆ! ಈ ಹಾಳು ಗಣಿತಶಾಸ್ತ್ರವನ್ನು ಕಂಡರೆ, ನನಗೆಷ್ಟು ಮಟ್ಟಿನ ಶತ್ರುತ್ವವುಂಟಾಗಿದೆಯೆಂಬುದನ್ನು ನೀನು ತಿಳಿದಿದ್ದರೆ!—ನಾನೇನೋ ಚೆನ್ನಾಗಿಯೇ ಯೋಚನೆಮಾಡಿ ನೋಡಿದ್ದೇನೆ. ನನಗೆ ಕೊಂಚ ಬುದ್ಧಿಯಿದೆ; ಅಭಿವೃದ್ಧಿಯನ್ನು ಹೊಂದಬೇಕೆಂಬ ಉತ್ಸಾಹವೂ ಇದೆ. ಆದರೆ, ಈ ಹಾಳು ಗಣಿತವನ್ನು ಮಾತ್ರ ಓದುವುದೆಂದರೆ, ನನ್ನಿಂದಾಗದು!—ಮೆಟ್ರಿಕ್ಯುಲೇಷನ್ ಪರೀಕ್ಷೆಯು ಮೂರುಸಾರಿ ಹೋಯಿತು; ನಾಲ್ಕನೆಯ ಸಾರಿ, ಏನೋ ನನ್ನ ಅದೃಷ್ಟದಿಂದ, ಅಂತೂ ಇಂತೂ ಆದ ಹಾಗಾಯಿತು. ನಾಲ್ಕು ವರ್ಷ ಓದಿದುದನ್ನೇ ಓದಿ, ನನ್ನ ಉತ್ಸಾಹವೆಲ್ಲವೂ ತಣ್ಣಗಾಗಿ ಹೋಗಿದೆ. ನನ್ನ ಬುದ್ಧಿಯೂ ಬಲುಮಟ್ಟಿಗೆ ಮಂದವಾಗಿ ಹೋಗಿದೆ.

ಅಯ್ಯೋ! ಈ ಹಾಳು ಗಣಿತವೆ? ನನಗಿಷ್ಟವಿದ್ದ ವಿಷಯಗಳನ್ನೇ ಓದುವುದಕ್ಕೆ ನನಗೆ ಅವಕಾಶವಿದ್ದರೆ! ಇದುವರೆಗೆ ನಾನೆಷ್ಟೋ ಗೌರವವನ್ನು ಸಂಪಾದಿಸುತ್ತಿದ್ದೆನು!! ಆದರೆ, ಅದು ಲಭ್ಯವಿಲ್ಲ! ನನ್ನ ಹಣೆಯಲ್ಲಿ ಬೇಡವಾದುದನ್ನೇ ಮತ್ತೆಮತ್ತೆ ಓದಬೇಕಾಗಿ ಬರೆದಿರುವುದಲ್ಲವೆ?'—

(ಎಂದು ಅಧೋಹಕ್ತಿಯಲ್ಲಿ ನಿಲ್ಲಿಸುವನು.)

[ಅಷ್ಟರಲ್ಲಿ, ಸ್ನೇಹಿತನಾದ ರಾಮುಸ್ವಾಮಿಯು ಪ್ರವೇಶಿಸುವನು.]

ರಾಜು:—'ಓಹೋ! ಏನಯ್ಯಾ? ರಾಮುಸ್ವಾಮಿ! ಏನಾದರೂ, ಜಯದ ಸುದ್ದಿಯುಂಟೋ? ನಿನ್ನ ಅರ್ಜಿಗಳಲ್ಲಿ ಯಾವುದಾದರೂ ಒಳ್ಳೆಯ ಉತ್ತರವನ್ನು ತಂದಿತೋ? ಹೇಗೆ?'

ರಾಮುಸ್ವಾಮಿ:—'ಅಯ್ಯೋ! ರಾಜೂ! ನಾನೇನು ಮಾಡಲಿ? ನನ್ನ ಕೈಯಿಂದ ಬರೆಯಲ್ಪಟ್ಟ ಅರ್ಜಿಗಳೆಲ್ಲವೂ 'ಇಲ್ಲ'ವೆಂಬುದೊಂದೇ ಉತ್ತರವನ್ನು ತಂದುವು! ನಿನ್ನ ಕೈಯಿಂದಲಾದರೂ, ಬರ್ಮಾ(Burma)ಕ್ಕೆ ಒಂದು ಅರ್ಜಿಯನ್ನು ಬರೆದುಕೊಡು. ಅಲ್ಲಿನ ವಿದ್ಯಾಭ್ಯಾಸದ ಇಲಾಖೆಯಲ್ಲಿ, ಒಂದೆರಡು ಕೆಲಸಗಳು ಖಾಲಿಯಿವೆಯಂತೆ.'

ರಾಜು:—'ಅದಕ್ಕೇನು? ಆಗಬಹುದು. ಆದರೆ, ನನ್ನ ಕೈಯೂ ನಿನ್ನ ಕೈಯಂತೆಯೇ ಅದೃಷ್ಟಹೀನವಾದುದೇನೋ?--ಯಾರಿಗೆ ಗೊತ್ತು?'

ರಾಮುಸ್ವಾಮಿ:—'ಆದರಾಗಲಿ! ನನ್ನ ಅದೃಷ್ಟ!! ಬರೆದುಕೊಡು, ನೋಡುತ್ತೇನೆ'.

ರಾಜು:—'ಹಾಗಾದರೆ ಸರಿ. ಬರೆದುಕೊಡುತ್ತೇನೆ.— ನೀನು ಯಾವಾಗ ಬೀ. ಏ. ಪರೀಕ್ಷೆಯನ್ನು ಪ್ಯಾಸುಮಾಡಿದೆ?'

ರಾಮುಸ್ವಾಮಿ:—'ಇದೋ! ನೋಡು. ಹೋದವರುಷ. — ಬೀ. ಏ. ಪರೀಕ್ಷೆಯ ಬಹುಮಾನದ ಪದಕ!! ಫಿಜಿಕಲ್ ಸೈಯನ್ಸ್ (Physical Science--ಪ್ರಾಕೃತಿಕಶಾಸ್ತ್ರ)ನಲ್ಲಿ ಪ್ರೆಸಿಡೆನ್ಸಿಗೆ ಫಸ್ಟ್(First — ಪ್ರಥಮ) ಆದುದಕ್ಕೆ ಬಂದುದು!!!'

**ರಾಜು:**—'ಅದಿರಲಿ! ನಾನೊಂದು ಪ್ರಶ್ನೆಯನ್ನು ಕೇಳುತ್ತೇನೆ.—ಷೇಕ್ಸ್‌ಪೀಯರ್ ಕವಿಯ ಮಹಾನಾಟಕಗಳಲ್ಲಿ ನೀನೆಷ್ಟನ್ನೋದಿರುವೆ?''

**ರಾಮಸ್ವಾಮಿ:**—'ನಾನೆ? ಎಫ್. ಎ. ಗೆ ಮರ್ಚೆಂಟ್ ಒಫ್ ವೆನಿಸ್ (Merchant of Venice) ಎಂಬ ನಾಟಕವು ಟೆಕ್ಸ್ಟ (Text—ಪಠ್ಯಪುಸ್ತಕ) ಆಗಿದ್ದಿತು; ಬೀ. ಎ.ಗೆ ಹ್ಯಾಮ್ಲೆಟ್ (Hamlet) ಎಂಬ ನಾಟಕವನ್ನು ಇಟ್ಟಿದ್ದರು;— ಈ ಎರಡು ನಾಟಕಗಳನ್ನೂ ತುಂಬ ಶ್ರದ್ಧೆಯಿಂದ ಓದಿದ್ದೇನೆ.'

**ರಾಜು:**—'ಇನ್ನೂ ಯಾವುದಾದರೂ ಕಾವ್ಯಗಳು?'

**ರಾಮಸ್ವಾಮಿ:**—'ಆಹಾ! ಅದಕ್ಕೇನು?—ಸ್ಕಾಟ್ ಕವಿಯ ನಾವೆಲ್ (Novel—ಕಾದಂಬರಿ)ಗಳೆರಡು ಎಫ್. ಎ. ಗೂ, ಬಿ. ಎ. ಗೂ ನಿಯಮಿತವಾಗಿದ್ದುವು. ಅವುಗಳನ್ನೂ, ಇನ್ನೂ ಒಂದೆರಡು ಪುಸ್ತಕಗಳನ್ನೂ ಓದಿದ್ದೇನೆ.'

**ರಾಜು:**—'ನೀನು ವರ್ತಮಾನ ಪತ್ರಿಕೆಗಳನ್ನು ಓದುವುದುಂಟಷ್ಟೆ!

**ರಾಮಸ್ವಾಮಿ:**—'ಇಲ್ಲವೆಂದೇಕೆ ಹೇಳಬೇಕು?—ಕಳೆದ ಒಂದೆರಡು ತಿಂಗಳಿಂದಲೂ, ವರ್ತಮಾನಪತ್ರಿಕೆಗಳ 'ಬೇಕು!' ಎಂಬ ಭಾಗವನ್ನು ಮಾತ್ರ, ಅರ್ಜಿಗಳನ್ನು ಬರೆಯುವುದಕ್ಕೋಸ್ಕರ, ತುಂಬ ಚೆನ್ನಾಗಿ ಓದುತ್ತಿದ್ದೇನೆ.'

**ರಾಜು:**—'ಅಷ್ಟೇಯೋ?'

**ರಾಮಸ್ವಾಮಿ:**—'ಅಷ್ಟೇ ಸರಿ!'

**ರಾಜು:**—'ಗಣಿತಶಾಸ್ತ್ರವನ್ನಾದರೂ, ಚೆನ್ನಾಗಿ ಬಲ್ಲೆಯೆಂದು ತೋರುವುದು!'

**ರಾಮಸ್ವಾಮಿ:**—'ಆಹಾ! ತಕ್ಕಮಟ್ಟಿಗೆ.'

**ರಾಜು:**—'ಮುನಿಸಿಪಿಯ ಕೆಲಸವಾದರೆ, ನಿನಗೆ ತೃಪ್ತಿಯಾಗಿರುವುದಷ್ಟೆ!'

**ರಾಮಸ್ವಾಮಿ:**—'ಅಷ್ಟಾದರೆ ಇನ್ನೇನು? ಕೋಲಾಹಲವಾಯಿತು!'

**ರಾಜು:**—'ಹಾಗಾದರೆ, ನಿನ್ನ ಆ ಗಣಿತವೂ, ಪ್ರಾಕೃತಿಕಶಾಸ್ತ್ರವೂ ನಿನಗೆ ಯಾವ ಪ್ರಯೋಜನವನ್ನೂ ಉಂಟುಮಾಡಲಾರವು!—ಮುಖ್ಯವಾಗಿ, ಲೇಖನಿಯು ಚೆನ್ನಾಗಿ ಓಡಬೇಕು! ನಿನಗೆ, ಜಾಗ್ರತೆಯಾಗಿ ಬರೆಯುವುದಕ್ಕೆ ಬರುತ್ತದೆಯೋ?'

**ರಾಮಸ್ವಾಮಿ:**—ಜಾಗ್ರತೆಯಾಗಿ ಬರೆದರೆ, ನಾನು ಬರೆದುದು ನನಗೆ ಕೂಡ ಗೊತ್ತಾಗುವುದಿಲ್ಲ! ನಿಧಾನವಾಗಿ ಬರೆದರೆ, ಅಂದವಾಗಿರುತ್ತದೆ.'

**ರಾಜು:**—'ಇದನ್ನೆಲ್ಲಾ ಕೇಳಿದುದಕ್ಕೆ ನನ್ನನ್ನು ಕ್ಷಮಿಸು. ನಿನ್ನ ಸರಳತೆಗೆ ಸಂತೋಷಿಸುತ್ತೇನೆ.—ಬೀ. ಏ. ಪರೀಕ್ಷೆಯನ್ನು ಮಾಡಿದುದರಿಂದ, ಸ್ವಲ್ಪವಾದರೂ ನಿನಗೆ ಅನುಕೂಲವಿಲ್ಲ!'

**ರಾಮಸ್ವಾಮಿ:**—'ಇಲ್ಲದಿದ್ದರೆ, ಹೋಗಲಿ! ಈಗ, ನೀನು ಅರ್ಜಿಯನ್ನು ಬರೆದುಕೊಡುವೆಯೋ—ಇಲ್ಲವೋ?'

**ರಾಜು:**—'ಇದೋ! ಬರೆಯುತ್ತೇನೆ'—(ಎಂದು ಬರೆದು) 'ತೆಗೆದುಕೋ! ನಿನಗೆ ಜಯವಾಗಲಿ!'

(ರಾಮಸ್ವಾಮಿಯು ಅರ್ಜಿಯನ್ನು ತೆಗೆದುಕೊಂಡು ಹೊರಟುಹೋಗುವನು.)

**ರಾಜು:**—'ಅಯ್ಯೋ! ಪಾಪ! ಏನವಸ್ಥೆ! ಬೀ. ಏ. ಪರೀಕ್ಷೆಯನ್ನು ಮಾಡಿದ್ದಾನೆ!'— (ಎನ್ನುತ್ತ, ಹೊರಟುಹೋಗುವನು.)

B. VENKATKRISHNAPPA, B. A.

# ಅಕ್ಕಿಯ ಮರ.

## (i)

ಡಿಸೆಂಬರ ರಜೆಯನ್ನು ಮದನಪುರದಲ್ಲಿಯೇ ಕಳೆಯಬೇಕೆಂದು ನಮ್ಮ ಜನಗಳು ಒತ್ತಾಯಪಡಿಸುತ್ತಿದ್ದರು. ಅಲ್ಲಿ ನಮಗೊಂದು ಚಿಕ್ಕ ಬಂಗಲೆ.

ಸಾಮಾನುಗಳನ್ನೆಲ್ಲ ಸಿದ್ಧಪಡಿಸಿಕೊಂಡು, ಮೂರು ಗಂಟೆಯ ಟ್ರೇಯಿನನ್ನು ಹತ್ತುವುದಕ್ಕಾಗಿ, ಹೌರಾ ಸ್ಟೇಷನಿಗೆ ಬಂದೆನು.

ಅಲ್ಲಿ ಎಷ್ಟೊಂದು ಜನಸ್ತೋಮ! ಪುಣ್ಯಕ್ಕೆ, ಹೆಚ್ಚಿನವರು ಸಭ್ಯ ಗೃಹಸ್ಥರೇ ಆಗಿದ್ದರು;—ಶುಭ್ರವಾದ ಉಡುಪುಗಳನ್ನುಟ್ಟು, ಮನೋಹರವಾದ ಪರಿಮಳದ್ರಾವಕವನ್ನು ಚಿಮುಕಿಸಿಕೊಂಡಿದ್ದ ಯುವಾಪುರುಷರು. ಮುಖಗಳು ನಸುನಗೆಯಿಂದ ಬೆಳಗುತ್ತಿದ್ದುವು. ಅತ್ತೆಯ ಮನೆಗೆ ಹೋಗುತಿದ್ದ ಹೊಸ ಅಳಿಯಂದಿರಂತೆ ಕೆಲವರು; ಮತ್ತೆ ಕೆಲವರು ಅತ್ತೆಯ ಮಗಳೆಲ್ಲಿಯಾದರೂ ಇತ್ತ ಬರುವಳೋ ಎಂದು ನೋಡುವುದಕ್ಕೆ ಬಂದಂತಿದ್ದರು. ಇಂತಹ ಜನರ ಸಹವಾಸವು ಆಯಾಸಕರವಲ್ಲ;—ಆನಂದಪ್ರದ!

ಟ್ರೇಯಿನು ಹೊರಟಿತು. ಗಟ್ಟಿಯಾದ ನಗೆಯಿಂದಲೂ, ಮದವೇರಿದ ಮಾತುಗಳಿಂದಲೂ, 'ಸಿಗರೆಟ್ಟು'ಗಳ ಹೊಗೆಯಿಂದಲೂ ನಮ್ಮ ಕೋಣೆ ತುಂಬಿಹೋಯಿತು. ಹೂಗ್ಲಿಯ ವರೆಗೂ ಟ್ರೇಯಿನು ಜನಭರಿತವಾಗಿದ್ದಿತು. ಆ ಮೇಲೆ ಕ್ರಮಕ್ರಮವಾಗಿ ಬರಿದಾಗುತ್ತ ಬಂದಿತು. ಪುಂಡ್ವಾದಲ್ಲಿ ಸ್ಥೂಲಕಾಯನೊಬ್ಬನು ಬಂದಿ ಹತ್ತಿದನು. ಕಪ್ಪು ಚೋಮದ ಬಟ್ಟೆಯನ್ನು ರುಮಾಲಿನ ಹಾಗೆ ಸುತ್ತಿದ್ದನು; ಕಣ್ಣಿಗೆ ಕನ್ನಡಿಯನ್ನು ಹಾಕಿಕೊಂಡಿದ್ದನು; ಮೆಯ್ಯನ್ನೆರಡು ಹಳೆಯ ಶಾಲುಗಳಿಂದ ಮುಚ್ಚಿದ್ದನು; ಹಳೆಯ 'ಸ್ಟಾಕಿಂಗ್ಸು'ಗಳ ಮೇಲೆ ಹರಿದುಹೋಗಿದ್ದ ಬೂಟ್ಸುಗಳನ್ನು ಧರಿಸಿದ್ದನು. ಅವನಿಗೆ ಸುಮಾರು 50 ವರ್ಷಗಳಿರಬಹುದು. ಅವನ ಜತೆಗೆ ಇನ್ನೂ ಅನೇಕರು ಒಳನುಗ್ಗಿದರು. ಸಾಮಾನುಗಳೆಂತಲೂ ಕುಳಿತುಕೊಳ್ಳಲು ಸ್ಥಳವೆಂತಲೂ ಕೋಣೆಯೆಲ್ಲ ತುಂಬಿತು. ಆಗ ಯಾರೋ ಕೆಳಗಿಂದ ಕೂಗಿದರು:—'ಎಲ್ಲ ಬಂದಿತೆ? ಲೆಕ್ಕಮಾಡಿ ನೋಡಿಕೊಳ್ಳಿ.'

ಕೇಳಿ, ಅವನು ಗಂಟುಗಳನ್ನೆಲ್ಲ ಒಂದೊಂದಾಗಿ ಎಣಿಸತೊಡಗಿದನು. ಎಣಿಸುವುದಕ್ಕೂ ಎರಡನೆಯ ಗಂಟೆ ಬಡಿವುದಕ್ಕೂ ಸರಿ

ಹೋಯಿತು. ಅವನು ಆತುರದಿಂದ,—'ಏಳಲ್ಲವೆ? ಇಲ್ಲಿ ಆರೇ ಇವೆ!'—ಎಂದು ಕೂಗಿದನು. ಅಷ್ಟರಲ್ಲಿ ಟ್ರೈನು ಹೊರಟೇ ಬಿಟ್ಟಿತು. ಅವನು ಕಿಡಿಕಿಯಿಂದ ತಲೆಯನ್ನು ಹೊರಚಾಚಿ,—'ಹಂಡೀ! ಹಂಡೀ!'—ಎಂದು ಬಲವಾಗಿ ಬೊಬ್ಬಿಟ್ಟನು. ಟ್ರೈನಿನ ಜತೆಗೆ ಓಡಿಬಂದು, ಕೂಲಿಯು ವನು ಅದನ್ನು ಅವನ ಕೈಗೆ ಕೊಟ್ಟನು. ಆದರೆ ಅವನು ತೆಗೆದುಕೊಳ್ಳ ಲಾರದೆ ಹೋಗಿ, ಕೈಬಿಟ್ಟುಬಿಟ್ಟನು. ಅದು ಕೆಳಗೆ ಬಿದ್ದು ಚೂರು ಚೂರಾಯಿತು. ಆ ಶಬ್ದವನ್ನು ನಾವೆಲ್ಲರೂ ಕೇಳಿದೆವು.

ಗೃಹಸ್ಥನು ತಡೆಯಲಾರದ ಕೋಪದಿಂದ ಕಾಲುಮಣೆಯ ಮೇಲೆ ಕುಳಿತುಬಿಟ್ಟನು. ಅಲ್ಲಿದ್ದವರಲ್ಲಿ ನಾನೇ ದೊಡ್ಡ ಮನುಷ್ಯನೆಂಬುದನ್ನು ಪರೀಕ್ಷಿಸಿ ತಿಳಿದವನಾಗಿ,—'ನೋಡಿದಿರಯ್ಯಾ ಕೆಲಸದ ಚೆಂದವನ್ನು? 'ಹಂಡಿ'ಯನ್ನು ಕೈಗೆಕೊಟ್ಟು, ಕೆಳಗೆ ಹಾಕಿದುದು?'—ಎಂದನು.

ಅವನ ಮಾತುಗಳ ಕ್ರಮದಿಂದ ನನಗೆ ಸ್ವಲ್ಪ ನಗೆ ಬಂದಿತು. ಕಷ್ಟದಿಂದ ನುಂಗಿಕೊಂಡು,—'ಅದರಲ್ಲಿದ್ದುದೇನು?'—ಎಂದೆನು.

'ಅಯ್ಯಾ! ನನ್ನ ಹೊಟ್ಟೆ;—ಒಂದು ಮಡಕೆ ತುಂಬ ಅನ್ನ! ಎರಡು ರೂಪಾಯಿ ಬೆಲೆಬಾಳುವ ಪದಾರ್ಥ! ಕಾಸಿನ ಪ್ರಯೋಜನವಿಲ್ಲದೆ, ಪ್ಲಾಟುಫಾರ್ಮಿನ ಮೇಲೆ ಬಿದ್ದು, ಮಣ್ಣು ತಿಂದುಹೋಯಿತು! ಒಂದಗು ಳನ್ನಾದರೂ ನಾನು ಮುಟ್ಟಲಿಲ್ಲ! ಮನೆಯಿಂದ ಬರುವಾಗಲೇ, ಮಂತ್ರ ಹೇಳಿದ ಹಾಗೆ, ಹೇಳಿಕೊಂಡು ಬರುತ್ತಿದ್ದೆ; 'ನೋಡಿಕೋ! ಜೋಕೆ! ಹಂಡಿ! ನನ್ನ ಹೊಟ್ಟೆ! ಎರಡು ರೂಪಾಯಿ! ಮರೆಯಬೇಡ!' ಎಂದು;—ಇಷ್ಟಾದರೂ, ಆ ಹೆಡ್ಡಬಸ್ತಿಯ ಮಗ ಮರೆತೇಬಿಟ್ಟ; ಹಾಳಾಗಿ ಹೋಗಲಿ!—ಒಂದು ಮಡಕೆ ತುಂಬ ಅನ್ನ ಮೂರಾಯು! ಮಣ್ಣು ತಿಂದು ಹೋಯಿತಪ್ಪಾ! ನಾನು ಹೋಟಲನ್ನ ತಿನ್ನುವುದಿಲ್ಲ;—ನನ್ನ ಮೈಗೆ ಆಗುವುದಿಲ್ಲ;—ಎಲ್ಲಿ ಹೋದರೂ, ಮನೆಯಿಂದಲೇ ಬುತ್ತಿ ಕಟ್ಟಿಕೊಂಡು ಹೊರಡುತ್ತೇನೆ. ನಮ್ಮ ಚಿಕ್ಕಮ್ಮ—ಅವಳಿಗೆ ಸ್ವಲ್ಪ ನಿದ್ದೆ ಹೆಚ್ಚು;—

ಅಂಥವಳನ್ನು ನಿನ್ನೆ ರಾತ್ರಿ 3 ಗಂಟೆಯಲ್ಲಿ ಎಬ್ಬಿಸಿ, ಅನ್ನಮಾಡಿಸಿದೆನಯ್ಯಾ!'—(ಬೆರಳನ್ನು ಮಡಿಸುತ್ತ)—'ಲೂಚಿ, ಕಚೋರಿ, ಆಸಚೋಕಾ, ಸಂದೇಶ;—ಆಮೇಲೆ, ಆಲೂಗಡ್ಡೆಯ ಪಲ್ಯ, ಮೋಹನ್ ಬಾಗ್, ಲಾಲ್‌ಬಾಗ್;—ಒಂದು 'ಪೌಂಡು' ಮೊಲಿನಾಲಡ್ಡು;—ಇಷ್ಟಿದ್ದುವು.—ಮೊಲಿನಾಲಡ್ಡುಗಳನ್ನು ನೀವೆಂದಾದರೂ ತಿಂದಿರುವಿರಾ?'

ಅಲ್ಲಿದ್ದವರೆಲ್ಲರೂ ಈ ಹೆಸರುಗಳನ್ನು ಕೇಳಿ, ನಗೆಯನ್ನು ತಡೆಯಲಾರದೆ ಬಾಯನ್ನು ಬಿಮ್ಮಗೆ ಒತ್ತಿ ಹಿಡಿದುಕೊಂಡಿದ್ದವರು ಪ್ರಶ್ನೆಯ ಸ್ವಾರಸ್ಯವನ್ನು ತಿಳಿಯಲಾರದೆ, ಗಟ್ಟಿಯಾಗಿ ನಕ್ಕುಬಿಟ್ಟರು. ನಾನು ಪ್ರಯತ್ನಪಟ್ಟು, ಆ ಗಂಭೀರಭಾವವನ್ನು ನಿಲ್ಲಿಸಿಕೊಂಡು,—'ತಿಂದಂತೆ ಜ್ಞಾಪಕವಿಲ್ಲ!'—ಎಂದೆನು.

'ಹಾಗಾದರೆ, ನೀವದನ್ನು ತಿನ್ನಲೇ ಇಲ್ಲ!—ಅದು ಮರೆಯತಕ್ಕ ಪದಾರ್ಥವಲ್ಲ!'

'ಇರಬಹುದು.'

'ಮೊಲಿನಾಲಡ್ಡು ಎಂಬ ಹೆಸರನ್ನೂ ಕೇಳಿಲ್ಲವೆ?'

'ಇಲ್ಲ.'

'ನೀವೆಲ್ಲಿಂದ ಬಂದುದು?'

'ಕಲಿಕತ್ತೆ.'

'ವಾಸವೆಲ್ಲಿ?'

'ಅಲ್ಲಿಯೇ.'

'ಆಃ! ನೀವು ತಾಜಾ ಕಲ್ಕತ್ತಾವಾಲಾ! ಇರಲಿ! ಆ ಲಡ್ಡುಗಳ ವಿಷಯದಲ್ಲಿ ನಿಮಗೊಂದು ಕಥೆ ಹೇಳುತ್ತೇನೆ. ಅದಕ್ಕೆ ಮೊದಲು, ತಂಬಾಕು ಸೇವೆಯಾಗಲಿ!'

ಅವನು ತಂಬಾಕನ್ನು ಸಿದ್ಧಪಡಿಸಲಾರಂಭಿಸಿದನು. ನನ್ನ ಪ್ರಯಾಣದಲ್ಲಿ ಎಂದೆಂದೂ ಇಂತಹ ಮಹಾತ್ಮರನ್ನು ನಾನು ಕಂಡುದೇ

ಇಲ್ಲ. ಬಂಗಾಳಾ ರಾಜಕಾರ್ಯದಲ್ಲಿ ಇವನಿಗೊಂದು ಸ್ಥಳವು ದೊರೆಯು ದಿದ್ದುದು ಶುದ್ಧ ಅನ್ಯಾಯವೆಂದು ಆಗ ನನಗೆ ತೋರಿತು. ಆ ಮಹಾ ಪುರುಷನು ಬಂದು, ನಾನಿದ್ದ ಕೋಣೆಯಲ್ಲಿಯೇ ಕುಳಿತುದು ನಿಜ ವಾಗಿಯೂ ನನ್ನ ಭಾಗ್ಯ! ಮದನಪುರಕ್ಕೆ ರೈಲು ರಾತ್ರಿ ೩ ಗಂಟೆಗೆ ಬರುವುದು. ಆ ಸಮಯದಲ್ಲಿ ಪ್ರಾಯಃ ಅನೇಕರು ನಿದ್ದೆ ಮಾಡುವ ಸಂಭವವುಂಟು. ಹಾಗೆಲ್ಲಿಯಾದರೂ ನನಗೂ ನಿದ್ದೆ ಬಂದು ಬಿಟ್ಟಿದ್ದರೆ, ಸ್ಟೇಶನು ದಾಟಿ ಹೋಗಿ, ಆ ಮೇಲೆ ಎಷ್ಟೋ ತೊಂದರೆಯಾಗುತ್ತಿದ್ದಿತು. ಆದರೆ, ನಮ್ಮ ಆ 'ಉಪನ್ಯಾಸಕುಲತಿಲಕ'ರ ದಯೆಯಿಂದ ನಾನು ಎಚ್ಚರ ವಾಗಿರಬೇಕಾಯಿತು. ಅವರು ತಂಬಾಕನ್ನು ಸಿದ್ಧಪಡಿಸುತ್ತ,—'ನಿಮ್ಮ ಹೆಸರೇನು?'—ಎಂದರು.

'ಸದಾನಂದಚಕ್ರವರ್ತಿ.'

'ನನ್ನ ಹೆಸರು ಮ–ದನ–ಮೋಹನ–ವೇಣು–ಗೋಪಾಲ–ಶರ್ಮ ಮೊಲಿನಾಕ್ಕೆ ಹತ್ತಿರದಲ್ಲಿ ಇಕೋಬಾ ಗ್ರಾಮದಲ್ಲಿ ವಾಸ. ಅದು ವರ್ಧ ಮಾನ ಜಿಲ್ಲೆಗೆ ಸೇರಿದುದು. ಯೋಗೀಶ್ವರ ಪಂಡಿತರ ವಂಶಸ್ಥನು ನಾನು. ಅವರಿಗೆ ಏಳು ಮಕ್ಕಳು; ಅವರಲ್ಲಿ ಒಬ್ಬನು ಜಾನಕೀನಾಥ.'

ಇಷ್ಟರಲ್ಲಿಯೇ ಮಾತು ಮುಗಿಯಬೇಕಾಯಿತು. ಆಗ ಅವನು ಅಗ್ನಿ ಹೋತ್ರಕ್ಕೆ ಪ್ರಾರಂಭ ಮಾಡಿ, ಒಂದು ಬಾರಿ ಹೋಮಧೂಮ ವನ್ನು ಹೊರಗೆ ಬಿಟ್ಟಿದ್ದನು. ಅವನ ಮುಖವು ಮಡಕೆಯು ನಷ್ಟದಿಂದ ಸ್ವಲ್ಪ ಹೊತ್ತಿಗೆ ಹಿಂದೆ ವ್ಯಸನದಿಂದ ತುಂಬಿಕೊಂಡಿದ್ದುದು ಈಗಲೀಗ ಪ್ರಾಯಃ ತನ್ನ ಘನವಂಶದ ಕೀರ್ತಿಸ್ಮರಣೆಯಿಂದ ಬೆಳಗಲಾರಂಭಿ ಸಿತು. ಅವನ ಮುಖಭಾವವನ್ನೇ ಕುತೂಹಲದಿಂದ ನಾನು ನೋಡಿ ಕೊಂಡಿದ್ದೆನು.

ವರ್ಧಮಾನಕ್ಕೆ ಬಂದುದೇ ಬಂಡಿ ನಿಂತಿತು. ಅಷ್ಟರಲ್ಲಿ ನನ್ನ 'ಸಿಗರೆಟ್ಟು'ಗಳ ಉಗ್ರಾಣವು 'ಖಾಲಿ'ಯಾಗಿದ್ದಿತು. ಅದನ್ನು ಕೊಂಡು

ಕೊಳ್ಳಲೆಂದೂ, ಕುಳಿತು ಕುಳಿತು ಸಾಕಾಗಿದ್ದ ನನ್ನ ಬೇಸರವನ್ನು ಹೋಗಲಾಡಿಸಲೆಂದೂ ನಾನು ಬಂಡಿಯಿಂದಿಳಿದೆನು. ಹೊರಡುವ ಗಂಟೆಯಾಯಿತು. ಪುನಃ ಬಂದು ನೋಡಲು ನಾವು ಕೋಣೆಯಲ್ಲಿ ಇಬ್ಬರೇ ಇಬ್ಬರು! ಮದನಬಾಬು ನನ್ನನ್ನು ನೋಡಿ,—'ಮಹದಾನಂದ ಚಕ್ರವರ್ತಿ!——'

'ಅಲ್ಲ;—ಸದಾನಂದ.'

'ಅಹುದು! ಸ-ದಾ-ನಂದ—ಸದಾನಂದ ಚಕ್ರವರ್ತಿ! ನೀವೆಲ್ಲಿ ಇಳಿಯುವುದು?'

'ಮದನಪುರ.'

'ನಾನು—ಕಾಶಿಗೆ ಹೋಗುತ್ತೇನೆ. ನೀವಾದರೋ ಜಾಗ್ರತೆಯಾಗಿ ಕೆಲವು ಗಂಟೆಗಳಲ್ಲಿಯೇ ನಿಮ್ಮ ಸ್ಥಳವನ್ನು ಸೇರುವಿರಿ; ನಾನು—ಈ ರಾತ್ರಿಯೆಲ್ಲ ನಿದ್ದೆಯಿಲ್ಲದೆ ನಾಳೆಯೂ ಇದರಲ್ಲಿಯೇ ಬಿದ್ದು ಸಾಯಬೇಕು! ಕಾಶಿಗೆ ಹೋಗಿ ಸೇರುವುದು ನಾಳೆಯ ಸಾಯಂಕಾಲ! ಅಲ್ಲಿಯವರೆಗೆ ಏನು ತಿನ್ನಲಿ ಹೇಳಿ? ಕಾಶಿಯಲ್ಲಿ ನನ್ನ ತಾಯಿ; ಅಲ್ಲಿಗೆ ಹೋಗಿ ಮೂರು ವರ್ಷಗಳಾಯಿತು; ಮುದುಕಿ; ೭೦ ವರ್ಷ ವಯಸ್ಸು; ಆದರೂ, ಉಷಃಕಾಲಕ್ಕೆ ಸರಿಯಾಗಿ ಏಳುತ್ತಾಳೆ;—ಚಳಿಯಿಲ್ಲ; ಮಳೆಯಿಲ್ಲ:—ಏಕಪ್ರಕಾರ ಆ ದಶಾಶ್ವಮೇಧ ಘಟ್ಟದ ಬುಡದಲ್ಲಿ ಪ್ರಾತಃಸ್ನಾನ ಮಾಡುತ್ತಾಳೆ. ಕಳೆದ ಆಗಸ್ಟು ತಿಂಗಳಿಂದಲೂ ಅವಳಿಗೆ ಮೈ ಚೆನ್ನಾಗಿಲ್ಲ; ಆಗಾಗ ಜ್ವರವೂ ಬರುತ್ತಲೇ ಇರುತ್ತದೆ; ವಿಶೇಷ ಯೋಚನೆಗೇನೂ ಅವಕಾಶವಿಲ್ಲ;—ಆದರೂ ಖಾಯಿಲೆಯೆಂದು ಕೇಳಿ, ಹೇಗೆ ತಾನೇ ಮನೆಯಲ್ಲಿರಬಲ್ಲೆನು? ನಮ್ಮ ಪುರೋಹಿತರ ಎರಡನೆಯ ಮಗನು, ಅಲ್ಲಿ ಕಾಲೇಜಿನಲ್ಲಿ ಪ್ರೊಫೆಸರನಾಗಿದ್ದಾನೆ. ಸಂಸಾರವನ್ನೂ ಜತೆಯಲ್ಲಿಯೇ ಇಟ್ಟುಕೊಂಡಿರುವುದರಿಂದ, ನಮ್ಮ ತಾಯನ್ನೂ ಅವನಲ್ಲಿಯೇ ಬಿಟ್ಟಿದ್ದೆನು. ಬಹಳ ಯೋಗ್ಯ ಮನುಷ್ಯ; ತರ್ಕದಲ್ಲಿ ಅವನಿಗೆ ಸರಿಯಾದವರು ಯಾರೂ ಇಲ್ಲವೆಂದು ಜನಗಳು ಹೇಳುತ್ತಾರೆ. ನನ್ನಷ್ಟೇ ಪ್ರಾಯವಾಗಬಹುದು;—

ನಾವಿಬ್ಬರೂ ಬಾಲ್ಯದಲ್ಲಿ ಒಟ್ಟಿಗೆ ಆಡಿದವರು. ಚಿಕ್ಕವನಾಗಿರುವಾಗಲೇ, ಅವನಲ್ಲಿ ಆ ಬುದ್ಧಿಯು ಜಾತಿಯಿದ್ದಿತು. ಈಗ ನನಗೆ——'

ಮಾತಿನ ಪ್ರವಾಹವನ್ನು ತಡೆಯಲೆಂದು ನಾನು—'ಸಿಗರೆಟ್ಟು ಸೇದುವ ಅಭ್ಯಾಸವಿದೆಯೆ?'—ಎಂದನು.

'ಸಿಗರೆಟ್ಟೆ? ಹೂಂ! ಒಂದೊಂದು ವೇಳೆ ಸೇದುವುದುಂಟು. ಯೌವನದಲ್ಲಿ ಕಲ್ಕತ್ತಾ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ, ಎಷ್ಟೋ ಸೇದಿ ಬಿಟ್ಟಿದ್ದೇನೆ;—ಲೆಕ್ಕವೇ ಇಲ್ಲ. ಆ ಕಾಲದಲ್ಲಿ ಈಗಳಿನಂತೆ, 'ಕುದುರೆಯ ಕೊಂಬು,' 'ಕಾಗೆಯ ಕಿವಿ,' 'ಹಾವಿನ ಕಾಲು,' 'ಆನೆಯ ರೆಕ್ಕೆ'—ಎಂದು ಮುಂತಾದ ಹೆಸರುಗಳುಳ್ಳ ಸಿಗರೆಟ್ಟುಗಳಿರಲಿಲ್ಲ. ನಿಮ್ಮ ಹತ್ತಿರ ಇರುವುದೇನು? 'ಗಣಪತಿಯ ಹೆಂಡತಿ'ಯೆ?'

'ಅಲ್ಲ;—'ಷಣ್ಮುಖ ಸುಬ್ಬರಾಯ'! ಮೇಲೆ ಕತ್ತರಿಯ ಗುರುತಿದೆ!'

'ಒಳ್ಳೆಯ ಗುರುತು!—ಕೈಯಲ್ಲಿ ದುಡ್ಡಿಲ್ಲದಿದ್ದರೆ, ಯಾರ ಕಿವಿಯನ್ನಾದರೂ ಕತ್ತರಿಸಬಹುದು!'

'ಇಲ್ಲ; ನೋಡಿ;—ಚೆನ್ನಾಗಿದೆ!'—ಎಂದು ಸಿಗರೆಟ್ಟಿನ ಪೆಟ್ಟಿಗೆಯನ್ನು ಅವನ ಮುಂದೆ ಹಿಡಿದೆನು. ಅವನೊಂದನ್ನು ಆರಿಸಿಕೊಂಡನು; ನಾನೂ ಒಂದಕ್ಕೆ ಬೆಂಕಿಯನ್ನು ಹಚ್ಚಿದೆನು.

ಈಗಲೀಗ ಟ್ರೇಯಿನು ರಾಣಿಗಂಜಿಗೆ ಬಂದಿತು. 'ರಾಣಿಗಂಜಿ'—ಎಂದು ಪೋರ್ಟರು ಕೂಗಿದನು. ನಾನು ಹೊರಗೆ ಹಣಿಕಿ ನೋಡಿದೆನು;—ಎರಡು ಕಡೆಗಳಲ್ಲಿಯೂ ಕಲ್ಲಿದ್ದಲ ಗಣಿಗಳು. ಕೆಲವು ಕಡೆ ಉರಿಯುತ್ತಿದ್ದ ಕಲ್ಲಿದ್ದಲ ರಾಶಿಗಳು ದೊಡ್ಡ ಬೆಳಕನ್ನುಂಟುಮಾಡಿದ್ದುವು· ಇಟ್ಟಿಗೆಗಳಿಂದ ಕಟ್ಟಿದ ಕುಟೀರಗಳಲ್ಲಿ ಕೂಲಿಯವರು ಕುಳಿತುಕೊಂಡಿದ್ದರು;—ಕೆಲವರು ಅಡಿಗೆಮಾಡುತ್ತಿದ್ದರು.

ಚೆನ್ನಾಗಿ ಹಸಿವಾಗಿದ್ದಿತು;—ಫಲಾಹಾರಕ್ಕೆ ಇದೇ ಒಳ್ಳೆಯ ಸಮಯವೆಂದು ಯೋಚಿಸಿದೆನು. ತಿಂಡಿಯ ಸಾಮಾನು ತುಂಬಿದ ಬುಟ್ಟಿ

ಯೊಂದನ್ನು ನಾನು ತಂದಿದ್ದೆನು. ಕಷ್ಟಪಟ್ಟು, ಮದನ ಬಾಬುವಿನ ಸಾಮಾನಿನೊಡನೆ ಸಿಲುಕಿಕೊಂಡಿದ್ದ ಅದನ್ನು ಹೊರಗೆಳೆದನು. ಮತ್ತೂ ಯೋಚಿಸಿದೆನು:—'ಅವನು ಉಪವಾಸವಿರುತ್ತ, ನಾನು ಹೇಗೆ ತಿನ್ನಲಿ? ಅಥವಾ ಕೇಳಿದೆನೆನ್ನುವ! ಶುದ್ಧ ಹಸ್ತದಿಂದ ಸಿದ್ಧವಾದುದಲ್ಲವೆಂದು ಅವನು ನಿರಾಕರಿಸಿದರೆ?' ಹೇಗಾದರೂ ಅವನನ್ನು ಕೇಳಲೇಬೇಕೆಂದು ನಿಶ್ಚಯಿಸಿದೆನು.—'ಒಪ್ಪಿದರೆ, ಆಯಿತು; ಇಲ್ಲದಿದ್ದರೆ ಏನು ಮಾಡುವುದು?'–ಒಟ್ಟಿಯನ್ನೆತ್ತಿ ಕಾಲು ಮಣೆಯ ಮೇಲಿಟ್ಟು, ಕೊನೆಗೆ ಹೇಗೆಂದೆನು: —'ನೀವು ತಂದ ತಿಂಡಿ ಹೋಯಿತಲ್ಲವೆ?'

'ಹೋಯಿತಪ್ಪಾ, ಹೋಯಿತು! ಮಡಕೆ ತುಂಬ ಅನ್ನ! ಎರಡು ರೂಪಾಯಿ! ಲೂಚಿ, ಕಚೋರಿ—'

'ನಾನೂ ಸ್ವಲ್ಪ ತಂದಿದ್ದೇನೆ;—ಆಕ್ಷೇಪವಿಲ್ಲದಿದ್ದರೆ, ಒಟ್ಟಿಗೆ ತಿನ್ನುವ!'

'ನಿಮ್ಮಲ್ಲಿ ಏನಿವೆ?'

'ಕೋಳಿಮೊಟ್ಟೆ, ರೊಟ್ಟಿ, ಮಾಂಸ, ಬೆಣ್ಣೆ—ಇತ್ಯಾದಿ!'

'ಹಿಂದೂಮಾಂಸವೊ? ಯುರೋಪಿಯನರದೊ?'

'ಹಿಂದೂಮಾಂಸ! ಬ್ರಾಹ್ಮಣರೇ ಸಿದ್ಧಮಾಡಿದುದು!! ರೊಟ್ಟಿ ಮಾತ್ರ 'ಯುರೋಪಿನಲ್ಲಿ ಸಿದ್ಧವಾದುದು.' ಮಿಕ್ಕುದೆಲ್ಲ ಹಿಂದೂ ಪದ್ಧತಿಗೆ ಅನುಸಾರವಾಗಿರುವುದು.'

'ಸಾಕು;—ನನಗೆ ರೊಟ್ಟಿ ಬೇಕಾಗಿಲ್ಲ. ಕಲ್ಕತ್ತೆಯಲ್ಲಿ ಇಂಗ್ಲೀಷನ್ನು ಕಲಿಯುತ್ತಿದ್ದಾಗ, ಇಂತಹ ಎಷ್ಟೋ ಅಕಾರ-ಮೇಕಾರಾದಿಗಳನ್ನು ಪೂರೈಸಿಬಿಟ್ಟಿದ್ದೇನೆ. ಪ್ರಾಯಃ, ತಿನ್ನದೆ ಬಾಕಿಯಾವುದೂ ಇಲ್ಲ;—ಜಾತಿ ಮಾತ್ರ!—ಹೋಗಲಿ!—ಆ ಕಾಲದಲ್ಲಿ ಹುಡುಗರು ಏನನ್ನೂ ತಿಂದುಬಿಡುತ್ತಿದ್ದರು!'

ಹೆಚ್ಚು ಮಾತಾಡದೆ, ನಾನು ತಿಂಡಿಗಳನ್ನೆಲ್ಲ ತೆಗೆದು, ಹರಿವಾಣದಲ್ಲಿ ಹಾಕಿಟ್ಟೆನು. 'ಮುಳ್ಳುಚೂರಿಗಳು ಬೇಕೆ?'—ಎಂದೆನು.

'ದೇವರು ಕೊಟ್ಟ ಕೈಯಿಲ್ಲವೆ?'

'ಇದೋ! ರೊಟ್ಟಿ, ಬೆಣ್ಣೆ, ಹಣ್ಣುಗಳ ರಸಾಯನ, ಬೇಕಾದುದನ್ನು ಹೇಳಿ'— ಎಂದೆನು.

'ರಸಾಯನ! ಎಲ್ಲಿ? ಈಚೆಗೆ ಕೊಡಿ!—ರುಚಿನೋಡುತ್ತೇನೆ. ಅದನ್ನಿದುವರೆಗೆ ತಿಂದಿರುವೆನೋ ಇಲ್ಲವೋ?'

ನಾನು ಕೊಟ್ಟೆನು. ಅವನದನ್ನು ತಿಂದು, ಎದ್ದು ನಿಂತವನಾಗಿ, ಕಿಟಿಕಿಯ ಹೊರಗೆ ಕೈಬಾಯಿಗಳನ್ನು ತೊಳೆದುಕೊಂಡನು. ಅನಂತರ, ಶಾಲನ್ನು ಹೊದೆದು ಕಾಲುಮಣೆಯ ಮೇಲೆ ಕುಳಿತನು. ಒಂದು ಸಿಗರೆಟ್ಟನ್ನು ಕೊಡುವುದರಲ್ಲಿದ್ದೆನು.—'ಬೇಡ; ನಾನು ಹುಕ್ಕಾವನ್ನು ಸಿದ್ಧಪಡಿಸುತ್ತೇನೆ. ಅದಕ್ಕೆ ಸರಿಯಾದುದು ಪ್ರಪಂಚದಲ್ಲಿ ಯಾವುದೂ ಇಲ್ಲ. ಆ ಸುಖವನ್ನನುಭವಿಸುವುದಕ್ಕೂ ಯೋಗ್ಯತೆ ಬೇಕು!'

ಪಾತ್ರದಲ್ಲಿ ತಂಬಾಕನ್ನು ತುಂಬುತ್ತಿದ್ದಾಗ, ಕೇಳಿದೆನು:— 'ಮೊಲಿನಾಲಡ್ಡುಗಳ ಕಥೆ ಹೇಳಲೇ ಇಲ್ಲವೇಕೆ?'

'ಓಹೊ! ಮರೆತೇಹೋಯಿತು!— ಅದು ನಮ್ಮನಿಮ್ಮ ಕಾಲದ ಕಥೆಯಲ್ಲ; ಬಹು ಪುರಾತನವಾದುದು. ಹಿಂದೆ, ವರ್ಧಮಾನದಲ್ಲಿ ಒಬ್ಬ ಅರಸನಿದ್ದನು. ಅವನಿಗೆ ಲಡ್ಡುಗಳನ್ನು ತಿನ್ನಬೇಕೆಂದು ಆಶೆಯುಂಟಾಯಿತಂತೆ. ಆಗಲವನು ಮೊಲಿನಾದಿಂದ ಗಟ್ಟಿಗನಾದ ಅಡಿಗೆಯವನನ್ನು ಕರೆಯಿಸಿ, ಲಡ್ಡುಗಳನ್ನು ಮಾಡಿಸಬೇಕೆಂದು ಅಪ್ಪಣೆ ಕೊಟ್ಟನಂತೆ ರಾಜಾಜ್ಞೆ;—ಮೀರಲು ಯತ್ನವಿಲ್ಲ. ಅಧಿಕಾರಿಗಳು ಅಲ್ಲಿಗೆ ಹೋಗಿ, ಯಾರೋ ಒಬ್ಬ ಅಡಿಗೆಯವನನ್ನು ಬಿಟ್ಟಹಿಡಿದರು. ಅಡಿಗೆಯವನಿಗೆ ಉಪಾಯವಿಲ್ಲ; ಮಡಕೆ, ಗಡಿಗೆ, ಕೋಲು, ಕರಟ, ಸಟ್ಟುಗ, ಹಾರೆ, ಗುದ್ದಲಿ, ಮೊದಲಾದ ಸಾಮಗ್ರಿಗಳನ್ನು ಹೊತ್ತುಕೊಂಡು ಅರಮನೆಗೆ ಬಂದನು: ಇಂತಿಂತಹ ಸಾಮಗ್ರಿಗಳು ಬೇಕೆಂದು ಹೇಳಿಕಳುಹಿದನು. ರಾಜಧಾನಿಯಲ್ಲಿರುವ ಅಂಗಡಿಗಳನ್ನೆಲ್ಲ ಝಡ್ತಿ ಮಾಡಿ, ಅತ್ಯುತ್ತಮ ಪದಾರ್ಥಗಳನ್ನೇ ತಂದುಕೊಟ್ಟುದಾಯಿತು; ಅಡಿಗೆ

ಯುವನೂ ಲಡ್ಡುಗಳನ್ನು ಸಿದ್ಧಮಾಡಿದನು. ಆದರೆ, ಮಹಾರಾಜನ ನಾಲಗೆಯಲ್ಲವೆ? ಅದಕ್ಕೆ ಆ ಲಡ್ಡು ಅಷ್ಟೊಂದು ರುಚಿಯಾಗಲಿಲ್ಲ. ಹೇಳಿದನವನು,—ಅದು ಮೊಲಿನಾಲಡ್ಡುಗಳಷ್ಟು ಚೆನ್ನಾಗಿಲ್ಲವೆಂದು. ಅಡಿಗೆಯುವನು ನಡುಗುತ್ತ, ಎರಡು ಕೈಗಳನ್ನೂ ಜೋಡಿಸಿಕೊಂಡು,—(ಬಾಬುವೂ ನಡುಗುತ್ತ, ಕೈಜೋಡಿಸಿಕೊಂಡಿದ್ದಂತೆ, ಅಭಿನಯಿಸುತ್ತಿದ್ದನು;)—'ಮಹಾಪ್ರಭೋ! ಅಭಯವಿತ್ತರೆ, ಸತ್ಯವನ್ನು ಹೇಳುವೆನು.' ಎಂದನು. ನಿರ್ಭಯವಾಗಿ ಮಾತಾಡೆನ್ನಲು,—'ಮಹಾರಾಜ! ನೀನು ನನ್ನನ್ನೇನೋ ಮೊಲಿನಾದಿಂದಲೇ ಕರೆತರಿಸಿದೆ. ಆದರೆ ಮೊಲಿನಾದೇಶದ ಗಾಳಿ, ನೀರು, ಮಣ್ಣು, ಬೆಂಕಿ—ಇವುಗಳನ್ನೇಕೆ ತರಿಸಲಿಲ್ಲ?'—ಎಂದನು.'

ಮದನಬಾಬು ನಗುತ್ತ, ಕೆಮ್ಮುತ್ತ,—'ಚೆನ್ನಾಯಿತು! ಅಲ್ಲವೆ?'—ಎಂದನು. ಅನಂತರ, ಆ ನಗೆ, ಕೆಮ್ಮುಗಳು ಶಾಂತವಾದ ಬಳಿಕ,—'ಮೊಲಿನಾಲಡ್ಡುಗಳನ್ನು ತಿನ್ನದೆ ಇರುವುದರಿಂದ ಅವುಗಳ ರುಚಿಯನ್ನು ನೀವು ಊಹಿಸುವುದಕ್ಕೂ ಶಕ್ತರಾಗಲಾರಿರಿ. ಆಗಲಿ;—ನಾನು ಕಾಶಿಯಿಂದ ಬರುವ ವರೆಗೂ ನೀವು ಕಾದಿದ್ದರೆ?—ಶನಿವಾರ ಅಥವಾ ಭಾನುವಾರ ನಮ್ಮಲ್ಲಿಗೆ ಬರಲಾರಿರಾ?'

'ಬರುವೆನು.'

'ಹಾಗಾದರೆ ನಾನು ಹೇಳಿಕಳುಹುತ್ತೇನೆ; ಸ್ಟೇಶನ್ನಿಗೆ ನನ್ನ ಗೋರಥವನ್ನೂ ಕಳುಹುವೆನು. ಪುಂಥಾದಿಂದ ನಮ್ಮ ಗ್ರಾಮಕ್ಕೆ ಹೆಚ್ಚು ದೂರವಿಲ್ಲ. ಅಂದು ನೀವು ಆ ಲಡ್ಡುಗಳನ್ನೂ, ದೇಶೀಯ ರಸಾಯನವನ್ನೂ ತಿನ್ನುವಿರಂತೆ!'

ಆಶ್ಚರ್ಯದಿಂದ ನಾನು—'ದೇಶೀಯರಸಾಯನ? ಅದೆಂತಹದು?'

'ಆಃ!' ಎಂದವನು ನಗುತ್ತ—'ನೀವು ನಿಜವಾಗಿಯೂ ಕಲ್ಕತ್ತೆಯವರೇ ಸರಿ! ಬಾವಿಯ ಕಪ್ಪೆಯಂತೆ, ಹೊರಗಣ ಸಮಾಚಾರವೇ ಗೊತ್ತಿಲ್ಲ! ಪ್ರಾಯಃ, ಅಕ್ಕಿಯ ಮರವನ್ನು ನೀವು ನೋಡಲೇ ಇಲ್ಲ. ಅದರಲ್ಲಿ ಕೆಂಪಗೆ ಹೂಗಳು ಬಿಡುತ್ತವೆ. ಮರವನ್ನು ಕೊಯ್ದು, ಹಲಗೆ

ಗಳನ್ನಾಗಿ ಮಾಡಿ, ಮನೆಗೆ ಉಪಯೋಗಿಸುತ್ತಾರೆ. ಮತ್ತಾ ಮಾವಿನ ಬಳ್ಳಿ; ಅದನ್ನೂ ನೀವು ಕಾಣಲಿಲ್ಲವೋ? ಶುದ್ಧ ದಡ್ಡರು!'-ಎಂದು ಪುನಃ ನಗುವುದಕ್ಕೂ, ಕೆಮ್ಮುವುದಕ್ಕೂ ಮೊದಲು ಮಾಡಿದನು. ಅನಂತರ,-''ದೇಶೀಯ ರಸಾಯನವೆಂದರೆ, ಗೊತ್ತಾಯಿತೆ? ಮಲ್ಲಿಗೆಯ ಹಣ್ಣಿನಿಂದ ಮಾಡುವುದು!'—ಎಂದನು.

'ಸಿಗರೆಟ್ಟ'ನ್ನು ಒಂದು ಬಾರಿ ಚೆನ್ನಾಗಿ ಸೇದಿಬಿಟ್ಟು,—'ನನ್ನ ರಸಾಯನಕ್ಕೂ ನಿಮ್ಮ ಮಲ್ಲಿಗೆಯ ಹೂವು—ಅಲ್ಲ; ಕ್ಷಮಿಸಿ!—ಮಲ್ಲಿಗೆಯ ಹಣ್ಣಿಗೂ ಸಂಬಂಧವೇನೂ ಇಲ್ಲ!'—ಎಂದೆನು.

'ಅದು ಹೇಗೆ? ರಸಾಯನವೆಂಬುದರ ಅರ್ಥವೇನು? ಅದು ಮಲ್ಲಿಗೆಯ ಹಣ್ಣಿನಿಂದ ಸಿದ್ಧವಾಗುವುದಲ್ಲವೆ?'

'ನಿಜವಾಗಿಯೂ ಅಲ್ಲ.'

'ಏನು? ನಿಮ್ಮ ಹೇಳಿಕೆಯನ್ನೇ ನಾನು ನಂಬಬೇಕೆ? ನಾನು ಹುಡುಗನಾಗಿದ್ದಾಗ, 'ರಸಾಯನ ಮಲ್ಲಿಗೆ ಹಣ್ಣಿನ ಪಾಕ'—ಎಂದು ನಮ್ಮ ಉಪಾಧ್ಯಾಯರು ಪಟ್ಟುಹಿಡಿದು ಗಟ್ಟಿಮಾಡಿಸಿದುದು ಸತ್ತರೂ ಮರೆಯುವ ಹಾಗಿಲ್ಲ!'

'ನಿಮ್ಮ ಆ ಉಪಾಧ್ಯಾಯರು ಹೇಳಿಕೊಟ್ಟದು ತಪ್ಪು!'

'ತಪ್ಪು?—ಹಾಗಾದರೆ ಯಾವ ಮಣ್ಣಿನ ರಸಾಯನವದು?'

'ನಿಜವಾಗಿ, ಅದು ರಸಾಯನವಲ್ಲ; ಸಕ್ಕರೆ, ನೀರು, ಕಿತ್ತಳೇ ಹಣ್ಣುಗಳಿಂದ ಮಾಡಿದ ಒಂದು ಪಾಕ. ಅದು ಪರದೇಶದಿಂದ ಬರುವುದು. ಬಹುಕಾಲ ಉಳಿಯುವುದು.'

ಕೇಳಿ, ಬಾಬು ಸ್ತಬ್ಧನಾದನು. ಭಯಪಟ್ಟವನಂತೆ,—'ಕಿತ್ತೀಳೆ ಹಣ್ಣಿನ ರಸಾಯನ?—ಪಾಕ?' ಎಂದು ಕೇಳಿದನು.

'ಇದೇನು?'—ಎಂದು ನಾನು ಆಶ್ಚರ್ಯಪಟ್ಟು,—'ನಿಜ; ಅದು ಕಿತ್ತೀಳೆಹಣ್ಣಿನ ಪಾಕ!'—ಎಂದೆನು.

'ಕಿತ್ತೀಳೆಹಣ್ಣಿನ ಪಾಕವಾಗಿದ್ದರೆ, ಬಾಯಿತುಂಬ ಸೀಯಾಗ ಬೇಕಾಗಿದ್ದಿತು; ಇದು ಕೆಟ್ಟ ಕಹಿ. ಅದೇನು ಹಾಗೆ?'

'ಅದನ್ನು ಸಾಮಾನ್ಯವಾದ ಕಿತ್ತೀಳೆಹಣ್ಣುಗಳಿಂದ ಮಾಡುವು ದಿಲ್ಲ. ಸ್ಪೈಯಿನುದೇಶದಲ್ಲಿ 'ಸಿವಿಲ್ಲಿ' ಎಂಬ ಸ್ಥಳವುಂಟು. ಅಲ್ಲಿ ಒಂದು ವಿಜಾತೀಯವಾದ ಕಿತ್ತೀಳೆ ಬೆಳೆಯುವುದು. ಅದು ನೋಡುವು ದಕ್ಕೆ ಹೀಗೆಯೇ ಇದ್ದರೂ, ತಿನ್ನುವುದಕ್ಕೆ ಸ್ವಲ್ಪ ಕಹಿ. ಅದರಿಂದ ಈ ಪಾಕವನ್ನು ಸಿದ್ಧಮಾಡಿದುದು.'

'ಯಾರು? ಬ್ರಾಹ್ಮಣರೆ?'

'ಅಲ್ಲ.'

ಮದನಬಾಬುವಿನ ಮುಖವು, ಭಯಭರಿತವಾಗಿದ್ದುದೀಗ ಅಸಹ್ಯ ಭಾವವನ್ನು ಸೂಚಿಸಿತು. ಅವನು ಕೇಳಿದನು:—'ಅದು ಕಿತ್ತೀಳೆ ಹಣ್ಣಿನ ಪಾಕವೇ ಎಂದು ನಿಮಗೆ ನಿಶ್ಚಯವುಂಟೋ?'

'ಅಹುದು.'

'ಅಹುದು!'—ಎಂದು ಬಾಬು ನನ್ನನ್ನು ತಿರಸ್ಕಾರಮಾಡಿದನು.

ಬಹಳ ಆಶ್ಚರ್ಯಪಟ್ಟು, ಹಾಗೂ ಸ್ವಲ್ಪ ಕೋಪವುಳ್ಳವನಾಗಿ,—'ಮಹಾಶಯ! ಈ ಬಗೆಯ ನಡತೆ ಸಭ್ಯಗೃಹಸ್ಥರಿಗೆ ತಕ್ಕುದಲ್ಲ!'—ಎಂದು ನನ್ನ ಬೆನ್ನನ್ನು ಕಿಡಿಕಿಯ ಬಾಗಿಲಿಗೆ ತಿರುಗಿಸಿಕೊಂಡು, ಕಾಲನ್ನು ಕಾಲಮಣೆಯ ಮೇಲೆ ನೀಡಿ, ದೀಪವನ್ನು ನೋಡುತ್ತ ಕುಳಿತೆನು. ಅವನು ಹೇಳಿದನು:—'ನಿಜಸ್ಥಿತಿಯನ್ನು ತಿಳುಹಿದುದಕ್ಕಾಗಿ, ನಿಮಗೆ ವಂದನೆ! ಆದರೆ ನನಗೂ ನಿಮಗೂ ಪೂರ್ವಜನ್ಮದ ವೈರವೇನಾದರೂ ಇದ್ದಿತೋ? ಇಪ್ಪತ್ತು ವರ್ಷವಾಯಿತು! ನಾನು ಒಂದೇ ಒಂದು ಕಿತ್ತೀಳೆಹಣ್ಣನ್ನಾದರೂ ಕೈಯಲ್ಲಿ ಮುಟ್ಟಿದುದಿಲ್ಲ. ಈಗ ನೀವೇತಕ್ಕೆ ಹೀಗೆ ಮಾಡಿದಿರಿ?'

ಕಾಶಿಗೆ ಹೋದವರಲ್ಲಿ ಕೆಲವರು ತಮಗೆ ಇಷ್ಟವಾದ ಪದಾರ್ಥಗಳನ್ನು ತಿನ್ನುವುದಿಲ್ಲವೆಂದು ಪ್ರತಿಜ್ಞೆಮಾಡಿ, ಅವುಗಳನ್ನು ತ್ಯಾಗ

ಮಾಡುವುದುಂಟು. ಇವನೇನಾದರೂ ಆ ತರಗತಿಗೆ ಸೇರಿದವನೋ ಎಂಬ ಅನುಮಾನದಿಂದ—'ನೀವು ಕಾಶಿಗೆ ಹೋದುದುಂಟೆ?'— ಎಂದೆನು.

'ಹೋಗಿದ್ದೇನೆ.'

'ಕಿತ್ತೀಳೆಹಣ್ಣನ್ನು ಕಾಶಿಯಲ್ಲಿ ಬಿಟ್ಟಿರುವಿರಾ?'

'ಇಲ್ಲ.'

'ಹಾಗಾದರೆ, ಮತ್ತೇಕೆ ಅದನ್ನು ನಿಷೇಧಿಸುವಿರಿ? ಅದೇನು ವಿಷವೆ?'

'**ನಿಮಗೆ** ವಿಷವಲ್ಲದಿದ್ದರೂ, **ನನಗೆ** ವಿಷ! ಒಬ್ಬನ ಅನ್ನವು ಇನ್ನೊಬ್ಬನಿಗೆ ವಿಷವೆಂಬುದನ್ನು ನೀವು ಕೇಳಿಲ್ಲವೆ?'

'ಕಿತ್ತೀಳೆಯನ್ನು ತಿನ್ನುವುದಿಲ್ಲವೆಂದು ನೀವೇಕೆ ನನ್ನೊಡನೆ ಹೇಳಲಿಲ್ಲ?'

'ನಾನು ಹೇಳಬೇಕಿತ್ತೇನು? ಕಿತ್ತೀಳೆಯ ಪಾಕವೆಂದು ತಿಳುಹುವುದಕ್ಕೆ ನಿನಗೆ ಆಗ ನಾಲಗೆ ಬಿದ್ದಿದ್ದಿತೇನೋ?'

ನನಗೆ ರೇಗಿತು.—'ಮರ್ಯಾದೆಯ ಮೇರೆಯನ್ನು ಮೀರುವ ಹಾಗಿದೆ!'— ಎಂದೆನು.

'ನಡೆನಡೆ! ನಿನ್ನಂತಹ ಕಲ್ಕತ್ತಾ ಬಾಬುಗಳನ್ನು ನಾನೆಷ್ಟೋ ನೋಡಿದ್ದೇನೆ! 'ಮರ್ಯಾದೆಯ ಮೇರೆಯನ್ನು ಮೀರುವುದಂತೆ!' ಮರ್ಯಾದೆಯ ನಡತೆಯನ್ನು ನೀನು ನನಗೆ ಕಲಿಸಬೇಕಲ್ಲವೆ? ಮುಳ್ಳು ಚೂರಿಯನ್ನು ಹಿಡಿದ ಮಾತ್ರಕ್ಕೆ ದೊಡ್ಡವನಾಗಿ ಹೋದೆ? ಚೆನ್ನಾಯಿತು! ಅನಾಥನೊಬ್ಬನಿಗೆ ಏನೇನನ್ನೋ ತಿನ್ನಿಸುವುದಿದು ಮರ್ಯಾದೆಯ ಮಾತು!'

'ನೀನು ಉಪವಾಸವಿದ್ದೆ; ಅದರಿಂದ, ನನ್ನಲ್ಲಿದ್ದುದನ್ನು ನಾನು ನಿನಗೆ ಕೊಟ್ಟರೆ, ಪ್ರತಿಯಾಗಿ ಇದೇ ನನಗೆ ಉಡುಗೊರೆಯಲ್ಲವೆ?'

'ಉಪವಾಸವಿದ್ದೆ ಉಪವಾಸ! ಉಪವಾಸವಿದ್ದಾಗಲೆಲ್ಲ ನೀನೇ ಅಲ್ಲವೆ ನನಗೆ ಅನ್ನ ಕೊಟ್ಟು ಸಾಕಿದುದು?'

'ಹಾಗಾದರೆ, ತಪ್ಪು ನನ್ನದು!'

'ಯಾರದೋ? ಅನ್ನ ಹಾಕೆಂದು ನಾನೇನು ನಿನ್ನ ಕೈ ಕಾಲುಕಟ್ಟಿ ಕೊಂಡೆನೋ?'

'ಏನಾದರೂ ಹೇಳಿಕೋ!'—ಎಂದು ನಾನು ಶಾಲನ್ನು ಹೊದೆದು ಕೊಂಡು, ಕಾಲುಮಣೆಯ ಮೇಲೆ ಮಲಗಿಬಿಟ್ಟೆನು.

ಮದನಬಾಬು ತಡೆಯಿಲ್ಲದೆ ಬೇಕಾದಷ್ಟು ಬೈದನು. ಕ್ರಮಶಃ ಅವನ ದನಿ ಕುಗ್ಗುತ್ತ ಬಂದಿತು. ಒಡೆದುಹೋದ ಆ ಮಡಕೆಯ ನೆನಪು ಮುದುಕನ ಮನಸ್ಸಿನಲ್ಲಿ ಆಗ ಪುನಃ ಉಂಟಾಯಿತು.—'ನನ್ನ ಹೊಟ್ಟೆ! ಹಂಡಿ! ಎರಡು ರೂಪಾಯಿ—ಕಳ್ಳ! ಒಡೆದು ಹಾಕಿದ!—ಇದ್ದಿದ್ದರೆ, ಇಷ್ಟೆಲ್ಲ ಆಗುತ್ತಿದ್ದಿತೆ?'-ಎಂದುಕೊಂಡನು. ಅವನ ತಲೆಯಲ್ಲಿ ಎಲ್ಲಿಯೋ ಒಂದು ಕೀಲು ಜಾರಿರಬೇಕೆಂದು ನಾನು ಭಾವಿಸಿದೆನು. ಹಾಗೆಯೆ ಬಹಳ ಹೊತ್ತು 'ಸಹಸ್ರನಾಮ' ಮಾಡುತ್ತಿದ್ದು, ಕೊನೆಗೆ ಶಾಂತನಾದನು; ಆ ಮೇಲೆ ಹುಕ್ಕೆಯನ್ನು ಹಿಡಿದು ತಂಬಾಖೂ ಸೇವೆಗೆ ಪ್ರಾರಂಭಿಸಿದನೆಂದು ಶಬ್ದಗಳಿಂದ ತಿಳಿದುಕೊಂಡೆನು. ಶಾಲನ್ನು ಮುಸುಕಿಕ್ಕಿಕೊಂಡು, ನಿದ್ರಿಸಲು ಪ್ರಯತ್ನಪಟ್ಟೆನು. ನಿದ್ರಾದೇವಿಗೂ, ಅವನ ಹಾಗೆಯೇ ಕೋಪವೇನೋ!-ಎಷ್ಟು ಕರೆದರೂ, ನನ್ನ ಬಳಿಗೆ ಬರಲೇ ಇಲ್ಲ. ಅವನಾದರೋ, ಸ್ವೇಚ್ಛೆಯಾಗಿ ಧೂಮಪಾನ ಮಾಡುತ್ತಿದ್ದನು.

ಟ್ರೈಯಿನು ಅಸನ್‌ಸೋಲಿಗೆ ಬಂದಿತು. ತಲೆಯನ್ನು ಹೊರಗೆ ಹಾಕಿ,—'ಪೋರ್ಟರ್' ಗಂಟೆಯೆಷ್ಟು?' ಎಂದು ಮದನಬಾಬು ಕೇಳಿದನು.

'ಎರಡೂವರೆ!'

'ಮದನಪುರಕ್ಕೆ ಎಷ್ಟು ಹೊತ್ತಿಗೆ ಹೋಗುವುದು'?

'ಮೂರು ಗಂಟೆಗೆ.'

'ನನ್ನ ಮೇಲೆ ಇವನಿಗೆ ತುಂಬ ಕೋಪ ಬಂದಿದೆ. ನಾನಿಲ್ಲಿಂದ ಹೋಗುವ ವರೆಗೆ,—ಈ ಪಾಪಿ ಸಹವಾಸವು ತೊಲಗುವ ಪರ್ಯಂತ,—ಸುಖವಿಲ್ಲ!'—ಎಂದು ನಾನು ಯೋಚಿಸಿದೆನು.

ಬಂಡಿ ಹೊರಟಿತು. ಸ್ವಲ್ಪ ಹೊತ್ತಿನ ಮೇಲೆ, ಯಾರೋ ನನ್ನನ್ನು ಮುಟ್ಟಿದ ಹಾಗಾಯಿತು.—'ಮಹದಾನಂದ ಬಾಬೂ! ಏಳು!'

ನನ್ನ ಹೆಸರು ಬೇರೆಯಾಗಿದ್ದುದರಿಂದ ನಾನು ಲಕ್ಷ್ಯಕೊಡಲಿಲ್ಲ.

'ಭ್ರಾತೃವೆ! ಏಳು! ಮದನಪುರಕ್ಕೆ ಹತ್ತಿರವಾಗುತ್ತಿದ್ದೇವೆ.—ಏಳು! ಏಳು!'

ನಾನು ಶಾಲನ್ನು ತೆಗೆದೆಸೆದೆನು. ಮುದುಕನು ಕೇಳಿದನು:—'ಭ್ರಾತೃವೆ! ಕೋಪವೇನು?'

ನಾನು ಎದ್ದು ಕುಳಿತೆನು. ವಿರಕ್ತನಂತೆ,—'ಕೋಪವೆಲ್ಲವನ್ನೂ ನೀನೇ ಕ್ರಯಕ್ಕೆ ತೆಗೆದುಕೊಂಡಿರುವೆಯೇನು?'

ಮೃದುವಾಗಿ ನನ್ನ ಬೆನ್ನನ್ನು ತಟ್ಟುತ್ತ, ಮುದುಕನು ಹೇಳಿದನು:—'ಅಣ್ಣ! ಕೋಪಿಸಬೇಡ. ನಾನು ಮುದುಕ. ಎರಡು ಮಾತುಗಳನ್ನು ಆಡಿದರೆ ಸಾಕು; ಜಗಳಕ್ಕೆ ಮೊದಲಾಗುವುದು. ಬಹಳ ಮುಂಗೋಪಿ;—ತಪ್ಪೆಲ್ಲ ನಿನ್ನದೇ ಎಂದು ತಿಳಿದಿದ್ದೆನು. ನನ್ನನ್ನು ಕ್ಷಮಿಸು!'

ಇದೇ ಅವನ ಸ್ವಭಾವವಾಗಿರಬಹುದೆಂದು ಆಗ ತಿಳಿದುಕೊಂಡೆನು. 'ತಪ್ಪೆಲ್ಲ ನಿನ್ನದೇ' ಎಂಬ ಮಾತಿನಿಂದ, ಸಂಪೂರ್ಣವಾಗಿ ನಾನು ಅಪರಾಧಿಯಲ್ಲವೆಂದಾದರೂ, ಕೆಲವು ಮಟ್ಟಿನ ಅಪರಾಧವು ನನ್ನದೆಂದೇ ಸ್ಪಷ್ಟವಾಗುತ್ತಿದ್ದಿತು. ಆದರೆ, ಆ ಮುದುಕನ ದನಿ ಮೃದುವಾಗಿಯೂ ವ್ಯಸನಕರವಾಗಿಯೂ ಇದ್ದುದರಿಂದ, ಅವನ ಮೇಲಿದ್ದ ಮೊದಲಿನ ಕೋಪವು ಶಾಂತವಾಯಿತು; ಸಮಾಧಾನವಾಯಿತೆಂದು ಸೂಚಿಸಲು ನಾನು ಸ್ವಲ್ಪ ನಕ್ಕೆನು. ಅವನು ಹೇಳಿದನು:—'ಕಿತ್ತಿಳೆ ಹಣ್ಣುಗಳನ್ನು

ನಾನು ಏತಕ್ಕೆ ತಿನ್ನುವುದಿಲ್ಲವೆಂಬುದನ್ನು ನೀನು ತಿಳಿದುದೇ ಆದರೆ, ನಿನಗೆ ನನ್ನ ಮೇಲಣ ಕೋಪವು ಶಾಂತವಾಗುವುದರಲ್ಲಿ ಸಂದೇಹವೇ ಇಲ್ಲ!'

ಮದನಬಾಬುವಿನ ಕಣ್ಣುಗಳಲ್ಲಿ ನೀರು ಬರುವ ಹಾಗಿದ್ದಿತು' ಸ್ವಲ್ಪ ಹೊತ್ತಿನ ಮೇಲೆ, ಮೆಲ್ಲಸ್ವರದಿಂದ—'ಕೇಳುವೆಯಾ?' ಎಂದನು.

'ನಾನೊಬ್ಬನನ್ನು ಕೊಂದು ಈಗ ಇಪ್ಪತ್ತು ವರ್ಷಗಳಾಯಿತು!.

ನಾನು ನಡುಗಿದೆನು.—'ಒಬ್ಬನನ್ನು ಕೊಂದುದು?'

'ಅಹುದು; ಕೊಂದೇ ಹಾಕಿದುದು. ನಿಜವಾದ ಪ್ರಾಣಹತ್ಯೆಯನ್ನೇ ಮಾಡಿದುದು. ಅದಕ್ಕೇ ಕೊಲೆಯೆಂದು ಹೆಸರು.—ಕೇಳು! ಇಪ್ಪತ್ತು ವರ್ಷಗಳ ಹಿಂದೆ, ಡಿಸೆಂಬರು ತಿಂಗಳಲ್ಲಿ, ನನ್ನ ಹಿರಿಮಗಳ ಮದುವೆಗಾಗಿ ಕೆಲವು ಪದಾರ್ಥಗಳನ್ನು ಕೊಂಡುಕೊಳ್ಳಲು ಕಲ್ಕತ್ತೆಗೆ ಹೋಗಿದ್ದೆನು. ಅಲ್ಲಿ ನಾನು ವಿದ್ಯಾರ್ಥಿಗಳ ಭೋಜನಾಲಯದಲ್ಲಿ ಉಳಿದುಕೊಂಡೆನು. ಎಲ್ಲ ಕೊಟಡಿಗಳಲ್ಲಿಯೂ ವಿದ್ಯಾರ್ಥಿಗಳು ತುಂಬಿ ಹೋಗಿದ್ದರು. ಒಂದು ಕೊಟಡಿಯಲ್ಲಿ ಮಾತ್ರ, ಜ್ವರದಿಂದ ನರಳುತಿದ್ದ ಒಬ್ಬ ಹುಡುಗನೂ ಅವನ ಮೈದುನನೂ ಇದ್ದರು. ಬಾವನ ಹೆಸರು ಕೇದಾರ; ಮೈದುನನ ಹೆಸರು ಪ್ರಭಾತಕುಮಾರ. ಕೇದಾರನು ಪೂರ್ವ ಬಂಗಾಳಕ್ಕೆ ಸೇರಿದವನು; ವಯಸ್ಸು ಸುಮಾರು ಇಪ್ಪತ್ತು;—ಪ್ರಭಾತ ಕುಮಾರನು ಎರಡು-ಮೂರು ವರ್ಷಗಳಿಗೆ ಚಿಕ್ಕವನು. ಪ್ರಭಾತನು ತನ್ನ ಅಭ್ಯಾಸವನ್ನೆಲ್ಲ ಅಲಕ್ಷ್ಯಮಾಡಿ, ಬಾವನಿಗೆ ಔಷಧಪಥ್ಯಗಳನ್ನು ಮಾಡುವುದರಲ್ಲಿಯೇ ಮಗ್ನನಾಗಿಹೋಗಿದ್ದನು. ಗಂಟೆ ಗಂಟೆಗೂ ಔಷಧವನ್ನು ಕೊಡುತ್ತ, ನಾಡಿಯನ್ನು ನೋಡುತ್ತ ತಲೆ-ಕೈಕಾಲುಗಳನ್ನು ಮುಟ್ಟಿ ಪರೀಕ್ಷಿಸುತ್ತ, ರಾತ್ರಿ-ಹಗಲು ಅವನನ್ನೇ ಕಾದುಕೊಂಡಿದ್ದನು. ಕೆಲವು ದಿನಗಳ ವರೆಗೆ ರೋಗಿಗೆ ವಿಶ್ರಾಂತಿಯಿರಲಿಲ್ಲ. ಆ ಮೇಲೆ ಸ್ವಲ್ಪ ಗುಣಮುಖವಾಯಿತು; ಜ್ವರವು ತೋರಿಕೆಗೆ ಕಡಿಮೆಯಾಗಿದ್ದಿತು. ಒಂದು ದಿನ ಸಾಯಂಕಾಲ ನಾನು ಊರಿಗೆ ಹೊರಡಬೇಕೆಂದಿದ್ದವನು, ಅಂದು

ಬೆಳಿಗ್ಗೆ 'ಬಜಾರಿ'ಗೆ ಹೋಗಿ, ನೂರು ಕಿತ್ತೀಳೆಹಣ್ಣುಗಳನ್ನು ಕೊಂಡು ಕೊಂಡೆನು. ಪ್ರಭಾತನಿಗೆ ಹೇಳಿದೆನು:—'ಕೇದಾರನು ಮಲಗಿರುವುದರಿಂದ, ಕಿತ್ತೀಳೆಹಣ್ಣುಗಳನ್ನು ಈ ಕೊಟಡಿಯಲ್ಲಿಡುವುದು ಬೇಡ'–ಎಂದು! ಆದರೆ ಅವನು ಕೇಳಬೇಕೆ? 'ಅದರಿಂದೇನು? ಎಲ್ಲಿಯಾದರೂ ಒಂದು ಮೂಲೆ ಯಲ್ಲಿ ಇಟ್ಟುಬಿಡುವ!'–ಎಂದುಬಿಟ್ಟನು. ನಾನವುಗಳನ್ನು ಮೂಲೆಯಲ್ಲಿಟ್ಟು ಪುನಃ ಹೊರಗೆ ಹೋದೆನು. ಪ್ರಭಾತನೂ ಬಾವನಿಗೆ ಗುಣಮುಖವಿರು ವುದನ್ನು ಕಂಡು, ಭಯವಿಲ್ಲವೆಂದು ನಿಶ್ಚಯಿಸಿದವನಾಗಿ, ಕಾಲೇಜಿಗೆ ನಡೆದುಬಿಟ್ಟನು. ಹಿಂದಿರುಗಿ ಬಂದು ನೋಡಿದಾಗ,—ಅಯ್ಯೋ! ಸರ್ವ ನಾಶವಾಗಿದೆ! ಕೊಟಡಿಯಲ್ಲಿ ಒಬ್ಬನೇ ಒಬ್ಬನಾಗಿ, ತಿಂಡಿಯ ಆಶೆ ಯನ್ನು ನಿಗ್ರಹಿಸಲಾರದೆ ಕೇದಾರನು ಕೆಲವು ಹಣ್ಣುಗಳನ್ನು ತಿಂದು ಬಿಟ್ಟು, ಭಯಂಕರಜ್ವರದಿಂದ ನೈಮುರೆತಿದ್ದನು. ನಾನು ಪ್ರಯಾಣ ವನ್ನು ನಿಲ್ಲಿಸಿ, ಹುಡುಗನನ್ನು ಕಾದುಕುಳಿತೆನು. ಮಗಳ ಮದುವೆಗೆಂ ದಿಟ್ಟಿದ್ದ ರೂಪಾಯಿಗಳನ್ನೆಲ್ಲ ವೆಚ್ಚಮಾಡಿ, ಹೆಸರುವಾಸಿಗಳಾದ 'ಡಾಕ್ಟರು'ಗಳಿಂದ ಔಷಧಕೊಡಿಸಿದೆನು. ಅನ್ನವಿಲ್ಲದೆ, ನಿದ್ರೆಯಿಲ್ಲದೆ, ಏಕಪ್ರಕಾರ ಮೂರು ರಾತ್ರಿ ಮೂರು ಹಗಲು ರೋಗಿಯನ್ನು ನೋಡಿ ಕೊಂಡಿದ್ದೆನು. ಆದರೆ ಯಾವುದರಿಂದಲೂ ಫಲವಾಗದೆಹೋಯಿತು; ನಾವವನನ್ನು ಉಳಿಸಲಾರದೆ ಹೋದೆವು!'—ಮುದುಕನು ಸುಮ್ಮ ನಾದನು.

ದುಃಖಕರವಾದ ಕಥೆಯನ್ನು ಕೇಳುತ್ತ, ಕಲ್ಲುಬೊಂಬೆಯಂತೆ ಕುಳಿತಿದ್ದೆನು. ಹೊರಗೆ, ಕಣ್ಣುಕಾಣದ ಕತ್ತಲು.—'ಟ್ರೇಯಿನು' ವೇಗ ವಾಗಿ ಓಡುತ್ತಿದ್ದಿತು. ಮೇಲಿದ್ದ ದೀಪವು ನಂದುವುದಕ್ಕಾಗಿದ್ದಿತು! ಬತ್ತಿಯ ಮೇಲ್ಗಡೆ, ಕರಿ ಹಿಡಿದುಹೋಗಿದ್ದಿತು. ಆ ಅಪರರಾತ್ರಿಯಲ್ಲಿ ನಾವಿಬ್ಬರೇ ಇಬ್ಬರು;—ಒಂದು ಕೋಣೆಯಲ್ಲಿ ಮಾತಿಲ್ಲದೆ ಕುಳಿತಿದ್ದೆವು.

ನಿಶ್ವಾಸವನ್ನು ಬಿಟ್ಟು, ನಾನು ಕೇಳಿದೆನು:—'ಇದರಲ್ಲಿ ನೀನು ಹೇಗೆ ದೂಷಣೆಗೆ ಪಾತ್ರನು? ನೀನು ಇದನ್ನು ಮನಃಪೂರ್ವಕವಾಗಿ

ಮಾಡಿದುದಿಲ್ಲ. ಮತ್ತೂ, ಅವನ ಮೈದುನನನ್ನೂ ಕೇಳಿರುವುದರಿಂದ, ನಿನಗೇನು ದೋಷ?'

'ಅವನ ಮೈದುನ—ಪಾಪ! ಹುಡುಗ. ನಾನವನಿಗೆ ತಂದೆಯು ಹಾಗಿದ್ದೆನು. ಅವನೊಂದು ತಪ್ಪನ್ನು ಮಾಡಿದರೆ ತಿದ್ದುವ ಭಾರವು ನನ್ನದು.'

'ಅದೊಂದು ವ್ಯಸನಕರವಾದ ವಿಷಯುವೇನೋ ನಿಜ. ಆದರೆ, ನಿನ್ನನ್ನೇ ನೀನು ಇಷ್ಟು ದೂಷಿಸಿಕೊಳ್ಳುವುದು ಕೇವಲ ತಪ್ಪು. ಪಾಪವೆಂಬುದನ್ನು ಪ್ರತಿಫಲಗಳಿಂದಲ್ಲ ಅಳೆದುನೋಡುವುದು;—ಮಾಡತಕ್ಕವನ ಮನೋಭಾವದಿಂದ.'

'ಈ ಸಮಾಧಾನದಿಂದ ನನಗೆ ಶಾಂತಿಯುಂಟಾಗದು. ಅದಕ್ಕೆ ನಾನೇ ಉತ್ತರವಾದಿ. ಅಂದು ಪ್ರಭಾತನ ದುಃಖವನ್ನು ಕಂಡಿದ್ದರೆ, ಏನೆನ್ನುತ್ತಿದ್ದೆಯೋ! ಅವನಿಗೆ ಐವರು ಸಹೋದರರೂ, ಒಬ್ಬ ತಂಗಿಯೂ ಇದ್ದರಂತೆ. ಆ ಒಬ್ಬಳೇ ಹೆಣ್ಣುಮಗಳು, ಅಷ್ಟೊಂದು ಪ್ರೇಮಕ್ಕೆ ಪಾತ್ರಳಾದವಳು, ಹದಿಮೂರೇ ವರ್ಷದವಳು,—ಈ ದುರವಸ್ಥೆಗೆ ಬಲಿಯಾಗಿ ಮನೆಯಲ್ಲಿ ಕುಳಿತುಕೊಳ್ಳುವಾಗ ಎಷ್ಟೊಂದು ವ್ಯಸನವಾಗದು? ನನ್ನ ಮಗಳಿಗೆ ಆಗ ಹದಿಮೂರು ವರ್ಷ. ಮನೆಗೆ ಹೋಗಿ, ಅವಳಿಗೆ ಮದಿವೆಯನ್ನೇನೋ ಮಾಡಿದೆನು; ಆದರೆ ಅವಳ ಮುಖವನ್ನು ನೋಡಲಾರದೆ ಹೋದೆನು. ನಾನವಳನ್ನು ನೋಡಬೇಕೆಂದಿರುವಾಗಲೆಲ್ಲ ಆ ಇನ್ನೊಂದು ಕನ್ನಿಕೆ,—ಯಾರ ಸುಖಜೀವನವನ್ನು ನಾನು ನಿರ್ಮೂಲ ಮಾಡಿದ್ದೇನೋ,—ಆ ಕನ್ನಿಕೆಯು ಜ್ಞಾಪಕವುಂಟಾಗಿ, ಮನಸ್ಸಿನಲ್ಲಿ ಚಿಂತೆಯೆಂಬ ಮೇಘಗಳು ಬಂದು ತುಂಬುತ್ತಿದ್ದುವು.'

ಟ್ರೈಯಿನಿನ ವೇಗವು ಕಡಮೆಯಾಗುತ್ತಿದ್ದಿತು. ಮದನಪುರವೂ ಹತ್ತಿರವಾಗಿದ್ದಿತು. ಮುದುಕನಿಗೆ ಇನ್ನು ಯಾವ ಸಮಾಧಾನವನ್ನು ತಾನೇ ಹೇಳಬಲ್ಲೆನು? 'ಮದನಗೋಪಾಲ ಬಾಬು! ನಿನ್ನನ್ನು ದೂಷಿಸಿಕೊಳ್ಳುವುದು ವ್ಯರ್ಥ. ಜೀವನ–ಮರಣವೆಂಬುದು ದೇವರ ಕೈಯಲ್ಲಿರುವ ಮಾತು. ಮನುಷ್ಯನಿಗೆ ಅದರಲ್ಲಿ ಏನೂ ಅಧಿಕಾರವಿಲ್ಲ. ನಮ್ಮ ಶಾಸ್ತ್ರ

ಗಳಲ್ಲಿ ಹೇಳಿರುವ ಈ ದಿವ್ಯೋಕ್ತಿಯನ್ನು ನೀವು ನಂಬುವುದಿಲ್ಲವೆ?'— ಎಂದೆನು.

ಅವನು ಉತ್ತರಕೊಡಲಿಲ್ಲ. ಕಣ್ಣುಗಳು ಒದ್ದೆಯಾಗಿದ್ದುವು.

ಬಂಡಿ ನಿಂತಿತು. ನಿದ್ರೆಯಿಂದ ತೂಕಡಿಸುತ್ತಿದ್ದ ಪೋರ್ಟರೊಬ್ಬನು 'ಮದನಪುರ'ವೆಂದು ಮೆಲ್ಲನೆ ಕೂಗಿದನು. ನಾನು ಬಾಬುವಿಗೆ ವಂದಿಸಿ, ಕೆಳಗಿಳಿದೆನು.—'ವಿಷವನ್ನು ತಿಂದಿದ್ದೇನೆ. ಬದುಕಿದ್ದರೆ, ಇನ್ನೊಮ್ಮೆ ನೋಡುತ್ತೇನೆ!'—ಎಂದು ಮದನ ಬಾಬು ಹೇಳಿಕೊಂಡನು.

H B. RAO.

# ನವೀನ ಭರತಖಂಡ.

[ವಿದ್ಯಾವಂತರಾದ ದಂಪತಿಗಳು.]

**ಗಂಡ:**—(ಕೈಯಲ್ಲಿ ಪುಸ್ತಕಗಳನ್ನು ಹಿಡಿದುಕೊಂಡು, ಹೊರಗೆ ಹೊರಡುತ್ತಿರುವ ಹೆಂಡತಿಯನ್ನು ಕುರಿತು)—'ಇದೇನೇ! ಇದು? ಬೆಳಗ್ಗೆ ಎದ್ದೊಡನೆ ಪುಸ್ತಕಗಳನ್ನು ಹಿಡಿದುಕೊಂಡು ಹೊರಟಿರುವೆ?'

**ಹೆಂಡತಿ:**—(ಗಂಡನನ್ನು ದುರದುರನೆ ನೋಡುತ್ತ,)—'ಓಹೊ! ಇದೇನು? ಹೀಗೆ ಕೇಳುತ್ತೀರಿ? ನೀವು ಬಿ. ಏ. ಪ್ಯಾಸ್ ಮಾಡಿದುದು ವ್ಯರ್ಥವಾಯಿತು! ಸ್ವಲ್ಪವಾದರೂ, ಎಟಿಕೆಟ್ (etiquette=ಮರ್ಯಾದೆ)ನ್ನು ಕಲಿಯಬಾರದೆ?'

**ಗಂಡ:**—(ಆಶ್ಚರ್ಯದಿಂದ, ತನ್ನಲ್ಲಿ)—'ಇದೇನು ಬಂದಿತು, ಗ್ರಹಚಾರ? ಹೆಂಡತಿಯ ಕೈಯಲ್ಲಿ ಮರ್ಯಾದೆಯನ್ನು ಗಂಡನು ಕಲಿತುಕೊಳ್ಳಬೇಕಾಯಿತು! ಈ ಕಲಿಗಾಲದಲ್ಲಿ ಇನ್ನೇನಾಗುವುದೋ—ನೋಡಬೇಕು!'—(ಎಂದುಕೊಂಡು, ಹೆಂಡತಿಯೊಡನೆ,) 'ಅದೇನೆ? ನಾನು ಮರ್ಯಾದೆಗೆ ವಿರೋಧವಾಗಿ ನಡೆದುದು?'

**ಹೆಂಡತಿ:**—(ಸಿಟ್ಟಿನಿಂದ)—'ಹೆಂಡತಿಯೆಂದರೆ, ಕರುವನ್ನು ಕಟ್ಟುವ ಗೂಟಕ್ಕಿಂತ ಕಡೆಯೆಂದು ನೀವು ತಿಳಿದಿದ್ದೀರಿ! 'ಏನೆ?'—'ಬಾರೆ!'—'ಹೋಗೆ!' ಅಂತೆ! ಈ ಮಾತುಗಳನ್ನು ನಿಮ್ಮ ಮನೆಯ ತೊತ್ತಾದವಳೂ ಕೂಡ ತಡೆಯಲಾರಳು!—ತಿಳಿಯಿತೆ?'

**ಗಂಡ:**—'ಆಹಾ!' ತಿಳಿಯಿತು! ಚೆನ್ನಾಗಿಯೇ ತಿಳಿಯಿತು!'

**ಹೆಂಡತಿ:**—'ನಿಮ್ಮ ಮರ್ಯಾದೆಯು ಉಳಿಯಬೇಕೆಂದು ನಿಮಗಿಷ್ಟವಿದ್ದರೆ, ಇತರರಿಗೂ ನೀವು ಮರ್ಯಾದೆಯನ್ನು ಕೊಡಬೇಕು. ಇನ್ನು ಮೇಲೆ, ನೀವು ನನ್ನನ್ನು, ದಾಸಿಯ ಹಾಗೆ, ಕೂಗಿದರೆ, ಖಂಡಿತವಾಗಿಯೂ ನಾನು ಮಾತಾಡಲಾರೆನು!'

**ಗಂಡ:**—'ಸರಿಸರಿ! ಆದರೆ, ಇಷ್ಟು ದಿನವೂ ನಿನಗೆ—(ಹಾಹಾ! ಮರಿತೆ—ಮರೆತೆ!)—ನಿಮಗೆ ಈ ನೂತನಾಭಿಪ್ರಾಯವು ಮನಸ್ಸಿಗೆ ಹೊಳೆಯದೆ, ಈ ದಿನ ಮಾತ್ರ ಅಕಸ್ಮಾತ್ತಾಗಿ ಉಂಟಾದುದು ಹೇಗೆ?'

**ಹೆಂಡತಿ:**—'ಈ ಅಭಿಪ್ರಾಯವು ಅಕಸ್ಮಾತ್ತಾಗಿ ಉಂಟಾದುದೇನೂ ಅಲ್ಲ!—ನಿಮ್ಮ ಕುಚೋದ್ಯಗಳಿಗೆ ನಾನೇನೂ ಹೆದರುವೆನೆಂದು ಮಾತ್ರ ತಿಳಿಯಬೇಡಿ.—ಈಗ ನೋಡಿ! ಇಂಗ್ಲಿಷಿನವರನ್ನು! ಅವರು ತಮ್ಮ ಪತ್ನಿಯನ್ನು 'ಬೆಟರ್ ಹಾಫ್' (Better Half = ಉತ್ತಮಾರ್ಧ) ಎಂದು ಕರೆಯುವರಲ್ಲದೆ, ಅವರನ್ನೆಷ್ಟು ಮರ್ಯಾದೆಯಿಂದ ಕಾಣುತ್ತಿದ್ದಾರೆ? ಸ್ತ್ರೀಸಾಮಾನ್ಯಕ್ಕೆ ಅವರಲ್ಲೆಷ್ಟು ಗೌರವವುಂಟು? ಬೀದಿಯಲ್ಲಿ ಹೋಗುತ್ತಿರುವ ಯಾವ 'ಯೂರೋಪೀಯನ'ನೇ ಆಗಲಿ,—ಯಾರಾದರೊಬ್ಬ 'ಲೇಡಿ'ಯನ್ನು ನೋಡಿದೊಡನೆಯೆ, ಟೋಪಿಯನ್ನೆತ್ತಿ, ಅವಳಿಗೆ 'ಸಲಾಂ' ಮಾಡುತ್ತಾನೆ! ಅವಳೊಡನೆ ಬಹಳ ವಿನಯದಿಂದ ಮಾತನಾಡುತ್ತಾನೆ! ನಮ್ಮ ಜನರಲ್ಲಾದರೋ,—ಹೆಂಡತಿಯನ್ನು ಬಯ್ಯದಿದ್ದರೆ, ಅದೇ ಒಂದು ದೊಡ್ಡ ಮರ್ಯಾದೆ! ಹೀಗಿರುವುದನ್ನು ಕಣ್ಣಾರ ಕಂಡು,—ಇಂಗ್ಲೆಂಡು ಮುಂತಾದ ಇತರ ದೇಶಗಳಲ್ಲಿ, ಸ್ವಾತಂತ್ರ್ಯವನ್ನು ಪಡೆಯುವುದಕ್ಕಾಗಿ, ಹೆಂಗಸರು ಏನೇನು ಮಾಡುತ್ತಿದ್ದಾರೆಂಬುದನ್ನು, ವೃತ್ತಾಂತ

ಪತ್ರಿಕೆಗಳಲ್ಲಿ ಓದಿ,—ತಿಳಿದುಕೊಂಡುದರ ಮೇಲೆ, ನಮ್ಮ ದೇಶದ ಹೆಂಗಸರಲ್ಲಿಯೂ, ಜ್ಞಾನದ ಬೆಳಕು, ಕೊಂಚ ಮಟ್ಟಿಗೆ, ಈಗ ತಲೆ ದೋರಲು ಪ್ರಾರಂಭವಾಗಿದೆಯೆನ್ನಬಹುದು. ನೀವು ನನ್ನ ವಿಷಯದಲ್ಲಿ ಕೇವಲ ದಯಾಪರರಾಗಿಯೂ, ಅನಾದೃಶ್ಯವಾದ ಪ್ರೀತಿಯುಳ್ಳವರಾಗಿಯೂ ಇದ್ದು, ನನ್ನ ವಿದ್ಯಾಭ್ಯಾಸವನ್ನು ವಿಶೇಷವಾದ ಆಸಕ್ತಿಯಿಂದ ನೆರವೇರಿಸಿದುದಕ್ಕೆ, ನಾನು ತುಂಬ ಕೃತಜ್ಞಳಾಗಿದ್ದೇನೆ. ಈ ಭಾಗದಲ್ಲಿ ನಾನು ನನ್ನ ಇತರ ಸಹೋದರಿಯರಿಗಿಂತ ಭಾಗ್ಯಶಾಲಿನಿಯೇ ಸರಿ! ಆದರೆ, ನೀವು ನನ್ನೊಡನೆ ಮಾತನಾಡುವುದರಲ್ಲಿ, ಹಳೆಯ ಮಾರ್ಗವನ್ನು ಮಾತ್ರ ಇನ್ನೂ ಬಿಟ್ಟಿಲ್ಲ!! ಇದು ನಿಮ್ಮ ತಪ್ಪೆಂದು ನಾನು ಗ್ರಹಿಸುವುದಿಲ್ಲ. ಸಾಮಾನ್ಯವಾಗಿ, ಗಂಡಸರು ಹೆಂಗಸರನ್ನು ತಮ್ಮ ಸರಿಸಮಾನನಾಗಿ ಎಣಿಸುವುದಕ್ಕೆ ಇಷ್ಟಪಡದಿರುವುದು ಕೇವಲ ಸ್ವಾಭಾವಿಕವಾಗಿದೆ. ಅಂತಹ ಸಾಮಾನ್ಯವಿಧಿಗೆ, ನೀವಾದರೂ, ನಿಷೇಧಕರಾಗಿರಬೇಕೆಂಬುದು ನನ್ನಭಿಲಾಷೆ! ಈ ವಿಷಯವನ್ನು ನಿಮ್ಮಲ್ಲಿ ಪ್ರಸ್ತಾಪಿಸಬೇಕೆಂದು, ಅನೇಕ ದಿನಗಳಿಂದಲೂ ಕಾದುಕೊಂಡಿದ್ದೆನು. ಆದರೆ, ಯಾವಾಗ ಮಾತನಾಡಬೇಕೆಂದು ಮಾಡಿದರೂ, ನನ್ನ ಬಾಯಿ ಕಟ್ಟಿಹೋಗುತ್ತಿದ್ದಿತು! ಅದನ್ನು ಈ ದಿನ, ಧೈರ್ಯ ಮಾಡಿ, ಹೇಳಿಬಿಟ್ಟೆನು!'

**ಗಂಡ:**—'ಭಲೇ! ಭೇಷ್! ಶಹಬಾಸ್! ನಿನ್ನ ಉಪನ್ಯಾಸವು ಚೆನ್ನಾಗಿದೆ! ಹಾಗೆ, ಮನಸ್ಸಿನಲ್ಲಿದ್ದುದನ್ನು ಬಿಡಿಸಿ ಹೇಳಿದರೆ, ನನಗೂ ಪರಮಸಂತೋಷ!!—ಅದಿರಲಿ! ನೀನೀಗ ಹೊರಟುದೆಲ್ಲಿಗೆ?'

**ಹೆಂಡತಿ:**—'ಬೆಳಗಿನ ಹೊತ್ತು;-ಸ್ವಲ್ಪ ದೂರ 'ವಾಕ್' (walk) ಹೋಗಿ ಬರುತ್ತೇನೆ.'

**ಗಂಡ:**—'ಗಂಡಸರ ಜತೆಯಿಲ್ಲದೆ, ನೀನೊಬ್ಬಳೇ 'ವಾಕ್' ಹೋಗುವುದುಂಟೆ?'

**ಹೆಂಡತಿ:**—'ನಾನೇನೂ, ಬಹಳ ದೂರ ಹೋಗುವುದಿಲ್ಲ. ಅಲ್ಲದೆ, ಸೀತಮ್ಮನವರೂ ಜೊತೆಯಲ್ಲಿ ಬರುತ್ತಾರೆ. ವ್ಯಾಯಾಮವಿಲ್ಲದೆ, ಶರೀರ ಸ್ಥಿತಿಯು ಕೆಡುತ್ತ ಬಂದಿದೆ!'

**ಗಂಡ:**—'ಅದು ಹಾಗಿರಲಿ! ಕೈಯಲ್ಲಿ ಪುಸ್ತಕಗಳೇಕೆ?'

**ಹೆಂಡತಿ:**—'ಗಂಡಸರ ಹಾಗೆ, ನಾವೂ ಕೈಯಲ್ಲಿ ದೊಣ್ಣೆಗಳನ್ನು ಹಿಡಿದುಕೊಂಡು ಹೋಗುವುದಕ್ಕಾದೀತೆ?'

**ಗಂಡ:**—'ಬೇಡ. ಛತ್ರಿಯನ್ನಾದರೂ ಹಿಡಿದುಕೊಂಡರೆ—?'

**ಹೆಂಡತಿ:**—'ಅದೇನೂ ಅಗತ್ಯವಿಲ್ಲ! ಈಗ ಬಿಸಿಲಿಲ್ಲವಷ್ಟೆ!—ಅಲ್ಲದೆ, ನಾವಿಬ್ಬರೂ ಕೆಲವು ವಿಷಯಗಳನ್ನು ಚರ್ಚಿಸಬೇಕಾಗಿದೆ! ಅದಕ್ಕೋಸ್ಕರ, ಪುಸ್ತಕವಿದ್ದರೆ ಒಳ್ಳೆಯದು!'

**ಗಂಡ:**—'ಬರಿಗಾಲಲ್ಲಿ ನಡೆಯುವುದು ಕಣ್ಣಿಗೆ ತುಂಬ ಅಪಾಯಕರ. ಕಾಲಿಗೇನಾದರೂ, ಹಾಕಿಕೊಂಡು ಹೋಗಬಹುದಲ್ಲ?'—

[ಅಷ್ಟರಲ್ಲಿ, ನೆರೆಮನೆಯ ಸೀತಮ್ಮ ಪ್ರವೇಶಿಸುವಳು.]

**ಸೀತಮ್ಮ:**—'Well! Rangamma! Are you ready?' (ಏನು? ರಂಗಮ್ಮನವರೆ! ಸಿದ್ಧವಾಗಿದ್ದೀರಾ?)

**ರಂಗಮ್ಮ:**—'Yes! Quite Ready. Come on; we shall go!' (ಸಿದ್ಧವಾಗಿದ್ದೇನೆ. ಬನ್ನಿ! ಹೋಗೋಣ.)

[ಹೊರಡುವರು.]

**ಸೀತಮ್ಮ:**—'ಅದೇನು? ರಂಗಮ್ಮ! ನಿಮ್ಮೊಡನೆ ನಿಮ್ಮ ಗಂಡಂದಿರು ಏನೋ ತರ್ಕ ಮಾಡುತ್ತಿದ್ದರು!'

**ರಂಗಮ್ಮ:**—'ಇನ್ನೇನು? ಇದೆಯಲ್ಲ! 'ಎಜುಕೇಟೆಡ್ ಲೇಡೀಸನ್ನು' (Educated ladies=**ವಿದ್ಯಾವತಿಯರಾದ ಹೆಂಗಸರನ್ನು**) ನೋಡಿದರೆ, ಎಂತಹ 'ಬ್ರಾಡ್‌ಮೈಂಡೆಡ್' (Broadminded=**ಉದಾರ ಮನಸ್ಸಿನವ**) ಆದ ಗಂಡಸರಿಗೂ ಹೊಟ್ಟೆಯ ಕಿಚ್ಚು!'

**ಸೀತಮ್ಮ:**—'ಅದು ಸರಿ! ಪ್ರಕೃತ—'

**ರಂಗಮ್ಮ:**—'ನಾನು ಹೊರಗೆ ಹೊರಟಕೂಡಲೇ, ನಮ್ಮ ಮನೆಯವರು—'ಏನೇ! ಎಲ್ಲಿಗೆ ಹೊರಟೆಯೇ?'—ಎಂದು ಕೇಳಿದರು. ನನಗೆ

ಬಲು ಸಿಟ್ಟು ಬಂದುಬಿಟ್ಟಿತು. ನನ್ನ ಮನಸ್ಸಿನಲ್ಲಿದ್ದುದನ್ನೆಲ್ಲಾ ಒದರಿಬಿಟ್ಟೆನು.'

**ಸೀತಮ್ಮ:**—'ಆ ಮೇಲೆ?—'

**ರಂಗಮ್ಮ:**—'ಕೂಡಲೇ, ನಮ್ಮ ಮನೆಯುವರು ತಿಳಿವನ್ನು ತಂದುಕೊಂಡರು. ಅವರನ್ನು ನನ್ನ 'ಸ್ಪೀಚು' (Speech = ಭಾಷಣ) ಮರುಳುಮಾಡಿತು. ನನ್ನನ್ನು 'ಎಲೆ!' 'ಎಲೆ!!' ಎಂದು ಕರೆಯುವುದನ್ನೂ ನಿಲ್ಲಿಸಿಬಿಟ್ಟರಲ್ಲದೆ, ಹೊರಗೆ ಹೊರಡುವಾಗ ಕಾಲಿಗೇನಾದರೂ ಹಾಕಿಕೊಂಡು ಹೋಗಬೇಕೆಂದು ಒತ್ತಾಯಪಡಿಸಿದರು.

**ಸೀತಮ್ಮ:**—'ಅಮ್ಮಾ! ನೀವೇ ಪುಣ್ಯಶಾಲಿನಿ. ವಿದ್ಯಾವಂತನಾದ ಒಳ್ಳೆಯ ಗಂಡನನ್ನೂ ಪಡೆದಿರುವಿರಿ. ನನ್ನ ಅವಸ್ಥೆಯನ್ನು ಏನೆಂದು ಹೇಳಲಿ? ನಿತ್ಯವೂ ಜಗಳವಿಲ್ಲದ ದಿನವಿಲ್ಲ! ನನ್ನ ಅತ್ತೆಯಮ್ಮನವರೂ, ಅತ್ತಿಗೆ ನಾದಿನಿಯರೂ—ಅಯ್ಯೊ!—ಹೇಳಿ ಉಪಯೋಗವಿಲ್ಲ!! ಹಸ್ಬೆಂಡ್ (husband = ಗಂಡ) ಒಬ್ಬರಾದರೂ ಸರಿಯಾಗಿದ್ದರೆ, ಚೆನ್ನಾಗಿತ್ತು!!! ನನ್ನ ಹಣೆಯು ಬರಹಕ್ಕೆ, ಅದೂ ಕೂಡ ಇಲ್ಲವಾಗಿದೆ! ಯಾರಿಗೂ ತಿಳಿಯದಂತೆ, ಕಳ್ಳತನದಿಂದ, ನಿಮ್ಮ ಮನೆಗೆ ಬಂದಿದ್ದೇನೆ. ನಾವು ಹೊರಗೆ ಹೊರಟಿರುವುದು ಅವರಿಗೇನಾದರೂ ತಿಳಿದರೆ, ನನ್ನನ್ನು ಕಾಡುಪಾಲೇ ಮಾಡಿಬಿಡುತ್ತಾರೆ!!!'

**ರಂಗಮ್ಮ:**—'ಅಯ್ಯೋ ಪಾಪ! 'ಎಜುಕೇಟೆಡ್ ಪೀಪಲ್ಲೇ' (Educated people = ವಿದ್ಯಾವಂತರು.) ಹೀಗೆ ಮಾಡುವಾಗ, 'ಅನ್ನೆಜುಕೇಟೆಡ್ ಬ್ರೂಟ್ಸ್' (Uneducated brutes—ವಿದ್ಯಾವಿಹೀನರಾದ ಪಶುಗಳು) ನ್ನು ಕೇಳುವುದೇನು?—ಓಹೋ! ಅದಾರು? ನೋಡಿ, ದೂರದಲ್ಲಿ ಬರುತ್ತಿದ್ದಾರೆ!'

**ಸೀತಮ್ಮ:**—'ಅಯ್ಯೋ! ಇನ್ನೇನು ಗತಿ? ದೂರದಲ್ಲಿ 'ಸೋಲ್ಜರು'ಗಳು ಬರುತ್ತಿದ್ದಾರೆ!—ನಡೆಯಿರಿ! ಹಿಂದಕ್ಕೆ ಹೋಗೋಣ. ಈ ಹಾಳು 'ವಾಕು' ಸಾಕು! ಪುಣ್ಯಕ್ಕೆ, ನಾವು ಮನೆಯನ್ನು ಬಿಟ್ಟು, ಬಹಳ ದೂರ ಬಂದಿಲ್ಲ!'

**ರಂಗಮ್ಮ:**—'ಹೊರಗೆ ಹೊರಡುವಾಗ, ನಮ್ಮ ಮನೆಯವರು—'ಗಂಡಸರ ಜತೆಯಿಲ್ಲದೆ, ನೀನೊಬ್ಬಳೇ ವಾಕ್ ಹೋಗುವುದುಂಟೇ?' ಎಂದು ಕೇಳಿದರು! ಅದೀಗ ತಾರ್ಕಣೆಗೆ ಬಂದಿತು!!' (ಇಬ್ಬರೂ ಅವಸರವಸರವಾಗಿ, ಮನೆಗಳಿಗೆ ಹೋಗುವರು.)

[ಮನೆಬಾಗಿಲಿಯಲ್ಲಿ, ರಂಗಮ್ಮನ ಗಂಡನು ಅವಳು ಬರುವುದನ್ನು ನೋಡುತ್ತಿರುವನು.]

**ಗಂಡ:**—'ಇದೇನು? ಇಷ್ಟು ಬೇಗ—'ವಾಕ್' ಮುಗಿಯಿತು!'

**ಹೆಂಡತಿ:**—'ನಿಮ್ಮ ಮಾತನ್ನು ಕೇಳದೆ ಹೋದುದಕ್ಕಾಗಿ ಕ್ಷಮಿಸಬೇಕು. ದೂರದಲ್ಲಿ 'ಸೋಲ್ಜರು'ಗಳು ಬರುತ್ತಿದ್ದುದನ್ನು ನೋಡಿ, ಬೆದರಿದೆವು.'

**ಗಂಡ:**—'ನೂತನಪದ್ಧತಿಗಳನ್ನು ಅನುಸರಿಸಲು ಪ್ರಯತ್ನಿಸುವವರೆಲ್ಲರೂ ಹೀಗೆಯೇ ಕಷ್ಟಗಳಿಗೊಳಗಾಗಬೇಕು! ಎಂತಹವರಿಗಾದರೂ, ಅದು ತಪ್ಪಿದುದೆಂದು ತಿಳಿಯಬೇಡ.'—(ರಂಗಮ್ಮನು ಮನೆಯೊಳಗೆ ಹೋಗಿ, ಸ್ವಲ್ಪ ಹೊತ್ತು ಬಿಟ್ಟುಕೊಂಡು, ಪುನಃ ಬರುವಳು.)

**ರಂಗಮ್ಮ:**—'ಇದೇನು? ಈದಿನ—ಏಕಾದಶಿಯೇ?'

**ಗಂಡ:**—'ಅದೇಕೆ?'

**ರಂಗಮ್ಮ:**—'ಅಡಿಗೆಯವನೇತಕ್ಕೆ ಇನ್ನೂ ಬರಲಿಲ್ಲ? ನಿಮಗೆ ಕಚ್ಚೇರಿಗೆ ಹೊತ್ತಾಗುವುದಿಲ್ಲವೆ?'

**ಗಂಡ:**—'ಈದಿನ ನಾನು ಕಚ್ಚೇರಿಗೆ ಹೋಗುವುದಿಲ್ಲ! ಅಡಿಗೆಯವನನ್ನು ಬರಬೇಡವೆಂದು ಹೇಳಿಕಳುಹಿಸಿದ್ದೇನೆ!'

**ರಂಗಮ್ಮ**—'ಏತಕ್ಕೆ?'

**ಗಂಡ:**—'ಕಾರಣಾಂತರದಿಂದ!'

**ರಂಗಮ್ಮ:**—'ಹಾಗಾದರೆ, ಈ ದಿನ ಅಡಿಗೆಯನ್ನು ಮಾಡುವವರಾರು?'

**ಗಂಡ:**—'ಮನೆಗೆಲಸಗಳನ್ನು ಮಾಡುವವರು!'

**ರಂಗಮ್ಮ:**—'ಅವನ್ನೆಲ್ಲಾ ಯಾರು ಮಾಡುವರು?'

**ಗಂಡ:** —'ಯಾರಿಗೆ ವ್ಯಾಯಾಮವಿಲ್ಲದೆ, ಶರೀರಾರೋಗ್ಯವು ಕೆಡು ತ್ತಿದೆಯೋ—ಅವರು!'

**ರಂಗಮ್ಮ:**—'ಓಹೋ! ಈಗ—ಗೊತ್ತಾಯಿತು! ನನ್ನ ಮೇಲಣ ಹಗೆತನವನ್ನು ತೀರಿಸಿಕೊಳ್ಳುವುದಕ್ಕೋ—ಈ ದಿನ ಈ ಏರ್ಪಾಡು ಮಾಡಿ ರುವುದು? ನಾನು ಮನೆಗೆಲಸಕ್ಕೂ ಅಡುಗೆ ಮಾಡುವುದಕ್ಕೂ ಕುಳಿತರೆ, ನನ್ನ ಓದಿನ ಗತಿಯೇನಾಗಬೇಕು?'

**ಗಂಡ:**—'ಓದಿನ ಕಡೆಗೇ ಲಕ್ಷ್ಯವಿಟ್ಟರೆ, ಶರೀರದ ಗತಿಯೇನಾಗ ಬೇಕು?'

**ರಂಗಮ್ಮ:**—'ಹಾಗಾದರೆ, ನಾನೋದುವುದು ನಿಮಗಿಷ್ಟವಿಲ್ಲವೊ?'

**ಗಂಡ:**—'ಶರೀರವನ್ನು ಸರಿಯಾದ ಸ್ಥಿತಿಯಲ್ಲಿ ಕಾಪಾಡಿಕೊಳ್ಳು ವುದಕ್ಕೆ ನಿನಗಿಷ್ಟವಿಲ್ಲವೊ?'

**ರಂಗಮ್ಮ:**—'ನನ್ನನ್ನು ಓದುವುದಕ್ಕೇಕೆ ಹಾಕಿದಿರಿ?'

**ಗಂಡ:**—'ಪರೀಕ್ಷೆಗಳನ್ನು ಕೊಟ್ಟು, ಉದ್ಯೋಗಗಳನ್ನು ಪಡೆದು, ಸಂಪಾದಿಸುವುದಕ್ಕೋಸ್ಕರ!'

**ರಂಗಮ್ಮ:**—'ನೀವು ಮಾತಾಡುವುದು ನನಗೇನೂ ಅರ್ಥವಾಗು ವುದಿಲ್ಲ! ನಾನು ಉದ್ಯೋಗಮಾಡಿ, ಸಂಪಾದಿಸುವುದರಲ್ಲಿ ತಪ್ಪೇನು?'

**ಗಂಡ:**—'ತಪ್ಪೇನೂ ಇಲ್ಲ! ಆಗ, ನೀನು ಸ್ವತಂತ್ರಳಾಗುವೆ!'

**ರಂಗಮ್ಮ:** —'ಆದರೇನು?'

**ಗಂಡ:**—'ಹಾಗಾದರೆ, ನನ್ನ ದಾರಿಯೇ ಬೇರೆಯಾಗುವುದು; ಅದ ರೊಂದಿಗೆ, ನಿನ್ನ ದಾರಿಯಾಗುವುದು!'

**ರಂಗಮ್ಮ:**—'ಅದೇತಕ್ಕೆ—ಹಾಗಾಗಬೇಕು?'

**ಗಂಡ:**—'ಸ್ವತಂತ್ರಜೀವಿಗಳಾದ ಇಬ್ಬರು ಸೇರಿ, ಒಗತನವನ್ನು ಮಾಡುವುದು—ತೀರಾ ಅಸಾಧ್ಯವಾದ ಕೆಲಸ. ಒಂದು ತಲೆಗೆ ಎರಡು

ತುರುಬುಗಳು ಸಲ್ಲವು ಹೇಗೋ—ಹಾಗೆಯೇ, ಒಂದು ಮನೆಗೆ ಇಬ್ಬರು ಯಜಮಾನರು ಆಗಲಾರರು. 'ಎತ್ತು ಏರಿಗೆ ಎಳೆಯಿತು; ಕೋಣವು ನೀರಿಗೆ ಎಳೆಯಿತು'—ಎಂಬ ಗಾದೆಯು ಹೊಸದಲ್ಲ. ಸಂಸಾರವು ಸರಿಯಾಗಿ ನಡೆಯಬೇಕಾದರೆ, ಆಲೋಚನೆಯೂ ಕಾರ್ಯಭಾಗವೂ ಏಕಮುಖವಾಗಿರಬೇಕು. ಈಗ ನಮ್ಮ ಗೃಹಕೃತ್ಯವನ್ನು ಆಲೋಚಿಸೋಣ.—ನೀನು ಸಂಪಾದಿಸಿ ತಂದು ಹಾಕುವವಳಾದರೆ, ನಾನು ನಿನ್ನ ಆಜ್ಞಾನುಸಾರವಾಗಿ ನಡೆಯಬೇಕು; ಅಥವಾ, ನಾನು ಸಂಪಾದಿಸುವವನಾದರೆ, ನೀನು ನನ್ನ ಆಜ್ಞಾನುಸಾರವಾಗಿ ಪ್ರವರ್ತಿಸಬೇಕು. ಇವೆರಡರಲ್ಲೊಂದು ಆಗದಿದ್ದರೆ, ನಮ್ಮಿಬ್ಬರ ಸಂಸಾರನೌಕೆಯು ಸರಾಗವಾಗಿ ತೀರವನ್ನು ಸೇರಲಾರದು. ನೀನು ಮೊದಲನೆಯ ಮಾರ್ಗವನ್ನನುಸರಿಸುವೆನೆಂದರೆ,—ಬೇರೊಬ್ಬರ ಆಶ್ರಯದಲ್ಲಿರುವಂತಹ ಆವಶ್ಯಕತೆಯೇನೂ ನನಗಿರುವುದಿಲ್ಲ; ಆದುದರಿಂದ, ಅದು ಸಾಧ್ಯವಲ್ಲ. ನೀನು ಎರಡನೆಯ ಮಾರ್ಗವನ್ನನುಸರಿಸುವುದರಲ್ಲಿ, ನಿನ್ನ ಸ್ವಾಧೀನತೆಯೇ ನಿನಗಿರುವುದಿಲ್ಲ; ಅಲ್ಲದೆ, ಸಂಪಾದನಾವಿಷಯವಾದ ಬಾಧ್ಯತೆಯೂ ನಿನಗಿರುವುದಿಲ್ಲ. ಇದು ನಿನಗೆ ಇಷ್ಟವಲ್ಲದ ಪಕ್ಷದಲ್ಲಿ ನೀನು ಸ್ವತಂತ್ರೆಯಾಗಿ ಬೇರೆಯೇ ಇರುವುದೂ ನನಗೆ ಸಮ್ಮತವೇ ಆಗಿರುವುದು!'

**ರಂಗಮ್ಮ:**—'ಹಾಗಾದರೆ, ನನ್ನನ್ನಿಷ್ಟು ಕಷ್ಟಪಡಿಸಿ ಓದಿಸಿದುದೇಕೆ? ಎಲ್ಲರಂತೆಯೆ, ನಾನೂ ಓದು ಬಾರದವಳಾಗಿದ್ದರೆ, ಏನು ನಷ್ಟವಾಗುತ್ತಿದ್ದಿತು?'

**ಗಂಡ:**—'ನಿನ್ನ ವಿದ್ಯಾಭ್ಯಾಸವು ಬರೀ ಪುಸ್ತಕಗಳನ್ನು ಉರು ಹಾಕುವುದರಲ್ಲೇ ಪರ್ಯವಸಾನಹೊಂದುವುದೆಂದೂ, ಅದರ ಜೊತೆಗೆ ವಿಲಕ್ಷಣಗಳಾದ ಅಭಿಪ್ರಾಯಗಳು ನಿನ್ನ ಮನಸ್ಸಿನಲ್ಲಿ ಬಲವಾಗಿ ಮೊಳೆಯುವುವೆಂದೂ,—ಇದುವರೆಗೂ, ನಾನೆಂದಿಗೂ ತಿಳಿದಿರಲಿಲ್ಲ. ನಿನಗೆ ಪ್ರಾಪಂಚಿಕ ವ್ಯವಹಾರಜ್ಞಾನವು ಸ್ವಲ್ಪ ಮಟ್ಟಿಗುಂಟಾಗಬೇಕೆಂದೂ,—ಅದರೊಂದಿಗೆ ಮನೆಯ ಆಡಳಿತಗಳನ್ನೂ, ಲೆಕ್ಕಚಾರ

ಗಳನ್ನೂ ನೋಡಿಕೊಳ್ಳುವುದಕ್ಕೆ ತಕ್ಕಷ್ಟು ಸಾಮರ್ಥ್ಯವುಂಟಾಗ ಬೇಕೆಂದೂ,— ಮುಂದೆ ನಿನ್ನ ಮಕ್ಕಳಿಗೆ, ನಿನ್ನ ಮೂಲಕವೇ ಯಥೋಚಿತ ವಾದ ಬಾಲ್ಯವಿದ್ಯಾಭ್ಯಾಸಕ್ಕೆ ಸಾಕಷ್ಟು ಅವಕಾಶವುಂಟಾಗಬೇಕೆಂದೂ,— ನನ್ನ ಉದ್ದೇಶವಿದ್ದಿತು. ತಿಳಿಯಿತೆ?'

**ರಂಗಮ್ಮ:** —'ನೀವು ಹೇಳಿದ ಬುದ್ಧಿವಾದಗಳಿಂದ, ನನಗೆ ಸ್ವಲ್ಪ ತಿಳಿವುಂಟಾಯಿತು. ಅನಾದೃಶ್ಯವಾದ ನಿಮ್ಮ ಪ್ರೇಮದ ಮಹ ತ್ವವು ಈಗಲೀಗ ನನಗೆ ತಿಳಿವನ್ನುಂಟುಮಾಡಿತು. ನಿಮ್ಮ ಅಭೀಷ್ಟಕ್ಕೆ ವಿರೋಧವಾಗಿ ನಡೆಯಲು, ಖಂಡಿತವಾಗಿಯೂ ನನಗೆಂದಿಗೂ ಇಷ್ಟ ವಿಲ್ಲ. ಇನ್ನು ಮೇಲೆ, ನಾನು ನಿಮ್ಮ ಛಾಯಾನುವರ್ತಿನಿಯಾಗಿಯೇ ಇರುತ್ತೇನೆ. ದಯೆಯಿಟ್ಟು, ನಾನು ದುಡುಕಿ ಮಾತಾಡಿದುದನ್ನು ಮನ್ನಿಸಬೇಕು.'

**ಗಂಡ:** —'ನೀನು ಮೊದಲು ಹೇಳಿದಂತೆ, ಅದು ನಿನ್ನ ತಪ್ಪಲ್ಲ. ಸಾಮಾನ್ಯವಾಗಿ, ಎಲ್ಲಾ ದೇಶಗಳಲ್ಲಿಯೂ, ಈಗಿನ ಕಾಲದ ವಿದ್ಯಾ ವತಿಯರು ಸ್ವಾತಂತ್ರ್ಯವನ್ನು ಅಪೇಕ್ಷಿಸುತ್ತಿರುವರೆಂಬುದು ಸಹಜವಾಗಿದೆ. ಈ ವಿಷಯದಲ್ಲಿ, ಗಂಡಸರೂ ಎಷ್ಟರ ಮಟ್ಟಿಗೆ ಕಾರಣರಾಗಿರುವರೆಂಬು ದನ್ನು ನಾನು ಚೆನ್ನಾಗಿ ಬಲ್ಲೆನು. ಹೇಗಾದರೂ, ತಾರತಮ್ಯವನ್ನರಿತು, ಕಾರ್ಯಸಾಧಕರಾಗಬೇಕು. ನಮ್ಮ ದೇಶದ ಮರ್ಯಾದೆಗೆ ತಕ್ಕಂತೆ, ನರರಂತೆ, ನಾವು ನಡೆದುಕೊಳ್ಳಬೇಕೇ ಹೊರತು,— ಅನ್ಯರ ಪದ್ಧತಿಗಳನ್ನು ವಾನರರಂತೆ ಅನುಕರಿಸಲು ಉಪಕ್ರಮಿಸಬಾರದು. ನನ್ನ ಮಾತುಗಳಿಗೆ ಇಷ್ಟುಮಟ್ಟಿಗೆ ಲಕ್ಷ್ಯಗೊಟ್ಟುದಕ್ಕಾಗಿ ಸಂತೋಷಿಸುತ್ತೇನೆ. ಪ್ರಾಚೀನ ಪದ್ಧತಿಯಂತೆ ನಡೆಯಹೋಗುವ ಪತಿಪತ್ನಿಯರಾದ ನಮ್ಮಿಬ್ಬರ ಸಂಸಾ ರವು ಸುಪಥವಾಗಲೆಂದು ಹಾರೈಸುತ್ತೇನೆ.'

[ಎಂದು ಇಬ್ಬರೂ, ಸಂತೋಷದೊಡನೆ, ಸ್ವಗೃಹವನ್ನು ಪ್ರವೇಶಿಸುವರು.]

B. VENKATKRISHNAPPA, B. A.

# ಪಾಲಿತ ಬಾಲೆ.

ಅದು ಮಧ್ಯಾಹ್ನ ಶ್ರಾವಣ ಮಾಸದಲ್ಲಿ. ಉಕ್ಕಿ ಹರಿಯುತ್ತಿದ್ದ ಗಂಗಾ ಪ್ರವಾಹವು ಮೋತೀಜಂಗಿನ ಬಾಳೆಯ ಮರವನ್ನು ಬಳಸಿ ಬಂದಿದ್ದಿತು. ಜೀರ್ಣವಾದ ಚಿಕ್ಕದೊಂದು ದೋಣಿ ಆ ಪ್ರದೇಶಕ್ಕೆ ಬಂದಿತು. ವೃದ್ಧನೂ, ಕೃಶಾಂಗನೂ ಆದ ಬ್ರಾಹ್ಮಣನೊಬ್ಬನು ಕೆಳಗಿಳಿದನು. ಅಂಬಿಗನು ಬ್ರಾಹ್ಮಣನ ಚೀಲ-ಕೊಡೆ-ಕೋಲುಗಳನ್ನೆತ್ತಿ ಅವನ ಕೈಯಲ್ಲಿ ಕೊಟ್ಟನು. ಬ್ರಾಹ್ಮಣನೊಂದು ಕಯ್ಯಿಂದ ಅವನ್ನು ತೆಗೆದುಕೊಂಡು ಮತ್ತೊಂದು ಕಯ್ಯಲ್ಲಿ ಕಾಲು ರೂಪಾಯಿಯನ್ನು ಕೂಲಿಯೆಂದು ಮುಂದಕ್ಕೆ ಚಾಚಿದನು. ಅಂಬಿಗನು ನಾಣ್ಯವನ್ನು ಸ್ವೀಕಾರ ಮಾಡಿ,—'ಅಯ್ಯಾ! ನಾವಯ್ವರು. ಈ ನಾಲ್ಕಾಣೆ ಎಲ್ಲಿಗೆ ಸಾಕು?'—ಎಂದನು.

'ನಾಲ್ಕಾಣೆಯೂ ಸಾಲದೆಂದು ನಿನ್ನ ಅಭಿಪ್ರಾಯವೊ?'

'ಅಹುದು ಸ್ವಾಮಿ! ಆ ದುಡ್ಡೆಲ್ಲ ನಾಲ್ಕು ಸೇರಕ್ಕಿಯನ್ನು ಕೊಳ್ಳುವುದರಲ್ಲಿಯೆ ವೆಚ್ಚವಾಗಿ ಹೋಗುವುದು. ಇನ್ನು—ಅನ್ನ ಬೇಯಿಸಲು ಮಡಕೆಯಾಗಬೇಕು! ಕಟ್ಟಿಗೆಯಾಗಬೇಕು! ಉಪ್ಪಾಗಬೇಕು!— —'

'ಇದೋ! ತೆಗೆದುಕೊ!'—ಎಂದು, ಬ್ರಾಹ್ಮಣನು ಬಹು ಜಾಗರೂಕತೆಯಿಂದ ನಾಲ್ಕೆಂಟು ಬಾರಿ ಎಣಿಸಿ, ಕೊನೆಗೆ ಆ ಎಂಟು ತಾಮ್ರದ ನಾಣ್ಯಗಳನ್ನು ಅವನ ಕಯ್ಯಲ್ಲಿಟ್ಟನು. ಅಂಬಿಗನಲ್ಲಿಗೂ ತೃಪ್ತನಾಗದೆ,—'ಅಯ್ಯಾ! ಒಬ್ಬೊಬ್ಬನಿಗೆ ಅಯ್ದಯ್ದು ಬಿಲ್ಲೆಯ ಕೂಲಿ ಎಷ್ಟಕ್ಕೂ ಸಾಲದು. ದಯೆಯಿಟ್ಟು ಅರ್ಧ ರೂಪಾಯಿಯನ್ನಾಗಿ ಮಾಡಿ!'—ಎಂದನು.

ಸ್ವಲ್ಪ ಹೊತ್ತು ಚರ್ಚೆ ನಡೆದು, ಬ್ರಾಹ್ಮಣನಿನ್ನೊಂದಾಣೆಯನ್ನು ಕೆಳಗೆ ಚೆಲ್ಲಿದನು. ಆ ಮೇಲೆ ಸುತ್ತಲೂ ನೋಡಿ, ದೋಣಿಯವನಿಗೆ ಮೆತ್ತಗಾದ ಸ್ವರದಿಂದ ಹೇಳಿದನೇನೆಂದರೆ,—'ಎಲಾ! ಯಾರಾದರೂ ನಾನೇಕೆ ಇಲ್ಲಿಗೆ ಬಂದಿರುವೆಯೆಂದು ಕೇಳಿದರೆ, ಇಷ್ಟೇ ಹೇಳು!—ನಮ್ಮ ಠಾಕೂರರು ಮದುವೆಯನ್ನು ಗೊತ್ತುಮಾಡಲು ಬಂದಿರುವರೆಂದು!'

ಬ್ರಾಹ್ಮಣನು ರಾಜಮಾರ್ಗವನ್ನು ಹಿಡಿದು, ತಾನು ಹೋಗಬೇಕಾಗಿದ್ದ ಆ ಸ್ಥಳಕ್ಕೆ ಮೆಲ್ಲಮೆಲ್ಲನೆ ಸಮಿಪಾಪಗತನಾಗುತ್ತಿದ್ದನು. ಅಲ್ಲಲ್ಲಿ ಅಂಗಡಿಗಳನ್ನು ಪ್ರವೇಶಿಸುತ್ತಲಿದ್ದವರಲ್ಲಿ ಕೆಲವರು ಅಪರಿಚಿತನಾದ ಈ ವ್ಯಕ್ತಿಯನ್ನು ಕೌತುಕಭಾವದಿಂದ ನಿಂತು ನೋಡಿದವರಾಗಿ, ಏನನ್ನೂ ತಿಳಿದುಕೊಳ್ಳಲಾರದೆ, ತಮ್ಮ ತಮ್ಮ ಕೆಲಸದ ಮೇಲೆ ಹೊರಟುಹೋದರು.

ವೃದ್ಧಮಹಾಶಯನ ಹೆಸರು ರಮಾನಾಥ ಮುಖರಜಿ. ಅವನು ನವಗ್ರಾಮದ ನಿವಾಸಿ.—ಪ್ರಾತಃಕಾಲದಲ್ಲೆದ್ದು ಅವನ ಚರಿತ್ರೆಯನ್ನು ಬರೆಯ ತೊಡಗುವುದಾದರೆ, ಅದೃಷ್ಟವು ಆ ಲೇಖಕನಿಗೆ ಎಂತಹ ವಿಪತ್ತನ್ನುಂಟು ಮಾಡುವುದೋ ಅದನ್ನು ಯಾರೂ ತಿಳಿಯರು. ನವಗ್ರಾಮದಲ್ಲಿ, ಭೋಜನಕ್ಕೆ ಮೊದಲು ಯಾರೂ ಅವನ ನಾಮೋಚ್ಚಾರಣೆಯನ್ನೂ ಮಾಡರು. ರಮಾನಾಥನು ಕೃಪಣಶಿರೋಮಣಿಯೆಂದು ಸುಪ್ರಸಿದ್ಧನಾಗಿದ್ದನು.

ಮೋತಿಜಂಗಿನಲ್ಲಿ ರಮಾನಾಥನ ಬೀಯಗನು ವಾಸಮಾಡುತ್ತಿದ್ದನು. ಅಯ್ದು ವರ್ಷಗಳಿಗೆ ಹಿಂದೆ, ಸುಬೋಧಚಂದ್ರನು ರಮಾನಾಥನ ಕನಿಷ್ಠ ಪುತ್ರನಿಗೆ ತನ್ನ ಮಗಳನ್ನು ಕೊಟ್ಟು ವಿವಾಹ ಮಹೋತ್ಸವವನ್ನು ಬಳೆಯಿಸಿದ್ದನು. ಸ್ವಲ್ಪ ಕಾಲಾನಂತರ, ಪುತ್ರವಧು ಗರ್ಭಿಣಿಯಾಗಿ, ಪದ್ಧತಿಯಂತೆ, ತಾಯ ಮನೆಗೆ ಬಂದಿದ್ದಳು. ಕಾಲಕ್ರಮದಲ್ಲಿ ಹೆಣ್ಣು ಮಗುವನ್ನು ಹೆತ್ತು ಕೈಲಾಸವಾಸಿನಿಯಾದಳು. ಇದು ಸುಮಾರು ಅಯ್ದಾರು ತಿಂಗಳ ಮಾತು!—ಅಯ್ದು ವರ್ಷಗಳಿಗೆ ಮೊದಲು ಇದೇ ರಾಜಮಾರ್ಗದಲ್ಲಿ, ಅನೇಕಾನೇಕ ವಾದ್ಯ ವೈಭವಗಳೊಡನೆ ರಮಾನಾಥನು ತನ್ನ ಸೊಸೆಯನ್ನು ಪಲ್ಲಕ್ಕಿಯಲ್ಲಿ ಮನೆಗೆ ಕರೆದುಕೊಂಡು ಹೋಗಿದ್ದನು. ಆ ವಿಚಾರವು ರಮಾನಾಥನ ಸ್ಮೃತಿಪಥದಲ್ಲಿ ಈಗ ಪ್ರಕಾಶಮಾನವಾಗಿ, ಅವನ ಮುಖಮಂಡಲದಲ್ಲಿ ದುಃಖಚ್ಛಾಯೆಯನ್ನುಂಟುಮಾಡಿದ್ದಿತು.

ಸುಬೋಧಚಂದ್ರನ ಮನೆಯನ್ನು ಸೇರಲು ಬಹಳ ಹೊತ್ತು ಹಿಡಿಯಲಿಲ್ಲ. ಹಜಾರದ ಬಾಗಿಲು ತೆರೆದಿದ್ದುದರಿಂದ, ರಮಾನಾಥನು ಅಲ್ಲಿ

ಯೊಂದು ಆಸನವನ್ನು ಸ್ವೀಕಾರಮಾಡಿದನು. ಗೋಡೆಯ ಮೇಲೆ, ಮಗನ ಮದುವೆಯ ಕಾಲದಲ್ಲಿ ಮಾಡಿದ್ದ ಮುಹೂರ್ತ ಚಿಹ್ನಗಳಿನ್ನೂ ಕಾಣ ಬರುತ್ತಿದ್ದುವು. ಆ ಸಮಯದಲ್ಲಿ ಸುಬೋಧಚಂದ್ರನು ತುಂಬ ಅನು ಕೂಲಸ್ಥನು. ಮದುವೆಯಲ್ಲಿ ಮೂರು ಸಾವಿರ ರೂಪಾಯಿಗಳನ್ನು ವೆಚ್ಚಮಾಡಿದನು. ಆಗಳವನ ಕಸುಬು ಧಾನ್ಯವಿಕ್ರಯ. ಕಳೆದಯ್ದು ವರ್ಷ ಗಳಲ್ಲಿ ಅವನ ಆ ವ್ಯಾಪಾರದಲ್ಲಿ ನಷ್ಟದ ಮೇಲೆ ನಷ್ಟವುಂಟಾಗಿ, ಸ್ಥಿತಿ ಕೆಟ್ಟುಹೋದುದು ಮಾತ್ರವಲ್ಲದೆ, ಮೈತುಂಬ ಸಾಲವೂ ಆಯಿತು. ಲಗ್ನವಾದ ಮೇಲೆ, ಒಂದು ಬಾರಿಯಾದರೂ ಸುಣ್ಣದ ಮುಖವನ್ನು ಕಾಣದಿದ್ದ ಆ ಕೊಟ್ಟಡಿಯಲ್ಲಿ ಆ ಚಿಹ್ನಗಳು ಸಾಮಾನ್ಯವಾದ ದೃಶ್ಯವೇ ಆದರೂ, ಸುಬೋಧಚಂದ್ರನು ತನ್ನ ಸಾಂಪತ್ತಿಕ ಸ್ಥಿತಿಯಲ್ಲಿ ವಿಶೇಷ ಪರಿ ವರ್ತನವನ್ನು ಹೊಂದಿರುವನೆಂದು ಸಾಮಾನ್ಯ ಬುದ್ಧಿಯುಳ್ಳವನಿಗೆ ಸೂಕ್ಷ್ಮಭಾವದಿಂದ ಸೂಚಿಸುವಂತಿದ್ದುವು.

ತೋಟದ ಬೇಲಿಯನ್ನು ಸರಿಪಡಿಸುತ್ತಲಿದ್ದ ಸೇವಕನೊಬ್ಬನು ಕೊಟ್ಟಡಿಯಲ್ಲಿ ಕುಳಿತಿದ್ದ ರಮಾನಾಥನನ್ನು ಕಂಡನು. ರಮಾನಾಥನು ಆ ಹುಡುಗನೊಡನೆ—'ಎಲಾ! ನಿಮ್ಮ ಯಜಮಾನರಿಗೆ ತಿಳಿಸು! ನವ ಗ್ರಾಮದ ರಮಾನಾಥ ಮುಖರಜಿಯವರು ಬಂದಿರುವರೆಂದು.'—ಎಂದು ಹೇಳಿದನು.

ಪ್ರತ್ಯುತ್ತರವನ್ನೇನೂ ಹೇಳದೆ, ಹುಡುಗನು ನಿಶ್ಶಬ್ದವಾಗಿ ಆಗಂತುಕ ನನ್ನು ನೋಡತೊಡಗಿದನು. ಬೇಸರದಿಂದ, ಕಯ್ಯಲ್ಲಿದ್ದ ಮರದ ತುಂ ಡನ್ನು ಬೇಲಿಯ ಮಧ್ಯದಲ್ಲಿಟ್ಟು, ಹಗ್ಗದ ತುಂಡಿನಿಂದ ಕಟ್ಟಿದನು. ಆ ಮೇಲೆ ಜೋಲು ಮೊಗವನ್ನು ಮಾಡಿಕೊಂಡು, ಹೋಗಲೋ ಬೇಡವೋ ಎಂದು ಅನುಮಾನ ಸೂಚಕವಾದ ಹಜ್ಜೆಗಳಿಂದ, ಮೆಲ್ಲಮೆಲ್ಲನೆ ಒಳ ಗಿನ ಕೊಟ್ಟಡಿಯನ್ನು ಪ್ರವೇಶಮಾಡಿದನು.

ಸ್ವಲ್ಪ ಹೊತ್ತಿನೊಳಗಾಗಿ, ಅತಿಮಲಿನವೂ ಅತಿಶುಭ್ರವೂ ಅಲ್ಲದ ವಸ್ತ್ರಗಳನ್ನು ಧಾರಣಮಾಡಿದ್ದ ಮಧ್ಯವಯಸ್ಸನ್ನು ದಾಟಿದ ಪುರುಷ ನೊಬ್ಬನು ಆಗಂತುಕನನ್ನು ನೋಡುವುದಕ್ಕಾಗಿ ಹೊರಗೆ ಬಂದನು.

ಅವನೇ ಸುಬೋಧಚಂದ್ರನು! ರಮಾನಾಥನು ತನ್ನ ಬೀಯಗನಲ್ಲಿ ಪೂರ್ವಕಾಲದ ದರ್ಪವಿಲ್ಲವೆಂದು ಒಡನೆ ಕಂಡುಹಿಡಿದನು. ಸುಬೋಧ ಚಂದ್ರನು ಕ್ಷೀಣಬಲನಾಗಿ, ಕಣ್ಣುಗಳೆರಡೂ ಒಳಸೇರಿ ಹೋಗಿದ್ದುವು. ಇಬ್ಬರೂ ಆಲಿಂಗನ ಪ್ರಣಾಮಗಳನ್ನು ಮಾಡಿಕೊಂಡ ಮೇಲೆ, ಯಥೋಚಿತವಾಗಿ ಕುಶಲವಾರ್ತೆಯನ್ನು ವಿಚಾರಿಸಿಕೊಂಡರು. ಸುಬೋಧ ಚಂದ್ರನ ಕಣ್ಣುಗಳು ಬಾಷ್ಪಪೂರ್ಣವಾಗಿ, ದೊಡ್ಡ ದೊಡ್ಡ ಕಂಬನಿಗಳವನ ಬಟ್ಟೆಗಳನ್ನೊದ್ದೆಮಾಡಿದ್ದುವು.—ಸೇವಕನು ಬಂದು, ಸಿದ್ಧಪಡಿಸಿದ ತಂಬಾಕನ್ನು ಮುಂದಿಟ್ಟನು. ಇಬ್ಬರೂ ಬಹಳ ಹೊತ್ತಿನ ವರೆಗೆ ಸೇದುತ್ತ, ನಿಶ್ಶಬ್ದವಾಗಿ ಕುಳಿತುಕೊಂಡಿದ್ದರು.

ಕೊನೆಗೆ ರಮಾನಾಥನು ಹೇಳಿದನು:—'ಭ್ರಾತೃವೆ! ದೈವಚಿತ್ತದಲ್ಲಿದ್ದುದೇನೋ ಅದೆಲ್ಲವೂ ಆಗಿಹೋಯಿತು. ಯೋಚಿಸಿ ಫಲವಿಲ್ಲ.— ಮಗುವನ್ನೊಂದು ಬಾರಿ ನೋಡುತ್ತೇನೆ. ಕರೆದುಕೊಂಡು ಬಾ!'

ಸುಬೋಧಚಂದ್ರನೆದ್ದು ಹೋಗಿ, ದಾಸಿಯೊಡನೆ ಬಂದನು. ಬೆಚ್ಚಗಾದ ಚಿಕ್ಕ ಹಾಸುಗೆಯಲ್ಲಿ ಮಲಗಿಸಿದ್ದ ಆ ಮಗುವನ್ನು ತನ್ನ ಬಾಹುಗಳಿಂದೆತ್ತಿ ರಮಾನಾಥನಿಗೆ ತೋರಿಸಿದನು. ಮಗು ನಗಲೂ ಇಲ್ಲ; ಅಳಲೂ ಇಲ್ಲ. ತನ್ನ ದೃಷ್ಟಿಯನ್ನು ಯಾವುದೋ ಒಂದೆಡೆಯಲ್ಲಿಟ್ಟು ಬಹಳ ಹೊತ್ತಿನ ವರೆಗೆ ಅದನ್ನೇ ನೋಡುತ್ತಿದ್ದಿತು.

ರಮಾನಾಥನು ಮಗುವಿನ ಪ್ರಥಮ ಸಂದರ್ಶನದ ಬಹುಮಾನಾರ್ಥವಾಗಿ ಅರ್ಧ ರೂಪಾಯಿಯನ್ನು ಕೈಯಲ್ಲಿಡಬೇಕೆಂದು ಯೋಚಿಸಿದವನು ಅನಂತರದ ನಿಷ್ಕರ್ಷೆಯಲ್ಲಿ ಮನಸ್ಸನ್ನು ಬದಲಾಯಿಸಿ, ರೂಪಾಯಿಯ ನಾಣ್ಯವೊಂದನ್ನು ಬಾಲೆಯ ಹಸ್ತಗತವನ್ನಾಗಿ ಮಾಡಿದನು. ಎಂದೂ ತನ್ನ ಜೀವಮಾನದಲ್ಲಿ ಮುಖರಜಿ ಮಹಾಶಯನು ಇಂತಹ ವಿಚಾರಗಳಲ್ಲಿ ಕಾಸನ್ನು ಬಿಚ್ಚಿದುದೇ ಇಲ್ಲ! ಹಾಗಾದರೆ, ಈ ಕಾರ್ಯದಲ್ಲಿ ಏನೋ ಒಂದು ವಿಶೇಷಕಾರಣವಿರಬೇಕು!—ಅತಏವ, ರೂಪಾಯಿಯನ್ನು ಕೊಟ್ಟು, ರಮಾನಾಥನು ತನ್ನ ಮುಮ್ಮಗಳ ಮುಖವನ್ನು ನೋಡಿದನು. ದಾಸಿ ನಾಣ್ಯವನ್ನು ತೆಗೆದುಕೊಂಡವಳಾಗಿ!

ಅಸಂತೋಷಭಾವದೊಡನೆ ಮುಖವನ್ನು ಓರೆಮಾಡಿಕೊಂಡಳು. ಒಂದು ರೂಪಾಯಿಯ ಪಾರಿತೋಷಕದಿಂದ ತೃಪ್ತಳಾಗದೆ,—'ಎಂತಹ ಮುದುಕ! ಮೊದಲು ಮುಂಚೆ ಹುಟ್ಟಿದ ಮಗು! ಅದರಲ್ಲಿಯೂ ತಾಯಿ ಸತ್ತುದು, ಬಂಗಾರವನ್ನು ಕೊಡಲು ಇವನಿಗೇನು ಗತಿ ಮುಚ್ಚಿದುದು?'—ಎಂದು ಯೋಚಿಸಿದಳು.

ಕ್ರಮಶಃ ಕತ್ತಲೆಯಾಯಿತು. ರಮಾನಾಥನು ಕಯ್ಕಾಲು ತೊಳೆದು ಕೊಂಡು, ಸಂಧ್ಯಾವಂದನೆಗಾಗಿ ಗೃಹಪ್ರವೇಶಮಾಡಿ ಅಲ್ಲಿ ಹಾಸಿದ್ದ ಜಮಖಾನೆಯ ಮೇಲೆ ಕುಳಿತುಕೊಂಡನು. ಅಷ್ಟರಲ್ಲಿ ಒಳಗಿಂದ ಸುಬೋಧಚಂದ್ರನ ಹೆಂಡತಿ ಪರಲೋಕವಾಸಿನಿಯಾದ ಆ ತನ್ನ ಮಗ ಳನ್ನು ನೆನೆದು ಅಳುತ್ತಿದ್ದ ಧ್ವನಿ ಅವನಿಗೆ ಕೇಳಬಂದಿತು. ಮಾತೃಹೃದ ಯದ ಕಠಿನರೋದನವು ಆ ಸಂಧ್ಯಾರಾಗವನ್ನೂ ನಡುಗುವಂತೆ ಮಾಡು ತ್ತಿದ್ದಿತು. ಸುಬೋಧನ ಕಣ್ಣುಗಳಿಂದ ಹಳ್ಳಹಳ್ಳವಾಗಿ ನೀರು ಹರಿದು ಹೋಯಿತು. ರಮಾನಾಥನೂ ಭಾವನಾಹೀನವಾದ ಮೌನದಲ್ಲಿದ್ದು ಕೊಂಡು,—'ಹಾ ನಾರಾಯಣ! ಏನು ಮಾಡಿಬಿಟ್ಟೆ?'—ಎಂದು ಆಗಾಗ ಹೇಳಿಕೊಳ್ಳುತ್ತಿದ್ದನು.

ತಾಯ ಆಕ್ರಂದನವು ನಿಂತ ಮೇಲೆ, ರಮಾನಾಥನು ಜಪವನ್ನು ಮುಗಿಯಿಸಿ, ಭೋಜನಕ್ಕೆ ಕುಳಿತನು. ಆದರೆ ಇದೇನು?—ಅವನ ಅಂತರಂಗದ ಆಲೋಚನೆಗಳಿನ್ನೂ ಏಕೆ ಅಭಾದಿತವಾಗಿವೆ? ಯಾವ ಉದ್ದೇಶದಿಂದ ಇಷ್ಟು ದೂರ, ನದೀಮಾರ್ಗವಾಗಿ ಪ್ರಯಾಣಮಾಡಿ ಕೊಂಡು ಬಂದಿದ್ದನೋ ಅದನ್ನು ಕುರಿತು ಒಂದೇ ಒಂದು ಮಾತನ್ನಾ ದರೂ ಆಡಿದುದಿಲ್ಲ! ಬಂದಂದಿನಿಂದಲೂ ಅದಕ್ಕಾಗಿ ಎಷ್ಟೋ ಪ್ರಯತ್ನ ಮಾಡಿದ್ದನು; ಸಾಧ್ಯವಾಗಲಿಲ್ಲ! ಕೊನೆಗೆ ರಾತ್ರಿಯಲ್ಲಿಯಾದರೂ ಅದನ್ನು ತೀರ್ಮಾನಿಸಬೇಕೆಂದು ನಿರ್ಧಾರಮಾಡಿದ್ದವನು—'ಹೋಗಲಿ! ನಾಳೆಯ ದಿನ ಮಾತನಾಡುವ. ಈ ರಾತ್ರಿ ಹೇಗಾದರೂ ಉಪಾಯ ದಿಂದ ಕಳೆಯಬೇಕು!'—ಎಂದೆಂದುಕೊಂಡನು.

ಭೋಜನಾನಂತರ, ಹಾಸುಗೆಯೊಂದು ಸಿದ್ಧವಾಯಿತು. ಸುಬೋಧ ಚಂದ್ರನು ಅಪ್ಪಣೆಯನ್ನು ಪಡೆದು ಮಲಗುವುದಕ್ಕೆ ಹೊರಟನು.

ಪೂರ್ವಪರಿಚಿತನಾದ ಆ ಸೇವಕಬಾಲಕನು ಅಲ್ಲಿಯೇ ಒಂದು ಜಂಖಾನದ ಮೂಲೆಯಲ್ಲಿ ಮಲಗಿಕೊಂಡನು.

ದುರಾಲೋಚನೆಗಳಿಗೆ ಆಹುತಿಯಾದವನಾಗಿ, ಬ್ರಾಹ್ಮಣನು ನಿದ್ರಿಸಲಾರದೆ, ತನ್ನನ್ನಿಲ್ಲಿಗೆ ಕರೆತಂದಿರುವ ಉದ್ದೇಶವು ಪೂರ್ತಿಯಾಗುವುದೋ ಇಲ್ಲವೋ ಎಂಬ ಸಂದೇಹದಿಂದ ರಾತ್ರಿಯನ್ನೆಲ್ಲಾ ಕಳೆದನು. ಮಧ್ಯೇ ಮಧ್ಯೇ, ತಂಬಾಖನ್ನು ತಂದುಕೊಡೆಂದು ಕೇಳುವುದರ ಮೂಲಕ, ಸೇವಕಬಾಲಕನ ವಿಶ್ರಾಂತಿಯನ್ನೂ ಹಾಳುಮಾಡಿದನು. ನಾಲ್ಕನೆಯ ಬಾರಿ, ತಂಬಾಖನ್ನು ಸಿದ್ಧಮಾಡಲೆಬ್ಬಿಸಲ್ಪಟ್ಟಾಗ, ಹುಡುಗನು—'ಸ್ವಾಮಿ! ಇನ್ನು ಹೊಗೆಸೊಪ್ಪಿಲ್ಲ. ಎಲ್ಲ ಮುಗಿಯಿತು.'—ಎಂದು ಹೇಳಿ, ಮುಂದಣ ತೊಂದರೆಗಳಿಗೆ ಅವಕಾಶವಿಲ್ಲದಂತೆ, ಸಮಯವನ್ನು ನೋಡಿ, ಉಳಿದಿದ್ದ ತಂಬಾಖನ್ನು ಬ್ರಾಹ್ಮಣನಿಗೆ ತಿಳಿಯದ ಹಾಗೆ ಕಿಡಿಕಿಯ ಸರಳುಗಳ ಸಂದಿನಲ್ಲಿ ಚೆಲ್ಲಿಬಿಟ್ಟನು.

(ii)

ಪ್ರಾತಃಕಾಲದೊಂದಿಗೆ ರಮಾನಾಥನೆದ್ದನು. ಬಾಯಲ್ಲಿ ದುರ್ಗಾನಾಮ! ಸ್ವಲ್ಪ ಹೊತ್ತಿನಲ್ಲಿ, ಮಗನ ಮಾವನು ಬಂದು ಸೇರಿದನು. ಇಬ್ಬರೂ ಧೂಮಪಾನವನ್ನು ಮಾಡುತ್ತ ಕುಳಿತಿದ್ದ ಹಾಗೆ, ರಮಾನಾಥನು ಮಾತನಾಡಲು ನಿಶ್ಚಯಿಸಿದನು. ಪೀಠಿಕಾರೂಪವಾಗಿ ಅವನು ಹೀಗೆಂದು ಹೇಳತೊಡಗಿದನು:—

'ಆರ್ಯ! ಅದೃಷ್ಟದಿಂದ ತಪ್ಪಿಸಿಕೊಳ್ಳಲು ಮಾರ್ಗವೇ ಇಲ್ಲ! ಅದೃಷ್ಟದ ತೀರ್ಮಾನವನ್ನು ಯಾರು ತಾನೇ ವ್ಯತ್ಯಾಸಪಡಿಸಬಲ್ಲರು? ನನಗಿನ್ನೂ ನಾಲ್ಕು ಜನ ಸೊಸೆಯರಿರುವರು. ಅವರಲ್ಲೆಲ್ಲ ಆ ಕಿರಿಯಳಿಗೆ ಸರಿಯಾದವರು ಯಾರೂ ಇರಲಿಲ್ಲ. ಅವಳ ರೂಪವು ಹೇಗೋ, ಗುಣವೂ ಹಾಗೆಯೇ ಇದ್ದಿತು. ಅವಳ ಆ ಮಂತ್ರಶಕ್ತಿಗೆ ಎಲ್ಲರೂ—ಏಕೆ—ಮೃಗಪಕ್ಷಿಗಳು ಕೂಡ—ಅಧೀನರಾಗಿದ್ದರೆಂಬುದು ಎಷ್ಟು ಆಶ್ಚರ್ಯ! ಮನೆಯಲ್ಲಿ 'ಕಾವೇರಿ' ಎಂಬುದೊಂದು ಹಸುವಿದೆ. ಅದು ಬಹು

ದುಷ್ಟವಾದುದರಿಂದ ಯಾರೂ ಅದರ ಹತ್ತಿರ ಸುಳಿವುದಾಗದು. ನೀವೇ ಬೇಕಾದರೆ ಅದಕ್ಕೆ ಆಹಾರವನ್ನು ಕೊಡುತ್ತಿರಿ, ಅದು ಬೇರೆ ನಿಮ್ಮನ್ನು ಕೊಂಬುಗಳಿಂದಿರಿಯದೆ ಬಿಡದು. ಆದರೂ ನನ್ನ ಚಿಕ್ಕ ಸೊಸೆಗೆ ಮಾತ್ರ, ಅದು ಹೇಗೆ ವಶವಾಗಿದ್ದಿತಯ್ಯ!— ಸಾಮಾನ್ಯವಾಗಿ ಸಂಸಾರಗಳಲ್ಲಿ ಹೆಂಗಸರೊಳಗೆ ಜಗಳಗಳಿಲ್ಲದೆ ಇರುವುದಿಲ್ಲ! ಆದರೆ ನನ್ನ ಇತರ ಮಕ್ಕಳ ಹೆಂಡಿರು ಆ ಚಿಕ್ಕವಳನ್ನು ತಮ್ಮ ಬೆನ್ನಿನಲ್ಲಿ ಬಿದ್ದ ಸಹೋದರಿಯೆಂದೇ ಭಾವಿಸುತ್ತಿದ್ದರಲ್ಲಪ್ಪ! ಏಕೆ? ಅವಳ ಮರಣದ ದುಃಖಕರವಾದ ವಾರ್ತೆ ನಮಗೆ ತಿಳಿದುಬಂದಾಗ ನನ್ನ ಹಿರಿಸೊಸೆ ಪ್ರಹಾರಭರದಿಂಡ ನೆಲಕ್ಕೇ ಬಿದ್ದುಬಿಟ್ಟಳು. ಮೂರು ದಿನ, ಮೂರು ರಾತ್ರಿ ಅವಳು ಅನ್ನನೀರುಮುಟ್ಟಿದ್ದರೆ, ಮತ್ತೆ ಹೇಳು! ಇಂದಿಗೂ— ಈ ನಿಮಿಷಕ್ಕೂ ಅವಳು ಹೇಳುತ್ತಿರುತ್ತಾಳೆ:—'ತನ್ನ ಮಗುವಿನ ನಷ್ಟವೂ ಅಷ್ಟೊಂದು ತೀಕ್ಷ್ಣವಲ್ಲ'ವೆಂದು.

ಸುಬೋಧನು ಅತ್ತನು. ಕಂಪಿತಧ್ವನಿಯಿಂದ ಹೇಳಿದನು:— 'ಇನ್ನು ಹೇಳಬೇಡ! ಆರ್ಯ! ಬೇಡಿಕೊಳ್ಳುತ್ತೇನೆ. ಅದನ್ನು ಕುರಿತು ಮಾತಾಡುವುದರಿಂದ ಫಲವಿಲ್ಲ. ಇನ್ನೇನನ್ನಾದರೂ ಎತ್ತಬಾರದೆ?'

ರಮಾನಾಥನು ಸುಮ್ಮನಾದನು. ಚೆನ್ನಾಗಿ ಯೋಚಿಸದೆ ಪ್ರಾರಂಭಿಸಿದುದಕ್ಕಾಗಿ, ಬಹಳ ಪಶ್ಚಾತ್ತಾಪ ಪಟ್ಟನು. ತನ್ನ ದಡ್ಡ ತನವನ್ನು ತಾನೇ ಶಪಿಸುತ್ತ, ಬೇರೆ ಬೇರೆ ವಿಷಯಗಳನ್ನಾರಂಭಿಸಿ,— ಮಧ್ಯೇ ತನ್ನ ಮೇಲೆ ತಾನೇ ಸ್ವಲ್ಪ ಕೋಪಗೊಂಡು, ಹೊಸದೊಂದು ಪ್ರಯತ್ನವನ್ನು ಮಾಡತೊಡಗಿದನು. ಪೀಠಿಕಾಪ್ರಸಂಗವನ್ನು ಬಿಟ್ಟು, ವಿಷಯವೇನೋ ಅದಕ್ಕೇ ಕೈಯಿಕ್ಕಿದನು. ಹೇಳುಹೇಳುತ್ತ, ಅವನ ಮಾತುಗಳು ಎಷ್ಟೊಂದು ಸ್ಪಷ್ಟಭಾವವನ್ನು ತೋರ್ಪಡಿಸಿದುವೆಂದರೆ,— ರಮಾನಾಥನು ಸುಬೋಧನಿದಿರಲ್ಲಿ ನಿಜವಾಗಿಯೂ ನಾಚುಗೆಯಿಂದ ಸತ್ತುಹೋದವನೇನೊ?

ಕೊನೆಗೆ, ನೋಡುವುದಕ್ಕೆ ಹೋದರೆ ಅದು ಸೊಸೆಗೆ ಲಗ್ನಕಾಲ ದಲ್ಲಿಟ್ಟಿದ್ದ ನಗನಪ್ಪಟೆಗಳ ವಿಚಾರ! ಅವುಗಳ ಮೇಲೆ ತನ್ನ ಹಕ್ಕನ್ನು

ಸ್ಥಾಪಿಸುವುದಕ್ಕೇ ಮುದುಕನಿಲ್ಲಿಯವರೆಗೆ ದಣಿದುಕೊಂಡು ಬಂದವನಾಗಿದ್ದನು!

ಆಭರಣಗಳನ್ನು ಕೇಳಿದುದಾಯಿತು. ಸುಬೋಧನು ಬಹಳ ಹೊತ್ತು ಸುಮ್ಮನೆ ಇದ್ದನು. ಯಾವಾಗ ತನ್ನ ಬಿಯಗನ ಸವಾರಿ ಈಚೆಗೆ ದಯಮಾಡುವುದೆಂಬ ಸಮಾಚಾರವನ್ನು ಕೇಳಿದನೋ ಆಗಲೇ ಅವನು ಸಂಪೂರ್ಣವಾಗಿಯೂ ತಿಳಿದುಕೊಂಡನು—ಅವನನ್ನು ಯಾವುದು ಈಗ ಇತ್ತ ಕಡೆಗೆ ಸೆಳೆದುಕೊಂಡು ಬರುತ್ತಿರುವುದೆಂಬುದನ್ನು! ಮತ್ತೆ,–ಹಕ್ಕನ್ನು ಸ್ಥಾಪಿಸುವ ಕಾರ್ಯ!—ಅವನೆಣಿಸಿದಂತೆ ನಡೆದೇ ಹೋಯಿತು. ಆ ವಿಷಯವಾಗಿ ಅವನು ಮೊದಲು ಯೋಚಿಸದೆ ಇರಲಿಲ್ಲ. ‘ಕೇಳುವುದಕ್ಕೆ ಬಂದರೆ, ಆಭರಣಗಳನ್ನು ಕೊಡುವುದಿಲ್ಲ; ಇಟ್ಟುಕೊಳ್ಳುವುದೇ ನಿಜ!’—ಎಂಬ ಈ ಆಲೋಚನೆಯನ್ನು ಅವನು ಅನೇಕ ವೇಳೆ ಸಮಾಧಾನಪೂರ್ವಕವಾದ ವಿಮರ್ಶೆಯಿಂದ ಸಮಾದರಿಸಿದ್ದನು. ಮುಮ್ಮಗಳು ಬದುಕಿ ಉಳಿಯುವುದಾದರೆ, ಲಗ್ನದ ಭಾರವು ತನ್ನ ತಲೆಯ ಮೇಲೆ ಬೀಳುವುದು. ಅದುಕಾರಣ, ಆಭರಣಗಳನ್ನು ತನ್ನಲ್ಲಿಯೇ ನಿಲ್ಲಿಸಿಕೊಂಡು, ಅವಳ ಲಗ್ನಕಾಲದಲ್ಲಿ ಅವುಗಳನ್ನು ದಾನ ಮಾಡುವುದರಲ್ಲಿ ಅನ್ಯಾಯವೇನು? ಮಗಳ ಲಗ್ನದಲ್ಲಿ ಆಭರಣಗಳಿಗೆಂದು ಎರಡು ಸಾವಿರ ರೂಪಾಯಿಗಳನ್ನು ವೆಚ್ಚಮಾಡಿದುದು ವಾಸ್ತವವೇ ಆದರೂ, ಈಗಳಿನ ಸ್ಥಿತಿಗತಿಗಳು ಸಂಪೂರ್ಣವಾಗಿ ಪರಿವರ್ತನವನ್ನು ಹೊಂದಿವೆ. ಅಷ್ಟೇ ಅಲ್ಲ; ತನಗೇನಾದರೂ ಹಠಾತ್ತಾದ ಮರಣವುಂಟಾಗುವ ಸಂದರ್ಭದಲ್ಲಿ, ತನ್ನ ಸಂಸಾರವು ಹೇಗೆ ಸಂರಕ್ಷಿಸಲ್ಪಡುವುದೆಂಬೀ ದುರಂತ ಚಿಂತೆಯು ನೆನಪಾದುದೇ ಆದರೆ,—ಅವನಿಗೆಂದು ಅಶನವೂ ಇಲ್ಲ!—ಶಯನವೂ ಇಲ್ಲ!!

ಆದರೂ, ಈ ಯೋಚನೆಗಳ ಮಧ್ಯದಲ್ಲಿ, ಆಭರಣಗಳನ್ನುಳಿಯಿಸಿಕೊಳ್ಳುವುದು ಅಸಾಧ್ಯವೆಂದು ಅವನ ಮನಸ್ಸಿಗೆ ತೋರಿತು. ಹೇಗಾದರೂ ಪ್ರಯತ್ನಪಟ್ಟು ಆ ವಿಷಯವನ್ನು ಮುಂದಕ್ಕೆ ಹಾಕಬೇಕೆಂದು

ನಿರ್ಧರಿಸಿದವನಾಗಿ,—'ಮುಖರಜಿ ಮಹಾಶಯ! ಪದಾರ್ಥಗಳೆಲ್ಲ ನಿಮಗೇ ಸಂಬಂಧಪಟ್ಟುವು. ಯಾವುದನ್ನು ನಾನು ನಿಮ್ಮ ಮಗನಿಗೆ ಒಮ್ಮೆ ಕೈಯೆತ್ತಿ ದಾನಮಾಡಿರುವೆನೋ ಅದರಲ್ಲಿ ಇನ್ನು ಒಂದು ವೀಸ ತೂಕವನ್ನಾದರೂ ನನ್ನಲ್ಲಿಟ್ಟುಕೊಳ್ಳಬೇಕೆಂದು ನಾನು ಬಯಸುವುದಿಲ್ಲ. ಆದರೆ ಸ್ವಲ್ಪ ಕಾಲ ಕಾಯಬೇಕೆಂದು ಮಾತ್ರ ಕೇಳಿಕೊಳ್ಳುತ್ತೇನೆ. ಈಗಲೇ ಅವುಗಳೆಲ್ಲವನ್ನೂ ನಿನ್ನ ಸ್ವಾಧೀನಕ್ಕೆ ಕೊಡಲಾರೆನು.'—ಎಂದನು.

ಮುಖರಜಿ ಮಹಾಶಯನ ಮುಖವು ಶುಷ್ಕವಾಗಿ ಹೋಯಿತು. ಅವನ ಯೋಚನೆಯದೇನೆಂದರೆ:—'ಈ ಗೃಹಸ್ಥನು ಅವುಗಳನ್ನೆಲ್ಲ ಒತ್ತೆಯಿಟ್ಟಿರಬೇಕು! ಹಾಗಿದ್ದರೆ, ಸರ್ವನಾಶವೇ ಅಲ್ಲವೆ?'—ಎಂದು, ಗಟ್ಟಿಯಾಗಿ ಕೇಳಿದನು:—'ಅದೇಕೆ ಹಾಗೆ? ಅವುಗಳನ್ನು ಈಗಲೇ ಕೊಡಲು ಯಾವುದು ನಿನ್ನನ್ನು ತಡೆಯುತ್ತಿರುವುದು?'

ದೀರ್ಘಶ್ವಾಸವನ್ನು ಬಿಟ್ಟು, ಸುಬೋಧನು ಹೇಳತೊಡಗಿದನು:—'ನಮ್ಮ ವ್ಯಸನಕ್ಕಿನ್ನೂ ಆರು ತಿಂಗಳ ವಯಸ್ಸೂ ಆಗಿಲ್ಲ. ಸ್ವಲ್ಪ ತಾಳಿ! ನಮಗೆ ಸಮಯವನ್ನು ಕೊಡಿ! ಆಭರಣಗಳ ಪೆಟ್ಟಿಗೆಯಿಂದ ಅವುಗಳನ್ನೆಲ್ಲ ಹೊರಕ್ಕೆ ತೆಗೆಯುವರಾದರೂ ಯಾರು? ಅವುಗಳನ್ನು ಹುಡುಕುವುದೆಲ್ಲಿಯೆಂದು ನನಗೆ ಗೊತ್ತಿಲ್ಲ. ಇನ್ನು ನನ್ನ ಹೆಂಡತಿ—ಭಯಾನಕವಾದ ಆ ರಾತ್ರಿಯ ಮೊದಲ್ಗೊಂಡು ಇಂದಿನ ಪರ್ಯಂತವೂ ಹುಡುಗಿಯಿದ್ದ ಕೊಟ್ಟಡಿಯೊಳಗೆ ಕಾಲಿಟ್ಟವಳೇ ಅಲ್ಲ. ಮತ್ತೂ, ಹುಡುಗಿಗೆ ಸಂಬಂಧಪಟ್ಟ ಪದಾರ್ಥವನ್ನೇನಾದರೂ ಮುಟ್ಟುವುದೆಂದರೆ,—ಆ ಮೇಲೆ ಕೇಳಬೇಕಾದುದೇ ಇಲ್ಲ;—ಅನ್ನ ನೀರನ್ನೂ ಬಿಟ್ಟು, ಎದೆಯೊಡೆವಂತೆ ಅಳುತ್ತ ಕುಳಿತು ಬಿಡುವಳು. ಹೀಗಿರುವಾಗ, 'ಪೆಟ್ಟಿಗೆಯನ್ನು ತೆರೆದು ಆಭರಣಗಳನ್ನೀಚೆಗೆ ತಾ' ಎಂದು ನಾನು ಯಾವ ಬಾಯಲ್ಲಿ ಹೇಗೆ ಅವಳಿಗೆ ಹೇಳಲಿ?—ಕೆಲವು ವರ್ಷಗಳ ಹಿಂದೆ, ತ್ರಿವೇಣಿಯಲ್ಲಿ ಒಂದು ಮಗುವನ್ನು ಕಳೆದುಕೊಂಡೆವು. ಅದಂತೂ ಹಳೆಯದು ಹೋಗಲಿ! ಇದು—ಎರಡನೆಯ

ನಷ್ಟ. ನಮಗೆ ಅವಕಾಶವನ್ನು ಕೊಡಿ. ಸ್ವಲ್ಪ ಕಾಲದ ಮೇಲೆ, ನಿಮ್ಮ ವನ್ನೆಲ್ಲ ನಿಮಗೆ ಒಪ್ಪಿಸಿಬಿಡುವೆವು.'

ಹದಿನಾಲ್ಕು ವರ್ಷಗಳ ಹಿಂದೆ, ವಾರುಣೀಮಹೋತ್ಸವ ಕಾಲ ದಲ್ಲಿ ಸುಬೋಧನು ಸಂಸಾರಸಮೇತನಾಗಿ ಗಂಗಾಸ್ನಾನಕ್ಕೆ ತ್ರಿವೇಣಿಗೆ ಹೋಗಿದ್ದನು. ಆಗ, ಅಲ್ಲಿ ಎರಡು ವರ್ಷದ ಹೆಣ್ಣುಮಗುವನ್ನು ಕಳೆದು ಕೊಂಡಿದ್ದನು. ಆ ಸಂಗತಿಯನ್ನೇ ಈಗ ರಮಾನಾಥನಿದಿರಲ್ಲಿ ಹೇಳಿ ದುದು. ಆಭರಣಗಳನ್ನು ಕೊಡುವುದಕ್ಕೆ ಹಿಂಜರಿದುದರ ಕಾರಣವು ಕೇವಲ ಸತ್ಯ. ಆದರೆ ಲೋಕದಲ್ಲಿ ಎಲ್ಲರೂ ಅದನ್ನು ತೃಪ್ತಿಕರವಾದು ದೆಂದು ಗೌರವಿಸುವುದಿಲ್ಲ. ರಮಾನಾಥನು ಹಾಗೆಯೇ ಭಾವಿಸಿದನು. ಕೋಪದಿಂದ ಹೇಳಿದನು:—

'ಭ್ರಾತೃವೆ! ಶೋಕವೆಂಬುದು ನನ್ನದೂ ಅಲ್ಲವೆ? ಆದರೆ ನಾನೇನು ಮಾಡಬಲ್ಲೆನು? ಎಲ್ಲಿ ಸಂಸಾರವಿದೆಯೋ ಅಲ್ಲಿ ದುಃಖವೂ ಇರಲೇ ಬೇಕು. ಸಿಂಹಾಸನಾರೂಢನಾದ ರಾಜನೇ ಆಗಲಿ, ಪಥದ ಪಾರ್ಶ್ವದಲ್ಲಿ ಬಿದ್ದಿರುವ ಭಿಕ್ಷುಕನೇ ಆಗಲಿ,—ಯಾರೂ ಅಂತಹ ಶೋಕದಿಂದ ಮುಕ್ತ ರಾದುದನ್ನು ಇದುವರೆಗೂ ಕಂಡು ಕೇಳಿಮದಿಲ್ಲ. ಆದರೆ ಲೋಕಾನು ಭವವುಳ್ಳ ಮನುಷ್ಯನು ಅಂತಹ ವ್ಯಸನವನ್ನು ಎರಡು ದಿನಗಳಲ್ಲಿಯೆ ಮರೆತುಬಿಡುವುದಿಲ್ಲವೆ? ಉಂಡು, ತಿಂದು, ನಕ್ಕು, ನಿದ್ರಿಸಿ,—ತನ್ನ ನಿತ್ಯ ಕೃತ್ಯಗಳಲ್ಲಿ ಪುನಃ ಮಗ್ನನಾಗುವುದಿಲ್ಲವೆ?—ನಿನ್ನ ಹೆಂಡತಿ ಅಷ್ಟರ ಮಟ್ಟಿಗೂ ಶೋಕಪೀಡಿತಳೆಂದು ನೀನು ಹೇಳಿಕೊಳ್ಳುವುದಾದರೆ,–ನನ್ನಿಂದ ಅವಳಿಗೆ ಯಾವ ತೊಂದರೆಯೂ ಬೇಡ! ನೀನೇ ಬೀಯಗದ ಕೈಯನ್ನು ತೆಗೆದುಕೊಂಡು ಪೆಟ್ಟಿಗೆಯ ಬಾಯನ್ನು ಮೆಲ್ಲಗೆ ತೆರೆದು, ಆಭರಣಗಳನ್ನು ಜಾಗ್ರತೆಯಾಗಿ ಈಚೆಗೆ ತಂದುಬಿಡು!'

ಸುಬೋಧಚಂದ್ರನು ಮೌನದೊಡನೆ ಧೂಮಪಾನ ಮಾಡುತ್ತಿ ದ್ದನು. ರಮಾನಾಥನವನನ್ನು ಒತ್ತಾಯಪಡಿಸಲಾರಂಭಿಸಿದನು;–ಆದರೂ ಸುಬೋಧನು ಆಭರಣಗಳನ್ನುಳಿಯಿಸಿಕೊಳ್ಳುವ ಆಶೆಯನ್ನು ಬಿಡಲಾರ

ದವನಾಗಿದ್ದನು. ದುಃಖದಿಂದ ಹೇಳಿದನು:—'ಒಂದು ವರ್ಷ ಪರ್ಯಂತ ನೀನು ಸುಮ್ಮನಿರು; ಮಹಾಶಯ! ಅನಂತರ ಬಂದು ತೆಗೆದುಕೊಂಡು ಹೋಗಬಹುದು. ಅಲ್ಲವಾದರೆ,—ನೀನು ಅಪೇಕ್ಷಿಸುವ ಪಕ್ಷಕ್ಕೆ,—ನಾನೇ ನಿಮ್ಮ ಮನೆಯ ವರೆಗೆ ಬಂದು, ಅವುಗಳನ್ನು ನಿನಗೆ ಒಪ್ಪಿಸುವ ಕಾರ್ಯ ಭಾರವನ್ನು ವಹಿಸಿಕೊಳ್ಳುವುದಕ್ಕೂ ಆಕ್ಷೇಪವಿಲ್ಲ.'

ಕಠೋರಭಾವದಿಂದ ರಮಾನಾಥನು—'ಮನುಷ್ಯನ ಜೀವನವೆಂಬುದು ತಾವರೆಯೆಲೆಯ ನೀರಿನ ಹಾಗೆ! ಇಂದು ಇಲ್ಲಿದೆ; ನಾಳೆ ಇನ್ನೆಲ್ಲಿಯೋ? ಒಂದು ತಾಸಿನ ಮಟ್ಟಿಗಾದರೂ ನಿಶ್ಚಯವಾಗಿರಲಾಗುವುದಿಲ್ಲ.—ಇನ್ನೂ ಒಂದು ವರ್ಷದ ವರೆಗೆ ನಾನು ಬದುಕಿರುವೆನೆಂಬುದಕ್ಕೆ ಏನು ಆಧಾರ?'

ಸುಬೋಧನು ತನ್ನಲ್ಲಿಯೇ,—'ನೀನು ಬದುಕದೆ ಹೋದರೆ, ಆಭರಣಗಳ ಬೆಲೆ ನಿನ್ನ ಶ್ರಾದ್ಧಕ್ಕಾಗಿ ವಿನಿಯೋಗಿಸಲ್ಪಡುವುದು!'—ಎಂದುಕೊಂಡವನಾಗಿ,—'ಆ ಸಂದರ್ಭದಲ್ಲಿ, ಆಭರಣಗಳು ನಮ್ಮ ರಕ್ಷಣೆಯಲ್ಲಿಯೇ ಇದ್ದು, ನಿಮ್ಮ ಮುಮ್ಮಗಳ ಲಗ್ನಕಾಲದಲ್ಲಿ ಉಪಯೋಗಿಸಲ್ಪಡುವುವು!'—ಎಂದು ಪ್ರಕಾಶವಾಗಿ ಹೇಳಿದನು.

'ಹಾಗಾದರೇನು? ನನ್ನ ಮುಮ್ಮಗಳು ಯಾವಾಗಲೂ ನಿನ್ನ ಬಳಿಯಲ್ಲಿಯೆ ಇರುವಳೆಂದು ತಿಳಿದಿರುವೆಯಾ? ಸ್ವಲ್ಪ ದೊಡ್ಡವಳಾಗುತ್ತಲೇ, ನಾನು ಬಂದು ಕರೆದುಕೊಂಡು ಹೋಗುವುದಿಲ್ಲವೋ? ನನ್ನ ಹಿರಿ ಸೊಸೆ ಮಗುವನ್ನು ನೋಡಬೇಕೆಂದು ಜೀವ ತೆಗೆದುಕೊಳ್ಳುತ್ತಾಳೆ! ಮನೆ ಬಿಟ್ಟು ಹೊರಡುವಾಗಲೇ, ಅವಳು ಹೇಳಿದಳು—'ಅಪ್ಪ! ನಿನ್ನ ಜತೆಯಲ್ಲಿ ನಾನೂ ಬಂದು, ಒಂದು ಬಾರಿ, ಆ ಮಗುವನ್ನು ನೋಡಲೆ?' ಎಂದು!—ನೀವೇನೊ 'ಹುಡುಗಿಯ ಮದುವೆ'ಯೆಂದು ಈಗಲೇ ತಲೆಗೆ ಹಚ್ಚಿಕೊಂಡಿದ್ದೀರಿ. ಮಗುವೆಲ್ಲಿ? ಲಗ್ನವೆಲ್ಲಿ?—ಇದೆಲ್ಲ ಕೇವಲ ಭ್ರಮೆಯಲ್ಲವೆ? ಅಥವಾ, ಆ ಮಗು ಅಷ್ಟು ದೀರ್ಘಕಾಲ ಬದುಕಿ ಬಾಳುವುದೆಂದು ಯಾರು ಧೈರ್ಯವಾಗಿ ಹೇಳಬಲ್ಲರು? ಈಗ ನಾನು ಆ ಮಗುವಿನ ಮುಖ

ವನ್ನು ಪರೀಕ್ಷಿಸಿದುದರಲ್ಲಿ, ವಿಶೇಷವಾದ ಆಶೆಯೇನೂ ಉಳಿದಿರುವ ಹಾಗೆ ಕಂಡುಬರುವುದಿಲ್ಲ. ತಾಯಿ ಸತ್ತ ಮಕ್ಕಳು ಬದುಕುವುದು ಅತಿ ವಿರಳ!'

ಮನಸ್ಸಿಟ್ಟು ಕೇಳಿದ್ದರೆ, ಸುಬೋಧನಿಗೆ ವ್ಯಸನವುಂಟಾಗದೆ ಹೋಗುತ್ತಿರಲಿಲ್ಲ. ಅದನ್ನೆಲ್ಲ ಪೂರ್ಣವಾಗಿ ಲಕ್ಷ್ಯಮಾಡದಿದ್ದುದರಿಂದ, ಮಾತಾಡಲು ಶಕ್ತನಾದನು. ಹೇಳಿದನು:—'ಆಗಲಿ! ಮಹಾಸ್ವಾಮಿ! ಮಗುವನ್ನು ಕರೆವುದಕ್ಕೆಂತೂ ಬರುವಿರಷ್ಟೆ! ಆಗಲೇ ಆಭರಣಗಳನ್ನೂ ತೆಗೆದುಕೊಂಡು ಹೋಗಿ!'

ಕೇಳಿ, ರಮಾನಾಥನಿಗೆ ಸಿಟ್ಟು ಬಂದಿತು.—'ಹೋ! ಭ್ರಾತೃವೆ! ನನ್ನಲ್ಲಿ ನಿನಗೆ ಹೀಗೂ ಅಪನಂಬಿಕೆಯೋ? ಆಭರಣಗಳನ್ನು ಕೊಡದೆ, ವೃದ್ಧ ಬ್ರಾಹ್ಮಣನ ಸಿಟ್ಟಿಗೂ ಶಾಪಕ್ಕೂ ಪಾತ್ರನಾಗುವುದಿದು ನಿನ್ನ ಭಾವೀ ಅಭ್ಯುದಯಕ್ಕೆ ಒಳ್ಳೆದೆಂದು ತಿಳಿದುಬಿಟ್ಟೆಯೋ?-ಹಾ!'-ಎಂದು ಕೂಗಿದನು.

ಇದಕ್ಕೆ ಮೊದಲೇ ರಮಾನಾಥನ ಗುಣನಡತೆಗಳನ್ನು ಬಲ್ಲವನಾಗಿದ್ದುದರಿಂದ, ತನ್ನ ಉದ್ದೇಶ ಪೂರ್ತಿಯಾಗದೆ ಎಷ್ಟು ಮಾತ್ರಕ್ಕೂ ಅವನು ಹೊರಡತಕ್ಕವನಲ್ಲವೆಂದು ಸುಬೋಧನು ಖಂಡಿತಮಾಡಿಕೊಂಡನು. ಮುಂದಣ ತರ್ಕದಿಂದ ಫಲವೇನೂ ಇಲ್ಲವೆಂದು, ಹೇಳಿದನು:—'ಹಾಗಾದರೆ, ತೆಗೆದುಕೊಂಡು ಹೋಗಬಹುದು!'

ಮುದುಕನ ಮುದಿ ಮೊಗವರಳಿತು!—'ಮಧ್ಯಾಹ್ನದ ಭೋಜನವನ್ನು ಮುಗಿಯಿಸಿಕೊಂಡು, ಮನೆಗೆ ಹೊರಡುತ್ತೇನೆ.—ಪಾಪಿದೇಹ! ಚಂಚಲ ಮನಸ್ಸು! ಯಾವಾಗಲೂ ಪ್ರಾಪಂಚಿಕ ವಿಚಾರವೇ ವಿಚಾರ!— ಇಷ್ಟು ದೂರ ಬಂದೂ, ಗಂಗಾಸ್ನಾನವನ್ನು ಮಾಡಬೇಡವೇ? ಈಗಲೇ ನದಿಗೆ ಹೊರಡುತ್ತೇನೆ!—ಮತ್ತೆ, ಮಹಾಶಯ! ನಾನು ಬರುವುದರೊಳಗಾಗಿ ಆಭರಣಗಳೆಲ್ಲವೂ ಸಿದ್ಧವಾಗಿರುವುದಷ್ಟೆ!'—ಎಂದು ನಕ್ಕನು.

ಸ್ನಾನವು ಮುಗಿದು, ಭಯಭಕ್ತಿಯಿಂದ ರಮಾನಾಥನು ಘಾಟಿನ ಸೋಪಾನಾವಳಿಗಳ ಮೇಲೆ ಮೂಗನ್ನು ಹಿಡಿದು ಕುಳಿತನು. ಇಂದವನ

ಪುಣ್ಯದಿನ! ದೇವತೆಗಳೂ, ಗ್ರಹಾಧಿಪತಿಗಳೂ ಅವನಲ್ಲಿ ಮಹಾನುಗ್ರಹವನ್ನು ತೋರಿದ ಶುಭದಿವಸ! ಇತರ ದಿವಸಗಳಲ್ಲಿ ಮಾಡುತ್ತಿದ್ದಂತೆ, ಬಡ್ಡಿಯ ಲೆಕ್ಕಾಚಾರವನ್ನೇನೂ ಮಾಡದೆ, ನಿಜವಾದ ಜಪವನ್ನೇ ಮಾಡಬೇಕಾದ ಸುದಿವಸ! ಮರೆತುಹೋದ ಜಪವನ್ನು ಜ್ಞಾಪಕಮಾಡಿಕೊಂಡಾದರೂ, ಜ್ಞಾಪಕವಾಗದೆ ಇದ್ದುದನ್ನು ಲೋಪಿಸಿ ಗೊತ್ತಿದ್ದುದನ್ನೇ ಹೇಳಿಯಾದರೂ, ದೇವರನ್ನು ಸ್ತೋತ್ರಮಾಡುವ ಮಂಗಲದಿವಸ!—ಅತಏವ, ಅವನ ಇಂದಿನ ಜಪವು ಇಷ್ಟೊಂದು ಉದ್ದವಾಗಿದ್ದಿತು; ಇಷ್ಟೊಂದು ಹೊತ್ತಿನ ವರೆಗೆ ನಡೆಯಿತು!—ಆದರೆ, ಏತನ್ಮಧ್ಯೇ, ಸುಬೋಧಚಂದ್ರನು ನಗನಾಣ್ಯಗಳನ್ನೆಲ್ಲ ಹೊರಗೆ ತಂದಿಡುವನೋ ಇಲ್ಲವೋ ಎಂಬ ಅನುಮಾನವು ಮಾತ್ರ ಆ ಏಕಾಗ್ರಚಿತ್ತತೆಯ ಜಪದ ಜತೆಯಲ್ಲಿ ಅಗೋಚರವಾಗಿಯೇ ಬಂದು ಹೋಯಿತೇನೋ,—ಹೇಳುವರಾರು?

ಮನೆಗೆ ಹಿಂದಿರುಗಿದವನಾಗಿ, ಭೋಜನವನ್ನು ಮಾಡಿದನು. ಇನ್ನು ಸಾವಕಾಶವನ್ನು ಸಹಿಸಲಾಗುವುದಿಲ್ಲ. ಆತುರ!—ಅತ್ಯಾತುರದಿಂದ, 'ಭ್ರಾತೃವೆ! ನಗಗಳೆಲ್ಲಿ? ಇಲ್ಲಿ ಕೊಡು! ದುರ್ಗೆಯ ಅನುಗ್ರಹದಿಂದ ನಾನೀಗಲೇ ಹೊರಟುಬಿಡುತ್ತೇನೆ!'—ಎಂದನು.

ಸುಬೋಧನು ಕೊಟ್ಟಡಿಯೊಳಗೆ ಹೋದವನು ಬಹಳ ಹೊತ್ತಿನ ವರೆಗೂ ಬರಲೇ ಇಲ್ಲ.—'ಕೊಡುವುದವನವುಗಳನ್ನು ನಿಜವೇ ಸರಿ. ಆದರೆ ಯಾವ ಕಾರಣದಿಂದಲೋ ಆ ಅಶುಭನಿಮಿಷವನ್ನು ಮತ್ತೂ ಮತ್ತೂ ಮುಂದಕ್ಕೆ ನೂಕುತ್ತಿರುವನು!'—ಎಂದು ಯೋಚಿಸಿ ರಮಾನಾಥನು ಹರ್ಷಭರದಿಂದ ಹಾಡಲುಪಕ್ರಮಿಸಿದನು—

॥ ರಾಗ | ಕಲ್ಯಾಣಿ | ಆದಿ ॥

**'ಹರಿಕಥಾಶ್ರವಣ ಮಾಡೊ | ಇಥಾ ವೈಕುಂಠಕಿದು ನೋಡೊ ॥'—॥**

ಸುಬೋಧಚಂದ್ರನು ಹಿಂದಿರುಗಿದನು. ಆದರೆ ಕೈಯಲ್ಲಿ ಏನೂ ಇಲ್ಲ! ಹಠಾತ್ತಾಗಿ ಸಂಗೀತವು ನಿಂತುಹೋಯಿತು! ಆಶ್ಚರ್ಯದಿಂದ—'ಏನಾದುದು?'

'ಅದಾಗುವುದಿಲ್ಲ.'

'ಅರ್ಥವೇನು?'

ಸುಬೋಧನು ವಿವರಿಸತೊಡಗಿದನು.—'ಮುಖರಜಿಮಹಾಶಯ! ನಿಮಗಂತೂ ಆಭರಣಗಳನ್ನು ಕೊಡಲು ನಾನು ಸಿದ್ಧನಾಗಿದ್ದೆನು! ಆ ವಿಷಯವನ್ನು ಕುರಿತು ನನ್ನ ಹೆಂಡತಿಯೊಡನೆ ಪ್ರಸ್ತಾವಿಸಿದಾಗ, ಅವಳು ಮೊದಲುಮೊದಲು ಬಹಳ ಅತ್ತಳು. ಅನಂತರ ಹೀಗೆಂದಳು;— 'ಬಿಯಗದ ಕೈ ಕಾಣುವದಿಲ್ಲ! ಅದು ನನ್ನ ಮಗುವಿನ ಸೊಂಟದಲ್ಲಿಯೇ ಇದ್ದಿತು. ಪ್ರಾಯಶಃ, ಚಿತೆಯ ಜತೆಯಲ್ಲಿ, ಅದೂ ಭಸ್ಮವಾಯಿತೇನೋ?'—ಎಂದು.'

ರಮಾನಾಥನೀ ಕಥೆಯನ್ನು ನಂಬಲಿಲ್ಲ! ರೋಷವಶನಾಗಿ,— 'ಬಿಯಗದ ಕೈ ಇಲ್ಲದಿದ್ದರೆ ಪೆಟ್ಟಿಗೆಯನ್ನೊಡೆಯಬೇಕು. ಆಭರಣಗಳನ್ನು ಕೊಡದೆ ನಾನು ಬಿಡುವನಲ್ಲ. ತಿಳಿದಿರಲಿ!'—ಎಂದನು.

'ನೀನು ಬಿಡುವನಲ್ಲವಾದರೆ,—'

'ಬಿಡುವುದೆಲ್ಲಿ ಬಂತು? ಇಲ್ಲಿಂದ ಹೋಗುವುದೇ ಇಲ್ಲ!'

'ಬಹಳ ಸಂತೋಷ! ಇಲ್ಲಿಯೇ ಇರಬೇಕು! ಬಿಯಗದ ಕೈ ಇಲ್ಲದಿರುವುದರಿಂದ ನನ್ನ ಯತ್ನವೇನಿದೆ ಹೇಳು! ಇನ್ನು,—ಕಮ್ಮಾರನನ್ನು ಕರೆದು, ಪೆಟ್ಟಿಗೆಯನ್ನೊಡೆಯಿಸಬೇಕು! ಅದರಿಂದ ನನ್ನ ಹೆಂಡತಿಯ ದುಃಖವನ್ನು ಹೆಚ್ಚಿಸಬೇಕು! ಹೀಗೆ, ನನ್ನನ್ನು ಬಲಾತ್ಕರಿಸುವುದಿದು ನಿನಗೆ ಯೋಗ್ಯವಾದುದೋ? ಅದನ್ನು ನೀನೀಗ ತಪ್ಪಿಸಕೂಡದೋ? ಕೊಂಚ ಯೋಚಿಸು!'

ಸುಟ್ಟ ಮುಖವನ್ನು ಮಾಡಿಕೊಂಡು, ಆ ಕೆಟ್ಟ ಮುದುಕನು ಕೂಗತೊಡಗಿದನು:—'ಏನು ಹೇಳುವೆ? ಇಂತಹ ನಡತೆ ನಿನಗೆ ಯೋಗ್ಯವೋ? ಬ್ರಾಹ್ಮಣನನ್ನು ವಂಚಿಸುವುದು ನ್ಯಾಯವೋ? ಆಭರಣಗಳನ್ನು ಒಳ್ಳೆಯ ಮಾತಿನಲ್ಲಿ ಕೊಡುವೆಯೋ ಇಲ್ಲವೋ,—ಸ್ಪಷ್ಟ

ವಾಗಿ ಹೇಳಿಬಿಡು! ಕೊಡುವುದಿಲ್ಲವಾದರೆ, ಇದೋ! ಈಗಲೇ, ಇಲ್ಲಿಯೇ ನನ್ನ ಜನಿವಾರವನ್ನು ಹರಿದುಹಾಕಿ, ನಿನ್ನನ್ನು ಶಪಿಸುತ್ತ ಹೊರಟು ಹೋಗುತ್ತೇನೆ. ಆ ಶಾಪವೇ ನಿನ್ನ ಸರ್ವನಾಶಕ್ಕೆ ಮೂಲವೆಂದು ತಿಳಿ. ಅದೂ ಮೂರು ರಾತ್ರಿಗಳೊಳಗಾಗಿ!'

ರಮಾನಾಥನ ಅಸಭ್ಯವಾದ ನಡತೆಯಿಂದ ಸುಬೋಧನು ಅಪಮಾನಿತನಾಗಿ, ಹೋಗಿ, ಒಬ್ಬ ಕಮ್ಮಾರನನ್ನು ಕರೆತಂದು, ಪೆಟ್ಟಿಗೆಯನ್ನೊಡೆಯಿಸಿದನು. ಕ್ರೂರಕೃತ್ಯವನ್ನು ಕಣ್ಣಾರ ಕಂಡು ಸಹಿಸಲಾರದೆ, ಸುಬೋಧಸತಿ ಮಹತ್ತರವಾದ ಶೋಕಯಾತನೆಯಿಂದ ನೆಲದ ಮೇಲೆ ಬಿದ್ದು ಗೋಳಾಡಿದಳು.

ಆಭರಣಗಳೊಡನೆ ಬಿಯಗನು ಹೊರಟುಹೋದ ಬಳಿಕ, ಸುಬೋಧನು ಸುಮ್ಮನೆ ಮಲಗಿಕೊಂಡನು. ಆ ದಿನ, ಗಂಡನಾಗಲಿ, ಹೆಂಡತಿಯಾಗಲಿ, ಆಹಾರವನ್ನು ಸ್ವೀಕರಿಸಿದುದಿಲ್ಲ.

---

(iii)

ಪಾಠಕಮಹಾಶಯ! ಕಣ್ಣೆದಿರಿರುವುದೇನು? ದೀರ್ಘವಾದ ತೃಣರಾಶಿ! ದಿಗಂತವ್ಯಾಪಿಯಾದ ಕಾನನವೃಕ್ಷ! ಸಂಕುಚಿತವಾದ ಗ್ರಾಮಪಥ! ಸುಜಲ-ಸುಫಲ ಧಾನ್ಯಕ್ಷೇತ್ರ! ಲಾಂಗೂಲವನ್ನೆತ್ತಿಕೊಂಡೋಡುವ ಎಳಗರು! ಗಾಳವನ್ನಿಕ್ಕಿರುವ ಬೆಸ್ತ! ಜಲಕ್ರೀಡೆಯನ್ನಾಡುವ ದುಷ್ಟಬಾಲಕ! ಪಾತ್ರೆಬೆಳಗುತ್ತಿರುವ ಗ್ರಾಮಸುಂದರಿ! ಮತ್ಸ್ಯಹಸ್ತೆಯಾದ ಕೃಷಿಕರಮಣಿ! ಇನ್ನೂ, ದೂರದಲ್ಲಿ,—ಜಲಭರಿತವಾದ ಕಬ್ಬಿನ ತೋಟ! ಹಕ್ಕಿಯಂತೆ ತೋರುವ ತರಣಿ! ಇವುಗಳೇ ಅಲ್ಲವೆ?—ಹಾಗಾದರೆ ನಾವೀಗಲೆಲ್ಲಿ? ನವಗ್ರಾಮದ ಸಮೀಪದಲ್ಲಿ,—ಭಾಗಿರಥಿಯ ತೀರದಲ್ಲಿ!

ಅದು ಉಷಃಕಾಲ. ಪಕ್ಷಿಗಳಿನ್ನೂ ತಮ್ಮ ಗಾನವನ್ನು ತೊಡಗಿರಲಿಲ್ಲ. ಛಿದ್ರ ವಸ್ತ್ರಗಳನ್ನು ಧಾರಣಮಾಡಿ, ತಲೆಗೊಂದು ಮುಂಡಾ

ಸನ್ನು ಸುತ್ತಿಕೊಂಡಿದ್ದ ವ್ಯಕ್ತಿಯೊಬ್ಬನು ತೀರವನ್ನು ಬಿಟ್ಟು ಮನೆಯ ಕಡೆಗೆ ಮೆಲ್ಲನೆ ನಡೆದುಬರುತ್ತಿದ್ದನು. ಹಿಂದಿನ ರಾತ್ರಿಯ ಮಳೆಯ ನೀರು ವೃಕ್ಷಶಾಖೆಗಳಿಂದ 'ತಟತಟನೆ' ತೊಟ್ಟಿಕ್ಕುತ್ತ ಆ ವ್ಯಕ್ತಿಯ ಬಟ್ಟೆಗಳನ್ನೆಲ್ಲ ಒದ್ದೆಮಾಡಿದ್ದಿತು.

ಕ್ರಮಶಃ ಅವನು ಹೆಬ್ಬಾಗಿಲ ಬಳಿಗೆ ಬಂದನು. ಅದು ಮುಚ್ಚಲ್ಪಟ್ಟಿದ್ದಿತು. ಇಕ್ಕಡೆಯಲ್ಲಿಯೂ ಇಟ್ಟಿಗೆಗಳಿಂದ ಕಟ್ಟಿದ ಎರಡು ಆಸನಗಳು. ಅಶ್ರದ್ಧೆಯಿಂದ ಎಷ್ಟೋ ಇಟ್ಟಿಗೆಗಳು ಜಾರಿ ಕೆಳಗೆ ಬಿದ್ದಿದ್ದುವು. ಪ್ರಯತ್ನವಿಲ್ಲದೆ ಬೆಳೆದಿದ್ದ ಹೂವಿನ ಗಿಡಗಳು ನೂತನಕುಸುಮರಾಶಿಯಿಂದ ನಾಸಿಕ-ನೇತ್ರಗಳನ್ನಾಕರ್ಷಿಸುತ್ತಿದ್ದುವು.

ದರಗಾದ ಸ್ವರದಿಂದ ರಮಾನಾಥನು ಕೂಗಿದನು: 'ಶಶಿ!' ಮೂರುಬಾರಿ ಕೂಗಿದ ಮೇಲೆ ಉತ್ತರವು ದೊರೆಯಿತು;—'ಬಂದೆ!'

ಶಶಿ ಓಡಿಬಂದವನಾಗಿ ಬಾಗಿಲನ್ನು ತೆರೆದನು. ನೋಡಿದನು. ಆಶ್ಚರ್ಯದಿಂದ ಮಾತಿಲ್ಲದೆ ನಿಂತುಬಿಟ್ಟನು. ಒಂದು ವಾರದಲ್ಲಿ ರಮಾನಾಥನ ಸ್ಥಿತಿಯೆಷ್ಟು ಬದಲಾಗಿಹೋಗಿದೆ!—ಕೊಡೆಯಿಲ್ಲ; ಕೋಲಿಲ್ಲ; ಚೀಲವಿಲ್ಲ;—ಆ ಮೇಲೆ ಈ ಛಿದ್ರವಸ್ತ್ರಗಳೆಲ್ಲಿಂದ? ಶಶಿಗೆ ವಿಷಯವೊಂದೂ ತಿಳಿಯಲೇ ಇಲ್ಲ. ಅವನು ಜಾಡರವನು. ಕೆಲಸಕ್ಕೆ ಇರುವವನು. ಸಂಬಳವಿಲ್ಲ. ಎರಡು ಹೊತ್ತೂ ಅಷ್ಟು ಅನ್ನ ಮಾತ್ರ. ರಮಾನಾಥನು ಕೇಳಿದನು;—'ಮನೆಯಲ್ಲಿ ಎಲ್ಲರೂ—?'

'ಕ್ಷೇಮ. ಆದರೆ ತಮ್ಮ ಕೊಡೆಕೋಲು?'

ಸಪ್ಪನೆ ಮೊಗದಿಂದ ರಮಾನಾಥನು ಹುಡುಗನನ್ನು ಒಂದು ಬಾರಿ ನೋಡಿದನು. ಶಶಿ ಹೇಳಿದನು:—'ಅಯ್ಯಾ! ಅವುಗಳಿಲ್ಲದೆ ಹಿಂದಿರುಗಿದಿರೆಂದು ತೋರುತ್ತದಲ್ಲವೆ?'

ಅಳುತ್ತ ಮುದುಕನು-'ಅಹುದು; ಶಶಿ! ಅದೆಲ್ಲ ಹೋಯಿತು!'—ಎಂದನು.

ಬಹುಕಾಲದಿಂದಲೂ ಶಶಿಗೆ ಆ ಬಿದಿರುದೊಣ್ಣೆಯ ಮೇಲೆ ಕಣ್ಣಿದ್ದಿತು. ಅನುಕೂಲವಾದ ಸಮಯವನ್ನು ನೋಡಿ ಅದನ್ನು ಜಾರಿಸಿ ಭದ್ರಪಡಿಸಬೇಕೆಂದು ಅನೇಕ ದಿನಗಳಿಂದ ಹೊಂಚುಹಾಕುತ್ತಿದ್ದನು. ಕಾರಣ ಅದರ ವಿಷಯದಲ್ಲಿ ಸ್ವಲ್ಪ ವ್ಯಸನವುಂಟಾಯಿತು. ಇನ್ನಾವನೋ ಒಬ್ಬ ಸೇವಕನು ಮೋತಿಜಂಗಿನಲ್ಲಿ ಅದನ್ನು ಹಾರಿಸಿರಬೇಕೆಂದು ಅವನು ಖಂಡಿತಮಾಡಿಕೊಂಡನು. ಆದರೆ ಕೊಡೆಯನ್ನೂ ಅವನೇ ತೆಗೆದುಕೊಂಡನೊ? ಒಮ್ಮೆ, ರಮಾನಾಥಮುಖರಜೀಯವರು ಶಶಿಯ ಮೇಲೆ ಸುಪ್ರೀತರಾಗಿ, ಅವರ ಜನ್ಮದಲ್ಲಿ ಮೊದಲುಬಾರಿ ಅದೇ ಕೊಡೆಯನ್ನು ಬಹುಮಾನವಾಗಿ ಅವನಿಗೆ ಕೊಡಬೇಕೆಂದು ಬಲುದೊಡ ಮನಸ್ಸು ಮಾಡಿಕೊಂಡಿದ್ದರು. ಅದಕ್ಕಾದರೊ ಷಷ್ಟಿಪೂರ್ತಿಶಾಂತಿಗೆ ಬಹುದಿನಗಳಿರಲಿಲ್ಲ. ಕಂಡರೆ, ಸುಧಾಮನ ಅವಲಕ್ಕಿಗಂಟಿನ ನೆನಪಾಗುವುದು. 'ಅಂತಹದಕ್ಕೂ ಒಬ್ಬ ಕಳ್ಳನೆ?'—ಎಂದವನು ಅತ್ಯಾಶ್ಚರ್ಯಪಟ್ಟನು. ಕೊನೆಗೆ ಯೋಚಿಸಿದನು:—'ಕೊಡೆ ಕೇವಲ ನಿಷ್ಪ್ರಯೋಜನವಾದರೂ, ಕೋಲನ್ನು ಕಳಚಿ, ಕಡ್ಡಿಗಳಿಂದ ಬಿಲ್ಲುಗಳನ್ನು ಮಾಡಲು ಕದ್ದಿರಬಹುದು.'—ಎಂದು.

ರಮಾನಾಥನು ತನ್ನ ಕೊಟ್ಟಡಿಗೆ ಹೋಗಿ ಕುಳಿತುಕೊಂಡನು. ಶಶಿ ಬೆಂಕಿಯನ್ನು ಮಾಡಿ, ಹುಕ್ಕೆಯನ್ನು ಸಿದ್ಧಪಡಿಸಿ, ಯಜಮಾನನ ಮುಂದಿಟ್ಟನು. ಎಂದಿಗೂ ಇಲ್ಲ—ಇದಕ್ಕೆ ಮೊದಲು ತಂಬಾಕಿನ ವಿಚಾರದಲ್ಲಿ ಅವನೀ ರೀತಿಯಾಗಿ ಜುಗುಪ್ಸೆಯನ್ನು ತೋರಿದುದು! ಅಧೋನೇತ್ರನಾಗಿ, ತಲೆಯನ್ನಲ್ಲಾಡಿಸುತ್ತ, ದೀರ್ಘಶ್ವಾಸದೊಡನೆ— 'ಹಾ! ಹಾ! ಹಾ! ಸರ್ವನಾಶವಾಯಿತು!'—ಎಂದನು. ಕೇಳಿ, ಶಶಿ ಗಾಬರಿಯಾದನು. ಅಷ್ಟರಲ್ಲಿ ಹಿರಿಸೊಸೆ ಪಡಸಾಲೆಗೆ ಬಂದಳು. ಸೇವಕನು ಯಜಮಾನರ ಸ್ಥಿತಿಯನ್ನು ಅವಳಿದಿರಲ್ಲಿ ವರ್ಣಿಸಿ ಹೇಳಿದನು. ಅವಳು ಹೇಳಿದಳು;—'ಹೋಗು! ಅವರನ್ನು ಬೇಗನೇ ಎಬ್ಬಿಸು!'

ಹಿರಿಮಗನ ಹೆಸರು ನಾಗೇಂದ್ರ. ಕಣ್ಣುಗಳನ್ನುಜ್ಜಿಕೊಳ್ಳುತ್ತ, ಅವನು ತಂದೆಯ ಕೊಟ್ಟಡಿಗೆ ಹೋದನು. ನೋಡುತ್ತಲೇ ಆಶ್ಚರ್ಯ

ದಿಂದ ಕೂಗಿದನು;—'ಏನಿದು? ನೀನೇಕೆ ಹೀಗೆ ಬದಲಾಯಿಸಿದ್ದೀ? ಏನಾದರೂ ವಿಪತ್ತು ಸಂಭವಿಸಿತೇ ಏನು?'

ತಲೆಯಲ್ಲಾಡಿಸುತ್ತ, ದೀನಸ್ವರದಿಂದ—'ಹಾ! ಹಾ! ಹಾ! ನಾನು ಕೆಟ್ಟೆ! ಕೆಟ್ಟೆ!'—ಎಂದನು.

'ಏನಾಯಿತು? ಅವರೇನು ಆಭರಣಗಳನ್ನು ಕೊಡುವದಿಲ್ಲ ವಂತೋ?'

'ಕೊಟ್ಟರಪ್ಪಾ ಕೊಟ್ಟರು! ಕೆಟ್ಟೆನಪ್ಪಾ ಕೆಟ್ಟೆ!'

ತಂದೆ ಇನ್ನೂ ಏನನ್ನಾದರೂ ಹೇಳುವನೆಂದು ನಾಗೇಂದ್ರನು ಆತುರದಿಂದ ಕಾದುಕೊಂಡಿದ್ದನು. ಮುದುಕನಾದರೋ, ಅದನ್ನೇ ಅಸ್ಪಷ್ಟವಾಗಿ ಮೆಲ್ಲಗೆ ಉಚ್ಚರಿಸುತ್ತಿದ್ದನಲ್ಲದೆ, ಮತ್ತೇನೂ ಇಲ್ಲ.

ಕೊನೆಗೆ ನಾಗೇಂದ್ರನೆಂದನು:—'ಒಳ್ಳೆಯದು! ಆದುದೇನು?'

ಮುದುಕನ ಉತ್ತರವು ಮೊದಲಂತೆ. ನಾಗೇಂದ್ರನು ಮನ ನೊಂದವನಾಗಿ,—'ನಡೆದುದೇನು? ಸ್ಪಷ್ಟವಾಗಿ ಹೇಳಲಾರೆಯಾ?'

'ಅವು ಹೋದುವಪ್ಪಾ ಹೋದುವು!'

'ಹೇಗೆ ಹೋದುವು? ಕಳುವಾದುವೊ?'

'ಇಲ್ಲ!'

'ಮತ್ತೇನು? ಡಕಾಯಿತರ ಪಾಲಾದುವೊ?'

'ಇಲ್ಲ!'

'ಹಾಗಾದರೆ?'

ಬಹುಕಷ್ಟದಿಂದ ರಮಾನಾಥನ ಬಾಯಿಂದ ಈ ಮಾತು ಹೊರಗೆ ಬಂದಿತು:—'ಚಂದಾವರಿಯ ಬಹದ್ದೂರಚಕ್ರವರ್ತಿ ಅವುಗಳನ್ನು ಅಪ ಹಾರಮಾಡಿದ್ದಾನೆ!'

'ಯಾರವನು? ಪೆಟ್ಟಿಗೆಯನ್ನು ಹೇಗೆ ತೆಗೆದುಕೊಂಡನು? ಸುಲಿಗೆ ಮಾಡಿದನೋ? ಪೋಲೀಸಿಗೆ ವರ್ತಮಾನ ಕೊಡದೆ ನೀನೂ ಸುಮ್ಮನೆ ಬಂದೆಯಾ?'—ಎಂದು ನಾಗೇಂದ್ರನು ಆಗ್ರಹದಿಂದ ಕೇಳಿದನು.

'ಪೋಲೀಸಿಗೆ ಹೋಗದೆ ಇರುವವನು ನಾನೆ? ಹೋದದ್ದೆಲ್ಲ ಸರಿಯೆ! ಮತ್ತೆ ಅಲ್ಲಿಯ ದರೋಗನು ಅವನ ತಂಗಿಯ ಗಂಡನಂತೆ!'

'ತಂಗಿಯ ಗಂಡನಾಗಲಿ, ಅವನಪ್ಪನಾಗಲಿ! ನೀನು ವರ್ತಮಾನ ಕೊಟ್ಟಿರುವುದಾದರೆ, ಅವನದನ್ನು ತನ್ನ ದಿನಚರ್ಯೆಯಲ್ಲಿ ಬರೆದಿಟ್ಟು, ಕಳ್ಳರನ್ನು ಹುಡುಕುವ ಪ್ರಯತ್ನವನ್ನು ನಡೆಯಿಸಲೇ ಬೇಕು!'

'ಅವನೇ–ದಿನಚರ್ಯೆಯಲ್ಲಿ ಬರೆದಿಡುವ ಮಗ? ಅದಕ್ಕೆ ಬದಲು, ಸುಳ್ಳು ಫಿರ್ಯಾದನ್ನು ತಂದಿರುವನೆಂದು ನನ್ನನ್ನು ಜೈಲಿಗೆ ಹಾಕಿಸುವುದಾಗಿ ಹೆದರಿಸಿ ಬಿಟ್ಟ!'

ನಾಗೇಂದ್ರನು ವಿದ್ಯಾರ್ಥಿಯಾಗಿದ್ದಾಗ, ನ್ಯಾಯಶಾಸ್ತ್ರವನ್ನಭ್ಯಾಸಿಸುವ ಮತ್ತೊಬ್ಬ ವಿದ್ಯಾರ್ಥಿಯೂ ಅವನೂ ಒಂದೇ ಭೋಜನಗೃಹದಲ್ಲಿ ವಾಸಮಾಡುತ್ತಿದ್ದರು. ಅವನ ಸಂಸರ್ಗದಿಂದ ನಾಗೇಂದ್ರನು ಕೆಲವು ನ್ಯಾಯಸೂತ್ರಗಳನ್ನು ಕಲಿತುಕೊಂಡನು. ಆ ಮೇಲೆ ನ್ಯಾಯಶಾಸ್ತ್ರದ ಒಂದು ಚಿಕ್ಕ ಪ್ರತಿಯನ್ನೂ ಕೊಂಡಿಟ್ಟುಕೊಂಡು, ಗ್ರಾಮದ ವ್ಯಾಜ್ಯಗಳಲ್ಲೆಲ್ಲ ಒಂದಲ್ಲ ಒಂದು ತಂಡದ ಕಕ್ಷಿಗಾರರಿಗೆ ಆಲೋಚನೆಯನ್ನು ಕೊಡುತಿದ್ದನು. ಅಂತಹವನು ತಂದೆಯನ್ನು ಕುರಿತು 'ಮೊದಲಿಂದ ಕೊನೆಯ ವರೆಗೆ ನಡೆದುದನ್ನು ಹೇಳು. ಏನಾದರೂ ಉಪಶಮನವನ್ನು ಹುಡುಕಬಹುದೋ ನೋಡುತ್ತೇನೆ'—ಎಂದನು.

ಮುದುಕನು ಕಥೆಯನ್ನು ಪ್ರಾರಂಭಿಸಿದನು. ಪೂರ್ತಿ ಮಾಡುವುದಕ್ಕೆ ಒಂದು ಗಂಟೆ ಹಿಡಿಯಿತು. ನಿಶ್ವಾಸ, ಕಣ್ಣೀರು, ಆಕಳಿಕೆ, ಬಿಕ್ಕಳಿಕೆ ಮೊದಲಾದ ಅನಾವಶ್ಯಕ ಭಾಗಗಳನ್ನು ಲೋಪಮಾಡಿ, ಸಾರಾಂಶವನ್ನು ಮಾತ್ರ ಉಲ್ಲೇಖಿಸುವೆವು.

ಸಂಧ್ಯಾಕಾಲಕ್ಕೆ ಮುಂದೆ, ಮುದುಕನು ಸುಬೋಧಚಂದ್ರನ ಮನೆಯನ್ನು ಬಿಟ್ಟು ದೋಣಿಯನ್ನೇರಿದನು. ತೀರವನ್ನು ಬಿಟ್ಟು ಸ್ವಲ್ಪ ದೂರ ಬರುವುದರೊಳಗಾಗಿ, ಹಗ್ಗವು ಹರಿದು ಹೋಯಿತು. ಒಡನೆ ದೋಣಿ ದಿಕ್ಕುಗೆಟ್ಟು ಇದಿರುದಿಕ್ಕಿಗೆ ಓಡತೊಡಗಿತು. ಮಧ್ಯೆ, ಸರಕನ್ನು ಹೇರಿಕೊಂಡು ಬರುತಿದ್ದ ದೋಣಿಯೊಂದು ಅದಕ್ಕೆ ತಗಲಲು, ಅದು ಒಡೆದು ಹೋಯಿತು. ರಮಾನಾಥನು ಒಡವೆಗಳ ಪೆಟ್ಟಿಗೆಯನ್ನು ಹೊದೆದ ಪಂಚೆಯಿಂದ ಬೆನ್ನಿಗೆ ಕಟ್ಟಿಕೊಂಡಿದ್ದನು. ಬಹದ್ದೂರ ಚಕ್ರವರ್ತಿ ಪ್ರಜ್ಞಾಹೀನನಾಗಿದ್ದ ಆ ಮನುಷ್ಯನನ್ನು ನೀರಿಂದ ಮೇಲಕ್ಕೆತ್ತಿ, ತನ್ನ ಮನೆಗೆ ಸಾಗಿಸಿಕೊಂಡು ಹೋಗಿ, ಔಷಧೋಪಚಾರಗಳಿಂದ ಜೀವದಾನವನ್ನು ಮಾಡಿದನು. ಆದರೆ, ಆಭರಣಗಳನ್ನು ಮಾತ್ರ ಹಿಂದೆ ಕೊಡಲಿಲ್ಲ.

ಭ್ರೂಕುಂಚನ ಮಾಡಿ, ನಾಗೇಂದ್ರನು—'ಅವುಗಳು ತನ್ನಲ್ಲಿವೆಯೆಂದು ಅವನೇ ಒಪ್ಪಿರುವನೋ?'—ಎಂದು ಕೇಳಿದನು.

'ಮೊದಲೊಪ್ಪಲಿಲ್ಲ. ನನಗೆ ಪ್ರಜ್ಞೆ ಬಂದಾಗ ನಾನು ಕೇಳಿದೆನು—ನನ್ನ ಬೆನ್ನಿಗೆ ಕಟ್ಟಿದ್ದ ಪೆಟ್ಟಿಗೆಯೆಲ್ಲಿ ಎಂದು. ಅವನು ಹೇಳಿದನು;—'ಪೆಟ್ಟಿಗೆ ಗೊತ್ತಿಲ್ಲ!' ಆಗ ನಾನು—'ನನ್ನ ಆಸ್ತಿಯೆಲ್ಲವೂ ಹೋಯಿತು! ನೀನು ಬ್ರಾಹ್ಮಣನನ್ನು ಕೊಂದೆ!'—ಎಂದು ಕೂಗಿ, ಮೂರ್ಛಿತನಾದೆನು. ಮತ್ತೆ ಸಂಜ್ಞಾಲಾಭವುಂಟಾದಾಗ, ಎಲ್ಲಿಂದಲೋ ಒಬ್ಬ ಡಾಕ್ಟರನು ಬಂದಿದ್ದುದನ್ನು ನಾನು ಕಂಡೆನು. ಅವನೆಂದನು:—'ಹೆದರಬೇಡ. ನಿನ್ನ ಪೆಟ್ಟಿಗೆ ಸುರಕ್ಷಿತವಾಗಿದೆ'—ಎಂದು. ಅನಂತರ ನನ್ನ ವಿಚಾರವನ್ನೆಲ್ಲ ಕೇಳಿ ತಿಳಿದು, ನಾಡಿಯನ್ನು ಪರೀಕ್ಷಿಸಿ, ಔಷಧವನ್ನು ಕೊಟ್ಟು, ಹೊರಟು ಹೋದನು. ಹೋಗುತ್ತ—'ಮೂರು ದಿನಗಳಲ್ಲಿಯೇ ನಿನಗೆ ಗುಣವಾಗುವುದು'—ಎಂದನು.

'ಹಾಗಾದರೆ ನಾನು ಡಾಕ್ಟರರನ್ನು ನಮ್ಮ ಕಡೆಯ ಸಾಕ್ಷಿಯಾಗಿ ಕೋರ್ಟಿಗೆ ಬರಮಾಡಿಕೊಳ್ಳುವೆನು. ಆಭರಣಗಳನ್ನು ಚಕ್ರವರ್ತಿಯಿಂದ ಹಿಂದಕ್ಕೆ ತೆಗೆದುಕೊಳ್ಳುವೆನು. ಅವನ ಕಿವಿಹಿಡಿದು ಅದನ್ನು ವಸೂಲು ಮಾಡದೆ ಇದ್ದರೆ ನಾನಿನ್ನೇತಕ್ಕೆ?'

'ಅದು ನಿರಾಶೆಯ ಕೆಲಸ;— ಪ್ರಯೋಜನವಿಲ್ಲದ ಉದ್ಯೋಗ! ನಾನೇನು ಡಾಕ್ಟರರ ಬಳಿಗೆ ಹೋಗಲಾರದಂತಹ ಬುದ್ಧಿಹೀನನೆಂದು ತಿಳಿದೆಯಾ? ಅವನು ಹೇಳಿದನು:—ಆಭರಣದ ವಿಷಯದಲ್ಲಿ ನನಗೇನೂ ಗೊತ್ತಿಲ್ಲ. ನಿನ್ನನ್ನು ಸಮಾಧಾನಗೊಳಿಸಲು ಮಾತ್ರವೇ ಎಲ್ಲವೂ ಸರಿಯಾಗಿದೆಯೆಂದು ಹೇಳಿದೆನು'— ಎಂದು. ಹಾಗಾದ ಮೇಲೆ ಅವನನ್ನು ಕೋರ್ಟಿಗೆ ಕರೆದಾಗುವ ಪುರುಷಾರ್ಥವೇನು? ಅಲ್ಲಿಯೂ ಅದೇ ಮಾತನ್ನೇ ಹೇಳುವೆನು!'

'ಚಕ್ರವರ್ತಿಯೇ ಅವುಗಳನ್ನು ತೆಗೆದುಕೊಂಡನೆಂದು ನಿನಗೆ ಹೇಗೆ ಗೊತ್ತು?'

'ಅದಕ್ಕೊಂದು ಉದ್ದೇಶವಿದೆ. ಅವನು ಹೇಳಿದನೇನೆಂದರೆ—'ನಿನ್ನ ಚಿಕ್ಕ ಮಗನಿಗೆ ನನ್ನ ಮಗಳನ್ನು ಮದುವೆ ಮಾಡಿಕೋ. ಹಾಗೆ ಮಾಡಿದರೆ, ಎಲ್ಲ ಒಡವೆಗಳೂ ಬಳುವಳಿಯಾಗಿ ನಿನಗೆ ದೊರೆವುವು. ನಾನು ಬಡವನು; ವರನು ಸಿಕ್ಕುವುದು ಪ್ರಯಾಸ. ನಿನಗೆ ನಿನ್ನ ನಗನಾಣ್ಯಗಳೂ ಸಿಕ್ಕುವುವಲ್ಲದೆ, ನಾನೂ ನನ್ನ ಮಗಳ ಮದುವೆಯನ್ನು ಮಾಡುವ ಮೂಲಕ ಕರ್ತವ್ಯಭಾರದಿಂದ ವಿಮೋಚನವನ್ನು ಹೊಂದುತ್ತೇನೆ.'

'ಆ ಸಂದರ್ಭದಲ್ಲಿ ಬಹಳ ತೊಂದರೆಗಳಿವೆ!'— ಎಂದು ನಾಗೇಂದ್ರನು ಮಿಾಸೆಯ ತುದಿಯನ್ನಗಿಯುತ್ತ ಯೋಚಿಸತೊಡಗಿದನು.

ರಮಾನಾಥನ ಕಿರಿ ಮಗನ ಹೆಸರು ಶ್ರೀಪಾದಚರಣ. ಎಫ್. ಎ. ತರಗತಿಯ ವರೆಗೂ ಓದಿ, ಬಲುಮಟ್ಟಿಗೆ ಆಂಗ್ಲಪದ್ಧತಿಗಳನ್ನೇ ಅನುಕರಿಸುತ್ತಿದ್ದನು. ಪ್ರಾತಃ-ಸಂಧ್ಯಾಕಾಲಗಳಲ್ಲಿ ಟೀ-ಬಿಸ್ಕೊಟುಗಳೇ ಅವನಿಗೆ ಭೋಗ್ಯವಸ್ತು. ಗ್ರಾಮದ ಯುವಕಜನರಲ್ಲಿ ಪಂಡಿತನೆಂದು ಪರಿಭಾವಿಸಲ್ಪಟ್ಟಿದ್ದನು. ಮುಖವು ಸುಂದರವಾಗಿ, ಮನೋಹರವಾದ ಮಿಾಸೆಯಿಂದ ಅಲಂಕೃತವಾಗಿದ್ದಿತು. ಹೆಂಡತಿಯ ಮರಣಾನಂತರ, 'ದುಃಖಮಯವಾದ ನೇತ್ರಾಂಬು'ವೆಂಬ ಕಾವ್ಯವೊಂದನ್ನು ಪ್ರಕಟಗೊಳಿಸಿದನು. ಮದುವೆಯ ಪ್ರಸ್ತಾವವನ್ನೆತ್ತಿದಾಗಲೆಲ್ಲ, ತಿರಸ್ಕಾರಪೂರ್ಣವಾದ ಪ್ರತ್ಯು

ತ್ತರವನ್ನು ಕೊಡುತ್ತಿದ್ದನು. ಮಿತ್ರಮಂಡಲಿಯುವರವನನ್ನು ಸತ್ತುಹೋದ ಹೆಂಡತಿಯು ನಿಜಪ್ರಣಯಿಯೆಂದು ಬಹುಮಾನಿಸುತ್ತಿದ್ದರು. ಆಲೋಚಿಸಲ್ಪಟ್ಟ ಪುನರ್ವಿವಾಹಕ್ಕೆ ಒಪ್ಪುವಂತೆ ಮಾಡುವುದರಲ್ಲಿ ಯಾರಿಗೂ ಏನೇನೂ ಆಶೆಯುಳಿದಿರಲಿಲ್ಲ. ಇದನ್ನು ತಿಳಿದೇ ನಾಗೇಂದ್ರನು-'ಬಹಳ ತೊಂದರೆಗಳಿವೆ!'—ಎಂದು ಹೇಳಿದುದು.

ತಂದೆ ನಾಗೇಂದ್ರನಿಗೆ—'ನಿನ್ನಿಂದ ಕೂಡುವ ಮಟ್ಟಿಗೂ ಅವನನ್ನು ಪ್ರೇರೇಪಿಸಿ, ಲಗ್ನಕ್ಕೊಪ್ಪುವಂತೆ ಮಾಡು. ಇಲ್ಲದಿದ್ದರೆ, ವಯಸ್ಸಿನಲ್ಲಿ ಈ ಅಪಾರನಷ್ಟವನ್ನು ಸಹಿಸಿಕೊಳ್ಳಲು ಸಾಧ್ಯವಾಗದು. ನಾನಿದರಿಂದ ಸತ್ತುಹೋಗುವುದೇ ಸರಿಯೆಂದವನಿಗೆ ಹೇಳು. ಮತ್ತೂ, ಲಗ್ನಕ್ಕೊಪ್ಪದಿದ್ದರೆ, ತಂದೆಯು ಕೋಪಶಾಪಗಳಿಗೂ, ಕೊಂದ ದೋಷಕ್ಕೂ ಗುರಿಯಾಗುವೆಯೆಂದು ಬೆದರಿಸು!'—ಎಂದು ಹೇಳಿಕೊಟ್ಟಿದ್ದನು.

ಸೋದರರು ಶ್ರೀಪಾದನನ್ನು ಲಿಪಿ ಹಿಡಿದಂತೆ ಹಿಡಿದು ತಮ್ಮ ಮಧ್ಯದಲ್ಲಿ ಕುಳ್ಳಿರಿಸಿಕೊಂಡರು. ದಿನವೆಲ್ಲ, ಪ್ರೇರೇಪಣೆ-ಪ್ರಾರ್ಥನೆ-ತರ್ಕ-ಕೋಪ ಮೊದಲಾದುವುಗಳಿಂದ, ಅವನ ಮನಸ್ಸನ್ನು ತಿರುಗಿಸಲು ಭಗೀರಥ ಪ್ರಯತ್ನಮಾಡಿದರು. ಆದರೆ, ಏತರಿಂದಲೂ ಏನೂ ಫಲವಾಗದೆ ಹೋಯಿತು. ಆ ಮೇಲೆ ಬಂಧುಗಳು ಸ್ನೇಹಿತರೊಡನೆಯೂ ಹೇಳಿದರು-ಸ್ನೇಹದ ಶಕ್ತಿಯನ್ನು ಆ ದಿಕ್ಕಿನಲ್ಲಿಯೇ ಪ್ರಯೋಗಿಸಬೇಕೆಂದು! ಅದು ಕಾರಣ, ಶ್ರೀಪಾದನು ದ್ವಿತೀಯ ವಿವಾಹಕ್ಕೆ ವಿರೋಧವಾಗಿ ಮಾತಾಡುವಾಗಲೆಲ್ಲ, ಅವನ ಮಿತ್ರರು ಒಬ್ಬೊಬ್ಬರಾಗಿ ಸಮಯವು ಸಿಕ್ಕಿದಂತೆ ತರ್ಕವಿತರ್ಕಗಳನ್ನು ಖಂಡಿಸುತ್ತ ಬಂದರು. ಒಂದು ದಿನ, ಅವನು ತನ್ನದೊಂದು ಅಭಿಪ್ರಾಯವನ್ನೇ ಅವರ ಮುಂದೆ ಹೇಳತೊಡಗಲು, ಅವರೂ ಪ್ರಾರಂಭಮಾಡಿದರು. ವಿರಕ್ತ ವಿಧುರರು ದ್ವಿತೀಯ ವಿವಾಹವನ್ನು ಮಾಡಿಕೊಂಡ ಲೆಕ್ಕವಿಲ್ಲದ ಉದಾಹರಣೆಗಳನ್ನು ತಂದು ಅವನ ಮುಂದೆ ರಾಶಿ ಹಾಕಿದರು.—ಅಂತಹವರಲ್ಲಿ ಒಬ್ಬನು ಸನ್ಯಾಸಿಯಾಗಿ, ಹೆಂಡತಿ ಸತ್ತಳೆಂದು ಮಹಾವ್ಯಸನದಿಂದ ಮನೆಯನ್ನೇ ಬಿಟ್ಟು ಕೃಷ್ಣಾಜಿನ ಕಮಂಡಲುಗಳೊಂ

ದಿಗೆ ಗುಡ್ಡ-ಬೆಟ್ಟ-ವನ-ನದಿಗಳನ್ನೆಲ್ಲ ಸಂಚರಿಸಿಯೂ, ಒಂದು ವರ್ಷದೊಳಗೆ ದ್ವಿತೀಯವಿವಾಹವನ್ನು ಮಾಡಿಕೊಂಡು, ಪುನಃ ಗೃಹಸ್ಥನಾದನು!— ಮತ್ತೊಬ್ಬನು, ಹೆಂಡತಿಯ ಮರಣಾನಂತರ, ಮಹಾಲೇಖಕರೆಲ್ಲರಿಗೂ ಮಿಗಿಲಾದ ಉತ್ಕೃಷ್ಟ ಪದ್ಯಗ್ರಂಥವನ್ನು ವಿರಚಿಸಿ,—ಕೊನೆಗೆ ದ್ವಿತೀಯ ಪತ್ನಿಯ ಕರಗ್ರಹಣ ಮಾಡಿದುದೂ ಸಾಲದೆ, ಮೂರನೆಯವಳ ಕತ್ತಿಗೂ ಹಾರವನ್ನು ಹಾಕಿದನು!— ಇಂತಹ ಕಥೆಗಳನ್ನೆಷ್ಟೋ ಹೇಳಿದರೂ, ತನ್ನ ಮೋಕ್ಷಕ್ಕೆ ಮೂರೇ ಕಾಲೆಂದು ಕುಳಿತ ಶ್ರೀಪಾದನು ಮಹಾಸಂಗ್ರಾಮದಲ್ಲಿ ಪರಾಜಿತನಾಗಿ ಪರಾಭವವನ್ನೇನೋ ಒಪ್ಪಿಕೊಂಡರೂ, ಲಗ್ನಕ್ಕೆ ಮಾತ್ರ ಸಮ್ಮತಿಸಲಿಲ್ಲ!

ಇಷ್ಟರಲ್ಲಿ ಅವಧಿ ಸಮಾಪಿಸಿತು. ಚಕ್ರವರ್ತಿ ಹತ್ತೇ ಹತ್ತು ದಿನಗಳೆಂದು ಹೇಳಿದ್ದನು. ಶ್ರಾವಣದ ಇಪ್ಪತ್ತನೆಯ ದಿನದ ಗಡು. ಅದರಲ್ಲಿ ಮೂರು ಕಳಿದುವು. ಇನ್ನುಳಿದಿರುವವು ಏಳೇ ಏಳು ದಿನಗಳು!

ಆದರೂ, ಮಗನು ಲಗ್ನಕ್ಕೆ ಒಪ್ಪದೆ ಇದ್ದುದರಿಂದ ಮುದುಕನೊಂದು ಹೊಸ ಉಪಾಯವನ್ನು ಹುಡುಕಿ ತೆಗೆದನು—ತಾನೇ ಆ ಕನ್ಯೆಯನ್ನು ಸ್ವೀಕಾರ ಮಾಡುವೆನೆಂದು!—'ಪರಿಣಾಮದಲ್ಲಿ ಏನಾದರೂ ಆಗಲಿ! ನಾನಂತೂ ಎರಡು ಸಾವಿರ ರೂಪಾಯಿಯ ದಾಗೀನೆಗಳನ್ನು ಬಿಟ್ಟುಬಿಡಲಾರೆನು!'

ಸಮಾಚಾರವು ಹಳ್ಳಿಯಲ್ಲೆಲ್ಲ ಹಬ್ಬಿ, ಆಭಾಸಕ್ಕೆ ಕಾರಣವಾಯಿತು. ಆಭರಣಗಳು ಕಳೆದುಹೋದುದೂ, ದೋಣಿಯು ಮುಳುಗಿದುದೂ ಎಲ್ಲವೂ ಸುಳ್ಳೆಂದೂ, ಸುಂದರಿಯ ದರ್ಶನವು ಮುದುಕನ ಬುದ್ಧಿಯನ್ನು ತಲೆ ಕೆಳಗಾಗಿಸಿತೆಂದೂ ಎಲ್ಲರೂ ಆಡಿಕೊಳ್ಳುತ್ತಿದ್ದರು. ಒಬ್ಬನು—'ಮುದುಕನು ಹೀಗೆ ಮಾಡುವನೆಂದು ಯಾರು ತಿಳಿದಿದ್ದರು? ಅವನಲ್ಲಿರುವ ವಂಚನೆಯನ್ನು ಸೂಚಿಸುವುದಕ್ಕೆ ಕಣ್ಣೇ ಸಾಕಾಗಿದೆ!'— ಎಂದನು. ಮತ್ತೊಬ್ಬನು 'ದೀನಬಂಧು'ವಿನ ಪ್ರತಿಯನ್ನೂ 'ವೃದ್ಧಮಹಾಶಯನ ಕಲ್ಯಾಣಮಹೋತ್ಸವ'ದ ಪುಸ್ತಕವನ್ನೂ ಕೊಂಡುಕೊಂಡು ರಮಾ

ನಾಥ ಮುಖರಜೀಯವರಿಗೆ ಬಹುಮಾನವಾಗಿ ಕೊಡಬೇಕೆಂದು ಹೇಳ ತೊಡಗಿದನು.

ಒಬ್ಬರಿಬ್ಬರು ಸಂಪನ್ನರು ರಮಾನಾಥನ ಬಳಿಗೆ ಬಂದು,—'ಮುಖ ರಜೀ ಮಹಾಶಯ! ನೀವು ಲಗ್ನ ಮಾಡಿಕೊಳ್ಳುವುದಾಗಿ ವರ್ತಮಾನ ಕೇಳಿದೆವು. ಆದರೆ, ಅವರು ಹುಡುಗಿಯನ್ನು ಕೊಡಲಿಕ್ಕೆ ಒಪ್ಪದಿದ್ದರೋ? ನಿಮಗೆ ವಯಸ್ಸಾಗಿರುವುದರಿಂದ, ಲಗ್ನವು ಅಸಾಧ್ಯವಾಗಿ ತೋರುವು ದಲ್ಲ?'

'ಆ ಹಾದಿಯಲ್ಲಿ ಬಿದ್ದ ಹುಡುಗಸಿದನ್ನು ತಿರಸ್ಕರಿಸುವನೆಂಬುದು ನನಗೆ ಮೊದಲೇ ಗೊತ್ತು! ಮಗನು ಲಗ್ನಕ್ಕೆ ವಿರೋಧಿಯಾಗಿ ನಿಂತರೆ, ನಾನಾದರೂ ಮದುವೆಯಾಗಲೇ ಬೇಕು. ಆಭರಣಗಳನ್ನೆಲ್ಲ ಕೊಟ್ಟು ಬಿಡುವುದಾಗಿ ಅವರು ಹೇಳಿರುವರು. ಪಾಪ! ಹುಡುಗಿ ದೊಡ್ಡವಳಾಗಿ ಕತ್ತಿಗೆ ಬಂದು ನಿಂತಿದ್ದಾಳೆ. ದಾರಿದ್ರ್ಯದೋಷದಿಂದ ಯಾರೂ ಅವ ಳನ್ನು ಲಗ್ನವಾಗುವರಿಲ್ಲ. ಜಾತಿ ಬಹಿಷ್ಕಾರಕ್ಕೆ ಭಯಪಟ್ಟು, ಹುಡುಗ ನಾಗಲಿ, ಮುದುಕನಾಗಲಿ,—ಯಾರಿಗಾದರೂ ಕೊಟ್ಟು ಬಿಡಲಿಕ್ಕೆ ಅವ ರೀಗ ಸಿದ್ಧರಾಗಲೇಬೇಕಾಗಿದೆ!'

ಈ ಸಂಗತಿಗಳನ್ನೆಲ್ಲ ಕಂಡು ಕೇಳಿ, ಗ್ರಾಮವಾಸಿಗಳೆಲ್ಲ ವಿನೋದ ಸಾಗರದಲ್ಲಿ ವಿಹರಿಸುತ್ತಿದ್ದರೂ, ಮನೆಯವರು ಸಂಪೂರ್ಣವಾಗಿಯೂ ಮೊಗ ತಗ್ಗಿದರು. ಒಂದು ವೇಳೆ ಸಿಡಿಲೇ ಅವರ ತಲೆಯ ಮೇಲೆ ಬಿದ್ದಿದ್ದರೂ ಅವರಿಗಿಷ್ಟು ಯಾತನೆಯುಂಟಾಗುತಿರಲಿಲ್ಲ. ನಾಲ್ಕು ಜನ ಮಕ್ಕಳೂ, ನಾಲ್ಕು ಜನ ಸೊಸೆಯರೂ, ತಾವಿದ್ದೂ ಸತ್ತೆವೆಂದುಕೊಂಡರು. ಪಡಿಯೊಬ್ಬರೂ — ಎಲ್ಲರೂ—ಮುದುಕನನ್ನು ಸಮಾಧಾನಪಡಿಸಲು ನಾನಾ ಪ್ರಯತ್ನಗಳನ್ನು ಮಾಡತೊಡಗಿದರು.

ರಮಾನಾಥನು ಹೇಳಿದನು:—'ನೋಡಿ! ಮದುವೆಯಾಗಲು ನನ ಗೇನೇನೂ ಮನಸ್ಸಿಲ್ಲ. ಶ್ರೀಪಾದನನ್ನು ನೀವು ಹೇಗಾದರೂ ಮಾಡಿ

ಹುರಿಗೊಳಿಸಿದರೆ, ವಿವಾಹಕಾರ್ಯವನ್ನು ನೆರವೇರಿಸಿ, ಸ್ವರ್ಣಮಯಿ ಯಾದ ಸೊಸೆಯನ್ನು ಮನೆಗೆ ಕರೆದುಕೊಂಡು ಬರುತ್ತೇನೆ.'

ಶ್ರೀಪಾದ–ಬಡಪಾಪಿ–ಅವನಿಗೆ ಇದುವರೆಗೂ ಏನೂ ಯೋಚನೆ ಯಿರಲಿಲ್ಲ. ಈಗ ತೊಂದರೆಯೂ, ಉಪದ್ರವವೂ, ಬಾಧೆಯೂ ದ್ವಿಗುಣಿತವಾಗಿ ಉಪಕ್ರಮವಾದುವು. ಕೊನೆಗೆ ಶ್ರೀಪಾದನು ಸಮುಜ್ವಲ ವಾದ ಮುಖ—ನೇತ್ರಗಳೊಡನೆ, ಕಡುಕೋಪದಿಂದ—'ನೀವೆಲ್ಲ ಸೇರಿ, ನನಗೆ ತೊಂದರೆ ಕೊಡುವುದಾದರೆ, ನಾನಿನ್ನು ಮನೆಯಲ್ಲಿರುವುದಿಲ್ಲ'— ಎಂದನು.

'ಇದೋ! ಇದುವರೆಗೆ ನಾನಿಂತಹದನ್ನು ಬಹಳ ಕಂಡಿದ್ದೇನೆ; ಬದುಕಿ ಉಳಿದರೆ, ಮುಂದೆ ನೋಡಿಯೂ ನೋಡುತ್ತೇನೆ. ನೀನೇನೋ ಈ ವಿಚಾರದಲ್ಲಿ ಮಹತ್ತರವಾಗಿ ಕೂಗುತ್ತಿರುವೆ. ನೋಡುವ; ಏನಾಗು ವುದೋ?'—ಎಂದು ಹಿರಿಯತ್ತಿಗೆ ಹೀಯಾಳಿಸಿದಳು.

ಶ್ರಾವಣದ ಹದಿನಯ್ದನೆಯ ದಿನ. ಇನ್ನು ಲೆಕ್ಕ ಮಾಡಿದಂತೆ 5 ದಿನಗಳು. ರಮಾನಾಥನು ಹಣವನ್ನು ತೆಗೆದುಕೊಂಡು ಕಲಿಕತ್ತೆಗೆ ಹೋದನು. ಅಲ್ಲಿ ಲಗ್ನಕ್ಕೆ ಬೇಕಾದುದನ್ನೆಲ್ಲ ಕೊಂಡುಕೊಂಡು, ನೆಟ್ಟಗೆ 'ಮಾವನ ಮನೆ'ಗೆ ಹೋಗುವುದಾಗಿ ಹೇಳಿದನು.

ಮುದುಕನು ಹೊರಟು ಹೋದನು. ಮನೆಯಲ್ಲಿ ಹೊಸ ಗಲಭೆ! ಎಲ್ಲರೂ ಸೇರಿ—ಚಿಕ್ಕವರೂ, ದೊಡ್ಡವರೂ, ಗಂಡಸರೂ, ಹೆಂಗಸರೂ- ಶ್ರೀಪಾದನ ಮೇಲೆ ಕತ್ತಿಯನ್ನು ಬೀಸಲಾರಂಭಿಸಿದರು. ರಮಾನಾಥನ ಹೆಂಡತಿ ಸತ್ತು ಸುಮಾರು ಹತ್ತು ವರ್ಷಗಳ ಮೇಲಾಗಿದ್ದಿತು. ಮಕ್ಕಳೆಂತಲೂ, ಸೊಸೆಯರೆಂತಲೂ, ಮೊಮ್ಮಕ್ಕಳೆಂತಲೂ ಅದೊಂದು ದೊಡ್ಡ ಕುಟುಂಬವೇ! ರಮಾನಾಥನು ಪುನಃ ಮದುವೆಯನ್ನು ಮಾಡಿ ಕೊಂಡಿರಲಿಲ್ಲ. ಹೆಣ್ಣು ಸಿಕ್ಕಲಿಲ್ಲವೋ, ವರದಕ್ಷಿಣೆ ಸಾಲದೋ, ಅಥವಾ ಜನಗಳವನಿಗೆ ಹಾಗೆ ಮಾಡಬೇಕೆಂದು ಹೇಳಿಕೊಡಲಿಲ್ಲವೋ—ನಮ

ಗದು ತಿಳಿಯದು. ಇಷ್ಟು ದಿನ— ಈ ಹತ್ತು ವರ್ಷಗಳಲ್ಲಿ---ಹಿರಿ ಮಗನ ಹೆಂಡತಿಯೇ ಮನೆಗೆ ಯಜಮಾನಿ! ಈಗ, ಯಾವುದೋ ಒಂದು ಮುಖ ತೊಳೆಯಲು ಬಾರದ ಹುಡುಗಿಯೊಂದನ್ನು ತೆಗೆದುಕೊಂಡು, ಬಂದು, ಅದರ ಕೈಯಲ್ಲಿ ಗೃಹಕೃತ್ಯವನ್ನೆಲ್ಲ ಒಪ್ಪಿಸುವುದೆಂದರೆ, ಎಂತಹ ಯಾತನೆ!— ಅವಳಳುತ್ತ, ಶ್ರೀಪಾದನೊಡನೆ—'ಅಣ್ಣ! ಇನ್ನೂ ಸಮಯ ವಿದೆ; ನೋಡು! ನೀನೀಗ ಹುಡುಗಿಯನ್ನು ಲಗ್ನ ಮಾಡಿಕೊಳ್ಳದಿದ್ದರೆ, ಬಂಗಾರದಂತಹ ಸಂಸಾರವೇ ನಾಶವಾಗಿ ಹೋಗುವುದು!'— ಎಂದಳು.

ಹಠಾತ್ತಾಗಿ ಶ್ರೀಪಾದನೆಂದನು:—'ಅತ್ತಿಗೆ! ನಾನೀಗ ಉಪಾಯ ವನ್ನು ಯೋಚಿಸಿದ್ದೇನೆ. ಹೆಣ್ಣಿನ ಕಡೆಯವರು ಬಡವರಂತೆ. ಈಗ ನೀವೆಲ್ಲರೂ ಸೇರಿ ಒಂದು ಸಾವಿರ ರೂಪಾಯಿಯನ್ನು ಒಟ್ಟುಗೂಡಿಸಿ, ನನಗೆ ಕೊಡಿ. ನಾನದನ್ನು ಚಕ್ರವರ್ತಿಗೆ ಕೊಟ್ಟು,—'ಅಯ್ಯಾ! ನೀನು ಬ್ರಾಹ್ಮಣ. ಮದುವೆಗೆ ಒಬ್ಬ ಮಗಳಿರುವಳು. ಇದೋ ನನ್ನ ಯಥೋ ಚಿತ ಸಹಾಯ. ನಿನ್ನ ಮನಸ್ಸಿಗೊಪ್ಪುವ ವರನನ್ನು ಹುಡುಕಿ ಮದುವೆ ಮಾಡು. ನಮ್ಮ ಆಭರಣಗಳನ್ನು ನಮಗೆ ಕೊಟ್ಟು ಬಿಡು!'— ಎಂದು ಹೇಳುವೆನು. ಅವನಿದಕ್ಕೆ ಸಮ್ಮತಿಸಬಹುದೆಂದು ತೋರುತ್ತದೆ. ಅವನು ಕೆಟ್ಟವನಲ್ಲ; ಹಾಗಿದ್ದರೆ, ಒಡವೆಗಳಿಲ್ಲವೆಂದು ಬಹು ಸುಲಭವಾಗಿ ನಿರಾಕರಿಸಬಹುದಿತ್ತು. ಅಲ್ಲವೆ? ಹೇಳು!'

ಗೃಹರಾಜ್ಯದ ಸಭೆಯಲ್ಲಿ ಈ ವಿಷಯವು ಚರ್ಚಿತವಾಯಿತು. ಪ್ರತಿಯೊಬ್ಬರೂ 'ಅಭಿಪ್ರಾಯವು ಕೆಟ್ಟದಲ್ಲ; ಹಾಗೆ ಪ್ರಯತ್ನಿಸುವುದ ರಿಂದ ಬಾಧಕವೇನೂ ಉಂಟಾಗದು'—ಎಂದರು.

ಮನೆಯವರೆಲ್ಲರಿಗೂ ಹೊಸ ಜೀವವು ಬಂದಿತು. ಶೀಘ್ರವಾಗಿಯೇ ದ್ರವ್ಯಭಾಗವನ್ನು ಒಟ್ಟುಗೂಡಿಸಿ, ಕಡಮಾಡಿ, ಒಂದು ಸಾವಿರ ರೂಪಾಯಿ ಯನ್ನಾಗಿಸಿದರು. ಅದೇ ಸಾಯಂಕಾಲ ಶ್ರೀಪಾದಚರಣನು ಚಂದಾ ವರಿಗೆ ಪ್ರಯಾಣ ಮಾಡಿದನು.

(iv)

ಚಂದಾವರಿ,
27ನೆಯ ಶ್ರಾವಣ.

ತೀರ್ಥರೂಪರವರ ಸನ್ನಿಧಿಯಲ್ಲಿ—ಬಾಲಕನ ಅನಂತಕೋಟಿಪ್ರಣಾಮಗಳು.

ನೀವು ಕಲಿಕತ್ತೆಗೆ ಹೊರಟ ಮರುದಿನ, ನಾನೂ ಕಾರ್ಯಾಂತರದಿಂದ ಇಲ್ಲಿಗೆ ಹೊರಟೆನು. ಮೊದಲು ಚಕ್ರವರ್ತಿಗಳಲ್ಲಿಗೆ ಹೋದೆನು. ಅವರು ನಾನಿಲ್ಲಿರುವ ವರೆಗೂ ನನ್ನನ್ನು ಬಹಳವಾಗಿ ಉಪಚರಿಸಬೇಕೆಂದಿದ್ದಾರೆ.

ನಾನು ಬಂದಿರುವ ಸಮಾಚಾರವನ್ನು ತಿಳಿದು ಕೆಲವರು ಗೃಹಸ್ಥರು ನೋಡುವುದಕ್ಕೆ ಬಂದರು. ಅವರಲ್ಲಿ ಒಬ್ಬ ವೃದ್ಧನು ನನ್ನನ್ನಾಚೆಗೆ ಕರೆದುಕೊಂಡು ಹೋಗಿ—'ನೀನು ಚಕ್ರವರ್ತಿಯ ಮಗಳನ್ನು ಮದುವೆಯಾಗಲಿರುವೆ ಎಂದು ಕೇಳಿದೆ!'—ಎಂದನು.

ಸಭ್ಯರೀತಿಯಿಂದ ಮದುವೆಯಾಗಲಿರುವುದು ನಾನಲ್ಲವೆಂದೂ, ನಮ್ಮ ತಂದೆಯೆಂದೂ ತಿಳಿಸಿದೆನು. ಕೇಳಿ, ಅವನು ಹಿಂದೆ ಸರಿದನು. ನಿಜವಾಗಿಯೂ ನಾನು ವಿನೋದವಾಡುತ್ತಿರುವೆನೆಂದು ಅವನು ತಿಳಿದುಕೊಂಡನು. ಆಗ ನಾನು ನಿಜಸ್ಥಿತಿಯನ್ನು ಹೇಳಿದೆನು. ಅವನು ಹೇಳಿದನೇನೆಂದರೆ:—'ಹುಡುಗಿಯ ಜಾತಿ, ಕುಲ, ಗೋತ್ರ, ಆವುದೂ ಗೊತ್ತಿಲ್ಲ! ಅವಳವನ ಸಾಕುಮಗಳು. ಹದಿಮೂರು ವರ್ಷಗಳ ಹಿಂದೆ ತ್ರಿವೇಣಿಯಲ್ಲಿ ನಡೆದ ಮಹೋತ್ಸವಕಾಲದಲ್ಲಿ, ಚಕ್ರವರ್ತಿ ಸಂಸಾರಸಮೇತನಾಗಿ ಗಂಗಾಸ್ನಾನವನ್ನು ಮಾಡಲು ಹೋಗಿದ್ದವನು ಅವಳನ್ನು ಕರೆದುಕೊಂಡು ಬಂದನು. ಆಗಲವಳಿಗೆ ಒಂದು ವರ್ಷ. ಸಂತಾನಹೀನನಾಗಿದ್ದುದರಿಂದ, ಆವನು ಮಗುವನ್ನು ತನ್ನ ಮಗಳಂತೆ ಪಾಲಿಸತೊಡಗಿದನು. ಅವಳ ಲ್ಲಗ್ನಕ್ಕಾಗಿ ಎಷ್ಟೋ ಯತ್ನಗಳಾದುವು. ಆದರೆ ಯಾವ ಕುಲೀನನೂ ಅವಳನ್ನು ಸ್ವೀಕರಿಸಿ ಜಾತಿಯನ್ನು ಕಳೆದುಕೊಳ್ಳದಂತೆ, ನಾವು ಜಾಗ್ರತೆಯಿಟ್ಟಿದ್ದೆವು. ಈಗ ನಿನಗೂ ಅದೇ ಮಾತು.'

'ತ್ರಿವೇಣಿಯಲ್ಲಿ ಮಹೋತ್ಸವಕಾಲದಲ್ಲಿ ಮಗು ಸಿಕ್ಕಿದುದು'—ಎಂದು ಕೇಳಿ, ಹುಡುಗಿಯನ್ನು ನೋಡಬೇಕೆಂದು ನಿರ್ಧರಿಸಿ ಚಕ್ರವರ್ತಿಗೆ ತಿಳಿಸಿದೆನು. ಹುಡುಗಿ ಯೋಗ್ಯವಾದ ಉಡುಪಿನೊಡನೆ ನನ್ನಿದಿರಿಗೆ ಕರೆತರಲ್ಪಟ್ಟಳು. ಏನು ಹೇಳಲಿ? ಸತ್ತುಹೋದ ನನ್ನ ಹೆಂಡತಿಯ ಪ್ರತಿಬಿಂಬವೇ ಆಗಿದ್ದಳಲ್ಲವೆ? ನೋಡಿ ನನಗೆ ಅತ್ಯಾಶ್ಚರ್ಯವಾಗಿ ಹೋಯಿತು! ನಾನು ಚಕ್ರವರ್ತಿಗೆ—'ಇವಳು ನಿನ್ನ ಮಗಳಲ್ಲ. ನನಗೆಲ್ಲ ತಿಳಿದಿದೆ!'—ಎಂದೆನು. ಚಕ್ರವರ್ತಿ ಏನನ್ನೂ ಅಡಗಿಸಲು ಶಕ್ತನಾಗಲಿಲ್ಲ. ಆಗ ನಾನು ಅನೇಕ ಪ್ರಶ್ನೆಗಳನ್ನು ಕೇಳಿ, ಅವನ ಬಾಯಿಂದಲೇ

ನನ್ನ ಸಂದೇಹನಿವೃತ್ತಿಯನ್ನು ಮಾಡಿಕೊಂಡೆನು. ಹುಡುಗಿ ನನ್ನ ಹೆಂಡತಿಯ ತಂಗಿ. ಒಂದು ವರ್ಷದ ಮಗುವನ್ನು ತ್ರಿವೇಣಿಯಲ್ಲಿ ನಮ್ಮತ್ತೆ ಕಳೆದುಕೊಂಡು, ಇಗ್ಗೆ ಸರಿಯಾಗಿ 13 ವರ್ಷಗಳಾಗಿವೆ. ಆ ವಾರವೆಲ್ಲ, ಹುಡುಕಿದುದಾಯಿತು. ಮೈಯ ಮೇಲೆ ನಗನಾಣ್ಯಗಳಿದ್ದುದರಿಂದ, ಯಾರೋ ಕೊಂದಿರಬಹುದೆಂದು ಊಹಿಸಲೂ ಕಾರಣನಾಯಿತು. ಈ ಚರಿತ್ರೆಯೆಲ್ಲವೂ ತಿಳಿದೇ ಇದೆ. ಇನ್ನೂ ಸಂಪೂರ್ಣವಾಗಿ ಗೊತ್ತುಮಾಡುವುದಕ್ಕೆ ನಮ್ಮ ಮಾವನಿಗೆ ತಂತಿಯನ್ನು ಕೊಟ್ಟೆನು. ಅವರು ಬಂದು ಹುಡುಗಿಯನ್ನು ನೋಡಿ, ಎಡತೋಳಿನ ಮಚ್ಚೆಯನ್ನು ಪರೀಕ್ಷಿಸಿ, ತಮ್ಮ ಮಗಳೇ ಎಂದು ನಿರ್ಧರಿಸಿದರು.

ಪ್ರಕೃತ ನೀವವಳನ್ನು ಮದುವೆಯಾದರೆ,–ನಮ್ಮ ಬಾಂಧವ್ಯವೆಲ್ಲ ಏನೇನೋ ಆಗಿ ಹೋಗುವುದು. ಈ ಕಾರಣದಿಂದಲೂ,—ನಿಮಗೆ ಈ ವಯಸ್ಸಿನಲ್ಲಿ, ಇಷ್ಟೊಂದು ವಿಭ್ರಮೆಯನ್ನುಂಟುಮಾಡತಕ್ಕ ಈ ಬಾಂಧವ್ಯವನ್ನು ತಪ್ಪಿಸುವುದು ಕರ್ತವ್ಯವೆಂದು ನಾನು ಅನುಭವಮಾಡಿದುದರಿಂದಲೂ,—ಹುಡುಗಿಯನ್ನು ನಾನೇ ಮದುವೆಯಾಗುವೆನೆಂದು ಸಹೋದರರಿಗೂ, ಅತ್ತಿಗೆಯರಿಗೂ, ಇಂದೇ ಆಹ್ವಾನ ಪತ್ರಿಕೆಗಳನ್ನು ಕಳುಹಿರುವೆನು.

ನನ್ನ ಪ್ರಥಮಭಾರ್ಯೆಯ ನಗನಾಣ್ಯಗಳ ವಿಷಯದಲ್ಲಿ ನಿಮಗೆ ತಿಳಿದ ವಿಚಾರವು ಕೇವಲ ಅನೃತವಾದುದೆಂದು, ಚಕ್ರವರ್ತಿ ಈಗ ಹೇಳುತ್ತಿರುವನು. ಅವನ ಮಗಳನ್ನು ಲಗ್ನವಾಗುವೆನೆಂದು ನಿಶ್ಚಯನಾದ ಮೇಲೆ, ಈ ನಿಜಸ್ಥಿತಿ ಹೊರಗೆ ಹೊರಟಿತು. ಏತಕ್ಕೆ ನಿನ್ನನ್ನು ವಂಚಿಸಿದುದೆಂದು ಪ್ರಶ್ನೆಮಾಡಲು, ಅವನು ಹೀಗೆ ಹೇಳಿದನು:—'ಮುಖರಜೀಮಹಾಶಯರಿಗೆ ತಿಳಿವುಂಟಾದಾಗ ಪೆಟ್ಟಿಗೆ ಎಲ್ಲಿಯೆಂದು ಕೇಳಿದರು. ಪೆಟ್ಟಿಗೆಯನ್ನು ನಾನು ಸ್ವಪ್ನದಲ್ಲಿಯೂ ಕಂಡಿರಲಿಲ್ಲ. ಅರಿಯೆನೆಂದೆನು. ಡಾಕ್ಟರನು ಬಂದವನು ಹಾಗೆ ಹೇಳಿದರೆ ಅನಾರೋಗ್ಯವು ಹೆಚ್ಚಾದೀತೆನಲು, ಯತ್ನವಿಲ್ಲದೆ ಸುಳ್ಳನ್ನೆ ಹೇಳಬೇಕಾಯಿತು.— ಪೆಟ್ಟಿಗೆ ಸುರಕ್ಷಿತವಾಗಿರುವುದೆಂದು ಹೇಳಿದೆನು. ಅವರಿಗೆ ಆರೋಗ್ಯವಾಯಿತು. ಆಗಲೇ ತೋರಿದುದು—ಇನ್ನೂ ಸ್ವಲ್ಪ ಸುಳ್ಳನ್ನು ಸೇರಿಸಿ, ಹುಡುಗಿಗೊಂದು ಲಗ್ನಪ್ರಯತ್ನವನ್ನು ಮಾಡುವುದು ಕೆಲಸಜಾಣರ ಚತುರೋಪಾಯದ ಹೊಡೆತವೆಂದು!'

ಚಕ್ರವರ್ತಿ ಸಭ್ಯನಾಗಿಯೂ, ಆದರಶೀಲನಾಗಿಯೂ ಇರುವುದು ಸತ್ಯವಾದರೂ, ಅವನ ನೈತಿಕ ಸೂತ್ರಗಳು ಶಿಥಿಲವಾದುವು. ಅವನ ಜಾಮಾತೃಸ್ಥಾನದಿಂದ ಬಾಹಿರನಾದುದಕ್ಕಾಗಿ, ಇದೊ! ಸರ್ವೇಶ್ವರನಿಗೆ ಸಹಸ್ರಪ್ರಣಾಮಗಳು!—ವಿಧೇಯ,

'ಶ್ರೀಪಾದ'

ಸಮಾರಂಭದೊಡನೆ ಶ್ರೀಪಾದಕುಮಾರನ ವಿವಾಹವು ನಡೆದು ಹೋಯಿತು. ತಂದೆಗೂ ಸಂತೋಷವೇ;—ಆದರೆ, ಆ ಚಿರಾದೃತವಾದ ಆಭರಣಗಳ ಪೆಟ್ಟಿಗೆಯೊಂದು ಮಾತ್ರ ದೊರೆಯದಿದ್ದುದು ಹರ್ಷದಲ್ಲಿ ಈಷದ್ವಿಷಾದ!

H. B. RAO.

# ನವೀನ ಭರತಖಂಡ.

## (ಮನೆಯಲ್ಲಿ.)

**ಗೋಪಾಲ:**—(ಕಾಗದವನ್ನೋದುತ್ತ, ಪ್ರವೇಶಿಸಿ,)

['ಚಿ|| ರಾ|| ಅಳಿಯಂದಿರು ಗೋಪಾಲಯ್ಯರಿಗೆ---ರಾಮಚಂದ್ರಯ್ಯನು ಮಾಡುವ ಅನೇಕಾಶೀರ್ವಾದಗಳು. ಆದಾಗಿ—ಈ ವರೆಗೆ, ಉಭಯಕುಶಲೋಪರಿ—ಸಂಪ್ರತಿ.

ನಿಮ್ಮ ಪತ್ನಿ ಸೌ||—ಯು ಋತುಮತಿಯಾದ ಶುಭವರ್ತಮಾನವನ್ನು ತಿಳಿಸಲು, ತುಂಬಾ ಸಂತೋಷಪಡುತ್ತೇನೆ. ಈ ತಿಂಗಳ ೨೮ಕ್ಕೆ ಋತುಶಾಂತಿಯ ಪ್ರಸ್ತವು ನೆರವೇರಲು, ಲಗ್ನವನ್ನು ಗೊತ್ತುಮಾಡಿರುತ್ತೇವೆ. ಈ ದಿನವೇ ಮನಿಯಾರ್ಡರು ಮೂಲಕ ಇಪ್ಪತ್ತು ರೂಪಾಯಿಗಳನ್ನು ಕಳುಹಿಸಿರುತ್ತೇನೆ. ಅದನ್ನು ನಿಮ್ಮ ಸ್ವಂತ ವೆಚ್ಚಕ್ಕಾಗಲಿ, ನಿಮ್ಮ ಹೆಂಡತಿಗಾಗಿ ಏನಾದರೂ ಅಪರೂಪವಾದ ಸಾಮಾನನ್ನು ತರುವುದಕ್ಕಾಗಲಿ, ವಿನಿಯೋಗಿಸಬಹುದು. ಏವಂಚ, ಆ ದಿನಕ್ಕೆ ನೀವು ಬಾರದೆ ತಪ್ಪಕೂಡದು.

ಇಂತೀ ಆಶೀರ್ವಾದಗಳು.'—]

(ಎಂದು ಓದಿ, ಸಂತೋಷದಿಂದ) 'ಸರಿಸರಿ! ಸಂತೋಷ! ಇದೀಗ ಶುಭವರ್ತಮಾನ!' (ಎಂದು ಆಲೋಚಿಸಿ,) 'ಹಾಳಾದವರು ನನಗೆ ಮದುವೆಯಲ್ಲಿ ಚೆನ್ನಾಗಿ ಮೋಸ ಮಾಡಿಬಿಟ್ಟರು! ನನ್ನ ಸ್ನೇಹಿತ ರಾಮಸ್ವಾಮಿಗೆ ಒಳ್ಳೆಯ ಚೆಲುವೆಯಾದ ಹುಡುಗಿಯ ಜತೆಗೆ, ಒಂದು ಸಾವಿರ ರೂಪಾಯಿಗಳು ಬೇರೆ ಸಿಕ್ಕಿದುವು. ಅವನು ನನ್ನಷ್ಟು ವಿದ್ಯಾವಂತನೂ ಅಲ್ಲ; ಭಾಗ್ಯವಂತರ ಮನೆತನಕ್ಕೆ ಸೇರಿದವನೂ ಅಲ್ಲ. ನಾನು ಎಫ್. ಏ.

ಪರೀಕ್ಷೆ ಮಾಡಿದ್ದೇನೆ. ನಮ್ಮ ತಂದೆಗೆ ವರ್ಷಕ್ಕೆ ಸಾವಿರ ರೂಪಾಯಿಯ ವರಮಾನವಿದೆ. ನಿಜವಾಗಿಯೂ, ನಮ್ಮ ರಾಮುಸ್ವಾಮಿಗಿಂತ, ನನಗೇ ಹೆಚ್ಚಾಗಿ ಕೊಡಬೇಕಾಗಿತ್ತು. ರಾಮುಸ್ವಾಮಿಯು ಹೋದ ವರ್ಷವೇ ಮೆಟ್ರಿಕ್ ಪರೀಕ್ಷೆಯನ್ನು ಮಾಡಿದುದು. ಅದೂ ಅವನ ಹೆಂಡತಿಯ ಪುಣ್ಯದಿಂದ ಆದುದೆಂದು ಕೆಲವರು ಆಡಿಕೊಳ್ಳುತ್ತಾರೆ. ನಾನು ಪರೀಕ್ಷೆಗಳಲ್ಲಿ ತೋರಿಸಿದ ಚಾತುರ್ಯವನ್ನು ಎಂದಿಗಾದರೂ ಈಗ ಮರೆತು ಬಿಡುವುದುಂಟೆ?—ಇದೇ ನನಗೆ ಸಮಯ! ಇದನ್ನು ಬಿಟ್ಟರೆ, ಕತ್ತೆಗಿಂತಲೂ ಕಡೆಯೇ ಸರಿ! ಎಫ್. ಎ. ಪರೀಕ್ಷೆಯನ್ನು ಮಾಡಿದವನಿಗೆ ಎಂಟು ನೂರೇ ರೂಪಾಯಿಯೆ? ಇದೆಂತಹ ಅವಮಾನ? ಇಂತಹ ಅವಮಾನವು ನಮ್ಮ ವಂಶದಲ್ಲಿ ಯಾರಾರಿಗೂ ಉಂಟಾಗಿಲ್ಲ. ಆ ಹುಡುಗಿಯ ತಂದೆಯೂ ನನ್ನ ತಂದೆಯೂ ಸ್ನೇಹಿತರಾದರೆ, ನನಗೇನು? ನಾನೇತಕ್ಕೆ ಸುಮ್ಮನೆ ನಷ್ಟಪಡಬೇಕು?— ಈಗಲೇ ಬೀ. ಏ. ಪರೀಕ್ಷೆಗೆ ಕಟ್ಟಿದ್ದೇನೆ. ಕೂಡಲೇ ಬೀ. ಏ. ಗೌನು (ಕವಚ) ಸಿಕ್ಕಿಬಿಡುತ್ತದೆ.—ನನ್ನ ಸತ್ವವನ್ನು ನಾನರಿಯೆನೆ? ಇರಲಿ! ಇದಕ್ಕೆ ತಕ್ಕ ಪ್ರತೀಕಾರವನ್ನು ಮಾಡಿಯೇ ಬಿಡುತ್ತೇನೆ.' (ಎಂದು ಹೋಗುವನು.)

*   *   *   *   *

[ರಾಮಚಂದ್ರಯ್ಯರ ಮನೆಯಲ್ಲಿ.]

**ರಾಮಚಂದ್ರಯ್ಯರು:**— (ಕಾಗದವನ್ನೋದುತ್ತ,)

'ತೀರ್ಥರೂಪರಾದ ಮಾವಯ್ಯನವರ ದಿವ್ಯಶ್ರೀಚರಣ ಸರೋಜಗಳಿಗೆ— ಬಾಲಕ ಗೋಪಾಲನು ಮಾಡುವ ಸಾಷ್ಟಾಂಗ ನಮಸ್ಕಾರಪೂರ್ವಕ ವಿಜ್ಞಾಪನೆಗಳು. ಈ ವರೆಗೆ ಉಭಯ ಕುಶಲೋಪರಿ— ಸಂಪ್ರತಿ.

ತಮ್ಮ ಆಶೀರ್ವಾದ ಪತ್ರಿಕೆಯು ಹಸ್ತಗತವಾಯಿತು. ತಮ್ಮ ಮಗಳು ಪುಷ್ಪವತಿಯಾದುದನ್ನು ಕೇಳಿ ತುಂಬಾ ಸಂತೋಷಪಟ್ಟೆನು. ಆದರೆ, ತಮಗೆ ಒಬ್ಬಳ ಭಾರವು ಕಡಮೆಯಾದಂತಾಯಿತು. ಋತುಶಾಂತಿಯ ಪ್ರಸ್ತಕ್ಕೆ ೨೮ನೆಯ ತಾರೀಖಿನ ದಿನ ಅಷ್ಟು ಅನುಕೂಲವಾಗುವಂತೆ ತೋರುವುದಿಲ್ಲ. ಅಂತಹ ಶುಭದಿನವನ್ನು ಬಿಡುವುದೆಂದರೆ, ಮನಸ್ಸಿಗೇನೋ ಸಮರ್ಪಕವಾಗಿಲ್ಲ. ಆದರೆ, ಅದನ್ನು

ಬಿಡದ ಹೊರತು ಬೇರೆ ಉಪಾಯವೂ ಕಾಣುವುದಿಲ್ಲ. ಮೊದಲನೆಯದು–ನಾನು ಒಂದು ವಾರದ ವರೆಗೂ ಸರ್ವಕಲಾ ಶಾಲೆ (College)ಯಿಂದ ತಪ್ಪಿಸಿಕೊಂಡಲ್ಲಿ, ನನಗೆ ಕಾಲಾವಧಿ (term) ಕಡಮೆಯಾಗುತ್ತದೆ. ಎರಡನೆಯದು—ನಾನಿನ್ನೂ ವಿದ್ಯಾರ್ಥಿಯಾಗಿಯೇ ಇರುವುದರಿಂದ, ಈಗಲೇ ಸಂಸಾರದ ಸಂಕಲೆಯಿಂದ ಬಂಧಿಸಿಕೊಳ್ಳಲು ಇಷ್ಟವಿಲ್ಲ. ಇನ್ನೂ ಸ್ವಲ್ಪ ಕಾಲ ಮಾತ್ರ ಕಳೆಯಬೇಕು;—ಅಷ್ಟೆ! ನನಗೆ ಬೀ. ಏ. ಪರೀಕ್ಷೆಯಾದ ಕೂಡಲೇ, ನ್ಯಾಯಶಾಸ್ತ್ರ (Law)ವನ್ನು ಓದಬೇಕೆಂದು ತುಂಬ ಅಭಿಲಾಷೆಯಿದೆ. ಅದಕ್ಕೆ, ಮೊಟ್ಟಮೊದಲು, ಪುಸ್ತಕಗಳಿಗೂ ಇತರ ವೆಚ್ಚಕ್ಕೂ ಸುಮಾರು ಹೆಚ್ಚು ಕಡಿಮೆಯಾಗಿ ೫೦೦ ರೂಪಾಯಿಗಳು ಬೇಕಾಗುವುವೆಂದು ತಿಳಿಯಬರುತ್ತದೆ. ಈ ಹಣವನ್ನು, ತಮ್ಮನ್ನು ಕೇಳಿ, ತೆಗೆದುಕೊಳ್ಳಬಹುದೆಂದು ನಿರೀಕ್ಷಿಸಿಕೊಂಡಿದ್ದೇನೆ. ಮದುವೆಯ ಕಾಲದಲ್ಲಿ ನಾನು ತಮ್ಮಿಂದ ಹೆಚ್ಚಾಗಿ ಏನನ್ನೂ ತೆಗೆದುಕೊಳ್ಳಲಿಲ್ಲವಷ್ಟೆ!—ಆದರೆ ಈಗ ಆ ಮಾತು ಏತಕ್ಕೆ?

ತಾವು ಹಣವನ್ನು ಕಳುಹಿದುದಕ್ಕೋಸ್ಕರ, ತುಂಬ ಕೃತಜ್ಞನಾಗಿದ್ದೇನೆ. ನನ್ನ 'ಹೋಟೇಲಿನ' ಖರ್ಚನ್ನು ಕೊಟ್ಟು, ಉಳಿದುದನ್ನು 'ಸೇವಿಂಗ್ಸ್ ಬ್ಯಾಂಕಿ'ನಲ್ಲಿ ಭದ್ರವಾಗಿರಿಸುತ್ತೇನೆ.

ಇಂತೀ ವಿಜ್ಞಾಪನೆಗಳು.—'

ಎಂದು ಓದಿ,) 'ಇದೇನು? ಕೇಡುಗಾಲ! ಅವನಿಗೇನು ಹುಚ್ಚು ಹಿಡಿಯಿತೆ?—ಆಹ! ಗೊತ್ತಾಯಿತು. ನನ್ನಿಂದ ಇನ್ನೂ ಕೊಂಚ ಹಣವನ್ನು ಸುಲಿಗೆಮಾಡಬೇಕೆಂದಿದ್ದಾನೆ! ಇದೆಂತಹ ದುರಾಶೆ? ಇನ್ನೂ ಹೆಚ್ಚಾಗಿ ಹಣವನ್ನು ಹಾಳುಮಾಡುವುದಕ್ಕಿಂತ, ನನ್ನ ಮನೆಯಲ್ಲಿ ನನ್ನ ಮಗಳು ಒಬ್ಬಳೇ ಬೆಳೆದು ಬಾಳಿಕೊಂಡಿರಲಿ! ಅವನು ನನ್ನ ಭಾಗಕ್ಕೆ ಇಲ್ಲವೇ ಇಲ್ಲವೆಂದು ತಿಳಿದುಕೊಳ್ಳುತ್ತೇನೆ. ನನ್ನ ಮಗಳು! ನನ್ನ ಮನೆಯಲ್ಲಿಯೇ ಇಟ್ಟುಕೊಳ್ಳುತ್ತೇನೆ. ಬೇಕಾದರೆ, ಬಂದಾನು.—ಐನೂರು ರೂಪಾಯಿ! ಇದೆಂತಹ ಹುಚ್ಚು? ನಾನು ಬದುಕಿದ್ದರೆ, ಅವನಿಗೆ ಒಂದು ಕಾಸನ್ನೂ ತೋರಿಸಲಾರೆನು. ಮದುವೆಗೆ ಎಂಟುನೂರು! ಋತುಶಾಂತಿಗೆ ಐನೂರು!! ಮತ್ತೊಂದಕ್ಕೆ ಒಂದು ಸಾವಿರ!!! ಹಾಳಾಗಿ ಹೋಗಲಿ! ಇದೇನಿದು? ಏಕಾಏಕಿ! ಇಷ್ಟೊಂದು ತೊಂದರೆಯಾದೀತೆಂದು ತಿಳಿದಿರಲಿಲ್ಲ. ಅದಕ್ಕೋಸ್ಕರ ಒಂದು ಕಾಸನ್ನೂ ನಾನು ಹಾಳು ಮಾಡಲಾರೆನು!!—(ಅಷ್ಟರಲ್ಲಿ ಅವನ ಹೆಂಡತಿಯು ಪ್ರವೇಶಿಸುವಳು.)

**ಹೆಂಡತಿ:**—'ಇದೇನಿದು? ಏನು ಸಮಾಚಾರ? ಏನಾಯಿತು?'

**ಗಂಡ:**—'ಏನೇ? ಹಾಳಾಯಿತು! ನಿನ್ನಳಿಯ—ಸತ್ತು ಹೋದ!!'

**ಹೆಂಡತಿ:**—'ಏನು? ಏನು? ಸತ್ತರೇ? ಅಯ್ಯೋ! ನನ್ನ ಮಗಳೇ!!'

**ಗಂಡ:**—'ಥೂ! ಹಂದಿ! ಮುಚ್ಚು ಬಾಯಿ. ನಿನ್ನಳಿಯನು ಗುಂಡುಕಲ್ಲಿನ ಹಾಗಿದ್ದಾನೆ! ಆದರೆ, ನಿನ್ನ ಭಾಗಕ್ಕೂ ನನ್ನ ಭಾಗಕ್ಕೂ ಸತ್ತ ಹಾಗೆಯೇ ಸರಿ!! ಅವನು ಹೋಗಿ, ನನ್ನ ರೂಪಾಯಿ ನನ್ನ ಕೈಯಲ್ಲಿದ್ದರೆ ಸಾಕಾಗಿತ್ತು!!!—ಏನಿದು? ಈ ಹುಚ್ಚು! ಮದುವೆಗಾಗಿ ಅವನಿಗೆ ಕೊಟ್ಟ ಎಂಟನೂರು ರೂಪಾಯಿ ಸಾಕಾಗಲಿಲ್ಲ! ಅವನಿಗೆ ಸ್ವಲ್ಪ ತಲೆ ತಿರುಗಿದೆ!! ಅವನಿಗಿಂತ, ಕಟುಕನಾದರೂ ವಾಸಿ! ಐನೂರು ರೂಪಾಯಿಯನ್ನು ಪ್ರಸ್ತಕ್ಕೆಂದು ಕೇಳುವುದಕ್ಕೆ ಅವನಿಗೇಕೆ ನಾಚುಗೆ ಯಿಲ್ಲ? ಒಂದೇ ಒಂದು ಕಾಸನ್ನೂ ಇನ್ನು ನಾನು ಕೊಡಲಾರೆ.—ಅದೇತಕ್ಕೇ! ಗೂಬೆಯ ಹಾಗೆ ಕಣ್ಣು ಬಿಟ್ಟುಕೊಂಡು ನಿಂತಿದ್ದೀಯೇ! ಈಗೇನು ಮಾಡೋಣ? ನೀನೇ ಹೇಳು. ಮಗಳನ್ನೂ ಮನೆಯಲ್ಲಿಟ್ಟು ಕೊಂಡು ಹಣವನ್ನೂ ಉಳಿಸಿಕೊಳ್ಳೋಣವೇ? ಅಥವಾ, ಎರಡನ್ನೂ ಕೊಟ್ಟು ಬಿಡೋಣವೇ?'

**ಹೆಂಡತಿ:**—'ಇದೇನು ಯದ್ವಾತದ್ವಾ ಮಾತನಾಡುತಿದ್ದೀರಿ? ಸ್ಥೂಲ ಸೂಕ್ಷ್ಮವನ್ನು ತಿಳಿಯದೆಯೇ, ಸುಮ್ಮನೆ ಹೀಗೆ ಕೂಗಾಡುವುದನ್ನು ನೋಡಿದರೆ, ಹುಚ್ಚರೆಂತಲೇ ಹೇಳಬೇಕು! ಇದೇನು ನಾಚುಗೆಗೇಡು? ಒಂದು ಮಾತನ್ನೂ ಆಡಬೇಡಿ. ನನ್ನ ಮಗಳ ಬಾಳು ಬದುಕು ನನ್ನ ಕೈಯಲ್ಲಿಯೇ ಇರಬೇಕು. ಅದನ್ನು ಹೇಗೆ ಕಾಪಾಡಬೇಕೆಂಬುದನ್ನು ನಾನು ಬಲ್ಲೆನು! ನೀವೀಗ ಕೇಳುವುದೇನು? 'ನಮ್ಮ ಮಗಳನ್ನೂ ಮನೆ ಯಲ್ಲಿಟ್ಟುಕೊಂಡು ಕೈಯಲ್ಲಿ ಹಣವನ್ನೂ ಇಟ್ಟುಕೊಳ್ಳೋಣವೆ—ಅಥವಾ ಎರಡನ್ನೂ ಕೊಟ್ಟುಬಿಡೋಣವೆ?'–ಎಂದಲ್ಲವೆ? ಯಾವುದೂ ಹೇಗಾ ದರೂ ಇರಲಿ! ಅದು ನನಗೆ ಬೇಕಿಲ್ಲ. ನಮಗೆ ಮಾನವುಂಟಾದರೆ ಸಾಕು. ಏನು? ನಮ್ಮಂತಹ ಪುರಾತನದ, ಪ್ರಸಿದ್ಧವಾದ ಮನೆತನ

ದವರು, ಅಳಿಯನು ಬದುಕಿದ್ದರೂ, ಮಗಳನ್ನು ಮನೆಯಲ್ಲಿ ಇಟ್ಟು ಕೊಂಡರೆಂಬ ಅಪವಾದಕ್ಕಿಂತಲೂ ಹೆಚ್ಚಾದ ಅವಮಾನವು ಬೇರೆ ಯೇಸಿದೆ? ನಾನು ಸೀರೆಗೆ ಹೇಗೆ ಹೋಗಲಿ? ಸಂಗಾತಿಯರಿಗೆ ಹೇಗೆ ಮುಖವನ್ನು ತೋರಿಸಲಿ? ಬೇಡಿ! ದುಡುಕಬೇಡಿ! ಸಾಕಷ್ಟು ತಾಳ್ಮೆ ಯನ್ನು ತಂದುಕೊಳ್ಳಿ. ಹುಡುಗನ ತಂದೆಯೊಡನೆ ಮಾತನಾಡಿ, ಅನು ಕೂಲವಾಗಿ ಏನಾದರೂ ಇತ್ಯರ್ಥಮಾಡಿಕೊಳ್ಳಿ. ಯಾವಾಗ ಮಗಳಿಗೆ ತಂದೆಯಾದಿರೋ, ಮುಂದೆ ಅವಳು ಬದುಕುವ ಮಾರ್ಗವನ್ನು ನೋಡಲೇ ಬೇಕು. ಮನೆತನದ ವಂಶಪಾರಂಪರ್ಯವಾದ ದೊಡ್ಡಸ್ತಿಕೆ ಯನ್ನು ಕಾಪಾಡುವುದಕ್ಕಿಂತ, ಹೆಚ್ಚು ಘನವಾದ ಕಾರ್ಯವಾವುದಿದೆ? ಅದೀಗ ಬುದ್ಧಿವಂತಿಕೆ!—ಸಿಟ್ಟುಮಾಡಿಕೊಳ್ಳಬೇಡಿ. ನಿಮ್ಮ ಹಣವೆಲ್ಲ ನಿಮ್ಮ ಅಜ್ಜಂದಿರು ಸಂಪಾದಿಸಿದುದು. ಅದು ನಿಮ್ಮ ಸ್ವಂತವಲ್ಲ. ವಂಶದ ಘನತೆಯನ್ನು ಉಳಿಸಿಕೊಳ್ಳುವುದಕ್ಕೆ, ವಿತರಣೆಯಿಂದ ಅದನ್ನು ವಿನಿಯೋಗಿಸದಿದ್ದರೆ, ಪಿಶಾಚವಾಗಿ ಅವರು ಬಂದು, ನಿಮ್ಮನ್ನೆಂದಿಗೂ ಕಾಡದೆ ಬಿಡರು'.

**ಗಂಡ:**—'ಒಳ್ಳೆಯ ತತ್ವಬೋಧೆ! ಸಾಕುಸಾಕು! ಮಾತಾಡಬೇಡ! ನನ್ನ ಮಗಳ ಪ್ರಸ್ತವನ್ನು ನಾನೆಂದಿಗೂ'—

**ಹೆಂಡತಿ:**—(ಅಧೋಕ್ತಿಯಲ್ಲಿ) 'ಸುಮ್ಮನೆ ರಗಳೆ ಮಾಡಬೇಡಿ;—ಅಂದರೆ! ನಮ್ಮ ನೆರೆಯವರು ನಗುವುದಕ್ಕೆ ಚೆನ್ನಾಗಿ ಮಾರ್ಗ ಮಾಡು ತ್ತೀರಿ! ಹಣವನ್ನು ಬೇಗನೆ ಸಿದ್ಧಮಾಡಿ. ನಮ್ಮ ಪುರಾತನವಾದ ವಂಶದ ಘನತೆಗಿಂತ, ಐನೂರು ರೂಪಾಯಿ ಹೆಚ್ಚಲ್ಲ'.

**ಗಂಡ:**—'ಐನೂರು—ರೂಪಾಯಿ! ಐ-ನೂ-ರು ರೂ-ಪಾ-ಯಿ!!

* * * * *

[**ಗೋಪಾಲಯ್ಯರ ತಂದೆಯ ಮನೆ. ತಂದೆತಾಯಿಗಳಿಬ್ಬರೂ ಕುಳಿತಿರುವರು.**]

**ತಂದೆ:**—'ಒಳ್ಳೆಯ ಗಟ್ಟಿಗ! ತಂದೆಗೆ ತಕ್ಕ ಮಗ! ಬೆರಳನ್ನು ತೋರಿಸಿದರೆ, ಹಸ್ತವನ್ನೇ ನುಂಗಿದ!—ನನಗೂ ಸ್ವಲ್ಪ ಅದೇ ರೀತಿ

ಅಭಿಪ್ರಾಯವಿತ್ತು. ರಾಮಚಂದ್ರಯ್ಯನು ಸ್ವಲ್ಪ ಹಣವನ್ನು ಕೊಡಲು, ಅವನಿಗೇನು ಬಂದಿರುವುದು? ಅವನಿಗೆ ಮದುವೆಗೆ ಇನ್ನಾರೂ ಇಲ್ಲ. ಇರುವ ಒಬ್ಬ ಮಗಳಿಗೋಸ್ಕರ, ಅಲ್ಪಸ್ವಲ್ಪ ಹಣವನ್ನು ಏತಕ್ಕೆ ವೆಚ್ಚ ಮಾಡಕೂಡದು? ನ್ಯಾಯ! ನ್ಯಾಯ! ಸಹಜ!! ಏಹಿತ!!!'

**ತಾಯಿ:** —'ಈಗ ಮೊನ್ನೆ, ಎರಡು ತಿಂಗಳ ಕೆಳಗೆ, ನಮ್ಮ ನೆರೆ ಮನೆಯ ಆಚೆಯ ಮನೆಯವನು ಪ್ರಸ್ತಕ್ಕೋಸ್ಕರ ಇನ್ನೂರು ರೂಪಾಯಿ ಯನ್ನು ಕೇಳಿದನಲ್ಲವೆ? ಈಗ ಇದು ಸಾಧಾರಣವಾಗಿ ಹೋಯಿತು. ಇದಕ್ಕಾಗಿ ನಮ್ಮನ್ನು ಯಾರೂ ಬಯ್ಯಲಾರರು'

**ತಂದೆ:**—'ಬಯ್ಯುವುದೆ? ಕೆಟ್ಟರು, ಕೆಟ್ಟರು! ಹಣವು—ಇಗೋ ಇಲ್ಲಿದೆ.' (ಚಪ್ಪಾಳೆ ಹಾಕಿ,) 'ಇತರರು ನಮ್ಮನ್ನು ಏನು ಬೇಕಾದರೂ ಹೇಳಲಿ. ಒಂದು ಹುಲ್ಲುಕಡ್ಡಿಯನ್ನೂ ಲಕ್ಷ್ಯಮಾಡಲಾರೆ.'

**ತಾಯಿ:**—(ಮುಂದೆ ನೋಡಿ,) 'ಇದೇನಿದು? ರಾಮಚಂದ್ರಯ್ಯರು ಈ ಕಡೆಗೇ ಬರುತ್ತಿದ್ದಾರೆ! ಅವರ ಮುಖದಲ್ಲೇನೋ, ಕೋಪವು ಉಕ್ಕುತ್ತಿದೆ. ನೋಡಿನೋಡಿ! ಅವರ ಮನಸ್ಸೆಷ್ಟು ಆಳವಿರುವುದೋ,— ಭೇದಿಸಿ.'—(ಒಳಗೆ ಹೋಗುವಳು.)

[ರಾಮಚಂದ್ರಯ್ಯರು ಪ್ರವೇಶಿಸುವರು.]

**ತಂದೆ:**—'ನಮೋನಮಃ! ಮಹಾಸ್ವಾಮಿ! ಇದೇನು ಅಪರೂಪ ದರ್ಶನ? ಇದೇ ಸುದಿನವೆಂದು ಭಾವಿಸುತ್ತೇನೆ.'

**ರಾಮ:**—'ಸುದಿನವೆ? ನಾಶವಾಯಿತು! ದುರ್ದಿನವೆಂದು ಹೇಳಿ. ಮನುಷ್ಯರು ಹೃದಯದಲ್ಲಿ ದುರಾಲೋಚನೆಯಿಂದ ತುಂಬಿತುಳುಕು ತ್ತಿದ್ದರೂ, ಹೊರಗಡೆಯಲ್ಲಿ ಕೇವಲಸಾಧುಗಳಂತೆ ನಟಿಸುತ್ತಿರುವುದು ಕೇವಲ ಆಶ್ಚರ್ಯವಲ್ಲವೆ? ಇಗೋ! ನೋಡಿ; ಮಹಾಸ್ವಾಮಿ!—ನಿಮ್ಮ ಮಗನ ಕಾಗದ! ಅವನು ತಮ್ಮ ಅಭಿಪ್ರಾಯಕ್ಕೆ ಅನುಸಾರವಾಗಿಯೇ ನಡೆದುಕೊಳ್ಳುತ್ತಿದ್ದಾನೆಂದು ನಾನು ತಿಳಿಯಬೇಕು ತಾನೆ?'

**ತಂದೆ:**—(ಓದಿ ನೋಡಿ,) 'ಮಹಾಸ್ವಾಮಿ! ಕ್ಷಮಿಸಬೇಕು. ಈ ವಿಧವಾದ ದೋಷಾರೋಪಣೆಗೆ ಎಂದಿಗೂ ನಾನು ಅರ್ಹನಲ್ಲ. ಈ

ರೀತಿಯಾಗಿ ಬರೆಯಬೇಕೆಂದು ನಾನು ನನ್ನ ಮಗನಿಗೆ ನಿಜವಾಗಿಯೂ ಎಂದೂ ಹೇಳಲಿಲ್ಲ. ಈಗ ಅವನು ಬರೆದಿರುವುದರಿಂದ, ಅವನ ಇಷ್ಟಕ್ಕೆ ವಿರೋಧವಾಗಿ ನಾನು ನಡೆಯುವುದಿಲ್ಲ. ತಾನು ಹೀಗೆ ನಡೆಯ ಬೇಕೆಂಬುದನ್ನು ಅವನು ಚೆನ್ನಾಗಿ ಬಲ್ಲವನಾಗಿದ್ದಾನೆ. ಅವನಿಗೆ ಯಾರೂ ಹೇಳಿಕೊಡಬೇಕಾಗಿಲ್ಲ. ಅಷ್ಟಕ್ಕೆ, ಅವನೇನು ವಿದ್ಯಾವಂತ ನಲ್ಲವೆ?'

**ರಾಮು:**—'ವಿದ್ಯಾವಂತ! ನಾಶವಾಯಿತು!—ಸರಿಸರಿ! ಒಳ್ಳೆಯ ವಿದ್ಯಾವಂತ! ಎಫ್. ಏ, ಬೀ. ಏ, ಪರೀಕ್ಷೆಮಾಡಿಬಿಟ್ಟರೆ, ಒಳ್ಳೆಯ ವಿದ್ಯಾವಂತನಾದನಲ್ಲವೆ?—ಇಲ್ಲಿ ನೋಡಿ; ಮಹಾಸ್ವಾಮಿ! ವಿದ್ಯೆ ಯೆಂಬುದು ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದರಲ್ಲಿಲ್ಲ. ವಿದ್ಯಾವಂತ ನಾಗಬೇಕಾದರೆ, ಇನ್ನೂ ಬಹಳ ಬೇಕು. ನಿಮ್ಮ ಮಗನಂತಹ ಹುಚ್ಚು ಮುಂಡೆಯನ್ನು ಎಲ್ಲಿಯೂ ನಾನು ನೋಡಲಿಲ್ಲ. ಇದುವರೆಗೂ, ಅವನು ಓದಿದುದೆಲ್ಲಾ ವ್ಯರ್ಥ! ನಿಜವಾಗಿಯೂ, ಸತ್ಯವಾಗಿಯೂ ವ್ಯರ್ಥ ವಾದುದೇ ಸರಿ. ಔದಾರ್ಯ ಗುಣವನ್ನೇ ಅವನರಿಯ. ಅವನಿಗೂ ವೇದಾಂತವಿಚಾರಕ್ಕೂ ಬಹುದೂರ. ಇವೆರಡೂ ಇಲ್ಲದಿದ್ದರೆ, ಮನುಷ್ಯ ನಾದವನೂ ಮೃಗಗಳಿಗೆ ಸಮಾನನಲ್ಲವೆ? ಬರುಬರುತ್ತ, ಮನಸ್ಸಿನಲ್ಲಿ ದುರಾಶೆಯನ್ನೇ ಹೆಚ್ಚಿಸಿಕೊಂಡು, ಘನತೆ, ಗಾಂಭೀರ್ಯ, ಸೌಜನ್ಯ, ಮೊದಲಾದ ಸದ್ಗುಣಗಳನ್ನು ಅವನು ಮರತೇ ಬಿಟ್ಟಿದ್ದಾನೆ. ಅವನಿಗೆ ವಿದ್ಯಾಭ್ಯಾಸವನ್ನು ಮಾಡಿಸದಿದ್ದರೆ, ಚೆನ್ನಾಗಿತ್ತು. ಈಗ ಬಂದಿರುವಷ್ಟು ದುರ್ಗುಣಗಳು ಆಗ ಅವನಿಗೆ ಬರುತ್ತಿರಲಿಲ್ಲ. ಒಳ್ಳೆಯ ಮಾರ್ಗವನ್ನು ತಿರಸ್ಕರಿಸಿ, ಸ್ವಪ್ರತಿಷ್ಠೆಯೆಂಬುದನ್ನು ಅವನು ಚೆನ್ನಾಗಿ ಅಭ್ಯಾಸಮಾಡಿ ದ್ದಾನೆ. ನಿಮ್ಮ ಮಗನು—'

**ತಂದೆ:**—'ಸಾಕುಸಾಕು! ನಿಲ್ಲಿಸಿ; ಸ್ವಾಮಿ! ನಮಗೂ ನಿಮಗೂ ಅನೇಕವಿಧದಲ್ಲಿ ಬಾಂಧವ್ಯವಿರುವುದರಿಂದ, ನಿಮ್ಮನ್ನು ನನ್ನ ಮನೆಯಿಂದ ಹೊರಕ್ಕೆ ಒದ್ದೋಡಿಸದೆ ಬಿಟ್ಟಿದ್ದೇನೆ. ನೀವು ಅಷ್ಟು ವಿಪರೀತವಾಗಿ

ಬಯ್ಯುತ್ತಿರುವವನು ನನ್ನ ಮಗನು. ನಿಮ್ಮ ವಿಷಯದಲ್ಲಿ ಎಷ್ಟೇ ಗೌರವವನ್ನು ತೋರಿಸಬೇಕಾದರೂ, ಈ ವಿಷಯದಲ್ಲಿ ಮಾತ್ರ ನನ್ನ ಕೋಪವನ್ನು ತಡೆಯಲಾರೆನು. ನನ್ನ ಮಗನು ನನಗೆಷ್ಟು ಸಂಬಂಧವೋ ನಿಮಗೂ ಅಷ್ಟೇ ಸಂಬಂಧ. ಒಂದು ಪಕ್ಷ, ಯೋಚಿಸಿದರೆ, ನನಗಿಂತಲೂ ನಿಮಗೇ ಹೆಚ್ಚು. ನಿಮಗಿರುವಳು ಒಬ್ಬಳೇ ಮಗಳು. ಬೇಕಾದಷ್ಟು ಹಣವಿದೆ. ಅವರಿಬ್ಬರಿಗೂ ಸುಖವಾಗಿರುವಂತೆ ಮಾಡುವುದೆಲ್ಲವೂ ನಿಮ್ಮ ಕೈಯಲ್ಲಿದೆ. ಹೀಗಾಗಿಯೂ, ನಿಮಗೇನೋ ಅವರ ಸೌಖ್ಯಕ್ಕಿಂತಲೂ, ರೂಪಾಯಿಗಳಲ್ಲಿ ವಿಶೇಷವಾದ ಪ್ರೀತಿಯಿರುವುದೆಂದು ತಿಳಿಯುತ್ತೇನೆ. ನಿಮ್ಮ ಮಗಳ ಸೌಖ್ಯಕ್ಕೆ ಕುಂದಕ ಬರುವ ಸಂದರ್ಭದಲ್ಲಿ, ಐದು ನೂರು ರೂಪಾಯಿಗಳಲ್ಲ;—ಐವತ್ತು ನೂರು ಬೇಕಾದರೂ, ಅನುಮಾನವಿಲ್ಲದೆ ವೆಚ್ಚಮಾಡುವಿರೆಂದು ತಿಳಿದಿದ್ದೆ. ತಪ್ಪಾಯಿತು! ನಿಮ್ಮ ಮನಸ್ಸನ್ನು ನೋಯಿಸುವುದಕ್ಕೆ ನನಗೇನೂ ಇಷ್ಟವಿಲ್ಲ. ನಿಮ್ಮಂತಹ ಕೃಪಣರ ಸಂಗಡ ಸಂಬಂಧಮಾಡಿದುದೇನೋ ಆಗಿಹೋಯಿತು. ದೈವಯತ್ನ! ಇನ್ನು ಮೇಲೆ, ನನ್ನ ಮಗನನ್ನು ಖಂಡಿತವಾಗಿಯೂ ನಿಮ್ಮ ಬಳಿಗೆ ಸುಳಿಯಗೊಡುವದಿಲ್ಲ.'

**ರಾಮು:**—'ನಿಮ್ಮ ಸವಿನುಡಿಗಳು ಸಾಕು! ನಿಲ್ಲಿಸಿ; ಮಹಾಸ್ವಾಮಿ! ನೀವು ಹೇಳಿದುದರಲ್ಲಿ ಒಂದು ಮಾತಾದರೂ ನಿಜವಲ್ಲವೆಂಬುದು ನನಗೆ ಗೊತ್ತಿದೆ. ಗುಟ್ಟಿನ ಮಾತೇನಂದರೆ:—ನನ್ನಿಂದ ನೀವು ಸಾಧ್ಯವಾದಷ್ಟೂ ಸೆಳೆಯಬೇಕು! ಇಲ್ಲದಿದ್ದರೆ, ನಿಮಗೆ ನಿದ್ದೆ ಬರುವುದಿಲ್ಲ! ಆಗಲಿ! ಮಹಾಸ್ವಾಮಿ! ಇನ್ನೇನು ಹೇಳಲಿ? ಹೆಣ್ಣು ಮಗಳು ಹುಟ್ಟಿದುದು ನನ್ನ ತಪ್ಪೇ ಸರಿ. ಈಗ ನಿಮಗೆ ಐನೂರು ರೂಪಾಯಿಗಳನ್ನು ತೆಗೆದುಕೊಳ್ಳಬೇಕೆಂದು ತಾನೇ ಇಷ್ಟ? ಆಗಲಿ! ಯತ್ನವಿಲ್ಲ. ಕೊಡುತ್ತೇನೆ. ಇನ್ನು ಮುಂದೆ ನೀವು ಹೆಚ್ಚಾಗಿ ಕೇಳುವುದಿಲ್ಲವೆಂಬುದಕ್ಕೆ ಭರವಸೆಯೇನು?—ಅದು ಹೋಗಲಿ! ಇನ್ನೇನು? ನನ್ನ ಕೋಪದಿಂದಲೇ ಈಗ ನಾನು ಶಾಂತನಾಗಬೇಕಾಯಿತು. ಆದರೆ

ಒಬ್ಬ ಬಡವನಾದ ವೈದಿಕಬ್ರಾಹ್ಮಣನನ್ನು ಕರೆತಂದು, ಅವನಿಗೆ ನನ್ನ ಮಗಳನ್ನು ಮದುವೆಮಾಡಿಕೊಡಲಿಲ್ಲವೆಂದು ಈಗ ವ್ಯಸನವಾಗಿದೆ. ಅವನಾಗಿದ್ದರೆ, ಇಂತಹ ದುರಾಶೆಯನ್ನು ತೋರಿಸುತ್ತಿರಲಿಲ್ಲ. ನಾವು ಮಾಡಿದ ಉಪಕಾರಕ್ಕೆ ಕೃತಜ್ಞನಾಗಿಯೇ ಇರುತ್ತಿದ್ದನು.—ನಿಮ್ಮ ಮಗನು ವಿದ್ಯಾವಂತ! ಬಲು ಗಟ್ಟಿಗ! ಘನತೆ, ಗಾಂಭೀರ್ಯ, ಇವುಗಳನ್ನುಳಿದು,— ಓಹೋ! ಮರೆತೆ! ತಿರಿಗೂ ನಿಮಗೆ ವಿರೋಧವಾಗಿ ಮಾತನಾಡಲು ಆರಂಭಿಸಿದೆನಲ್ಲಾ? ಕ್ಷಮಿಸಿ! ದಯವಿಟ್ಟು ನನ್ನನ್ನು ಒದ್ದೋಡಿಸ ಬೇಡಿ.'—

**ತಂದೆ:**—'ಮಹಾಸ್ವಾಮಿ! ಕ್ಷಮಿಸಬೇಕು. ನಿಮ್ಮ ಸಂಗಡ ಹೀಗೆ ಕೋಪದ ಮಾತುಗಳನ್ನಾಡಬೇಕಾದುದಕ್ಕೆ ವ್ಯಥೆಪಡುತ್ತೇನೆ. ನಾನು ಹೇಳಿದ ಮಾತುಗಳಿಂದ ನಿಮ್ಮ ಮನಸ್ಸು ನೊಂದಿದ್ದರೆ, ನನಗೆ ಮತ್ತಷ್ಟು ವ್ಯಥೆಯಾಗುವುದು. ವಿದ್ಯೆಯ ವಿಷಯವಾಗಿ, ತಮ್ಮಂತಹ ದೊಡ್ಡವರೊಡನೆ ವಿವಾದಮಾಡುವುದಕ್ಕೆ ನನಗೆ ಶಕ್ತಿ ಸಾಲದು. ಹಾಗೆ ವಿವಾದಮಾಡುವ ಇಷ್ಟವೂ ನನಗಿಲ್ಲ. ಆದರೆ, ಇಷ್ಟು ಹೇಳುತ್ತೇನೆ. ಈಗಿನ ಕಾಲದ ಯೌವನಸ್ಥರು ಪಾಠಶಾಲೆಯಲ್ಲಿ ವಿದ್ಯೆಯೊಡನೆ ಎಷ್ಟೋ ದುರ್ಗುಣಗಳನ್ನು ಕಲಿತಾಗ್ಯೂ, ಅವುಗಳೆಲ್ಲವನ್ನೂ ಮರೆಯಿಸುವಂತೆ, ಅಮೂಲ್ಯಗಳಾದ ಅನೇಕ ತತ್ವಗಳನ್ನೂ ಕಲಿಯುತ್ತಾರೆ. ಇದು ನನ್ನ ನಿಶ್ಚಿತವಾದ ಅಭಿಪ್ರಾಯ. ಇದನ್ನೆಂದಿಗೂ ನಾನು ಬದಲಾಯಿಸ ಲಾರೆನು. ನೀವು ನನ್ನನ್ನು ಬಲವಂತ ಮಾಡದಿದ್ದರೆ, ಇದನ್ನು ಹೇಳು ತ್ತಲೂ ಇರಲಿಲ್ಲ.'

**ರಾಮು:**—'ವಿದ್ಯೆಯಲ್ಲಿಯೂ ತತ್ವಗಳು! ತಲೆಯನ್ನು ಪೂರ್ತಿಯಾಗಿ ಬೋಳು ಮಾಡಿಕೊಳ್ಳುವುದು ಒಂದು ತತ್ವ! ಚುಟ್ಟಾ ಸೇದುವುದೂ ಒಂದು ದೊಡ್ಡ ತತ್ವ!! ಹೆಂಡದಂಗಡಿಯನ್ನು ಹೋಗುವುದು ಎಲ್ಲಕ್ಕಿಂ ತಲೂ ಹೆಚ್ಚಾದ ತತ್ವ!!! ಇದೆಲ್ಲಾ ದೇವತೆಗಳು ಒಪ್ಪತಕ್ಕದ್ದು! ಸಾಕು; ಸ್ವಾಮಿ! ಬಿಡಿಬಿಡಿ! ಇಂತಹ ವಿಷಯಗಳಲ್ಲಿ ಮಾತನಾಡಲಾರಂಭಿಸಿದರೆ,

ನನಗೆ ನನ್ನ ಮಗಳನ್ನೇ ಕೊಂದು ಹಾಕುವಷ್ಟು ಕೋಪವು ರೇಗಿಹೋಗು ತ್ತದೆ. ಅದು ಹೋಗಲಿ! ನಿಮ್ಮ ಮಗನಿಗೆ ನಾನು ಹಣವನ್ನು ಕೊಡ ಲೊಪ್ಪಿದೆನೆಂದು ಕಾಗದವನ್ನು ಬರೆಯಿರಿ. ಶೋಭನ ಪ್ರಸ್ತವು ಶೀಘ್ರ ವಾಗಿಯೇ ಆಗಿಹೋಗಲಿ!' (ಹೋಗುವನು.)

**ತಂದೆ:**—'ಭಲೇ! ಭೇಷ್! ಒಳ್ಳೆಯ ನಾಟಕ!—ಆಹಾ! ಹಾ! ಹಾ! ಜಿಪುಣಾಗ್ರೇಸರ!' (ಹೆಂಡತಿಯು ಪ್ರವೇಶಿಸುವಳು.) ನೋಡಿದೆಯೇನೆ? ಈಗ ನಮ್ಮ ಆಸ್ತಿಗೆ ಐನೂರು ರೂಪಾಯಿ ಸೇರಿಹೋಯಿತು!'

**ಹೆಂಡತಿ:**—'ಐನೂರೆ? ಆಗಲಿ! ಪಾತ್ರೆ ಪದಾರ್ಥ, ಬಟ್ಟೆಬರೆ, ಹಾಸುಗೆ ಹೊದಿಗೆ ಇವುಗಳಿಂದ ಇನ್ನೂ ಐನೂರು ರೂಪಾಯಿಗಳು ಬರು ವುದಕ್ಕೆ ಮಾರ್ಗಮಾಡುತ್ತೇನೆ. ಹುಡುಗಿ ಮನೆಗೆ ಬಂದ ಮೇಲೆ, ಅವರ ಜೀವವನ್ನೇ ಹಿಂಡಿ ಹಾಕುತ್ತೇನೆ. ಇಷ್ಟಲ್ಲದೆ, ಬಿಟ್ಟೇನೆ? ಅವರ ಹಣ ವೆಲ್ಲಾ ಈ ಕಡೆಗೆ ಬಂದ ಹೊರತು, ಅವಳನ್ನೂ ಸುಮ್ಮನೆ ಬಿಡುವುದಿಲ್ಲ. ಹಾ! ಹಾ! ಹಾ! ಹಾ! ನಮ್ಮ ಮಗನಿಗಿಂತಲೂ, ಮನೆಯವರೇ ಮೇಲು!! ಅವರೆಲ್ಲರಿಗಿಂತಲೂ, ಸೊಸೆಯೇ ಮೇಲು!!! (ಹೋಗುವರು.)

B. VENKATKRISHNAPPA.

ಸಂಪೂರ್ಣಂ